ವಿತ್ತೀಯ ಕಾರ್ಯ ಕಲಾಪಗಳು

೧೯೯೦-೯೧ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಚರ್ಚೆ
(ಕೈಗಾರಿಕೆ ಇಂಧನ ಮತ್ತು ವಕ್ಫ್ ಇಲಾಖೆಗಳು)

ಉಪಾಧ್ಯಕ್ಷರು.— ಮಾನ್ಯ ಕೈಗಾರಿಕೆ ಮತ್ತು, ವಿದ್ಯುತ್ ಖಾತೆ ಮಂತ್ರಿಗಳು ತಮ್ಮ ಇಲಾಖಾ ಬೇಡಿಕೆಗಳನ್ನು ಸಭೆಯ ಮುಂದೆ ಮಂಡಿಸಬೇಕು.

SRI S. M. YAHYA (Minister of Industries, Energy and Wakfs— Madam Deputy Speaker, On the recommendation of the Governor, I beg to move the following Demands for the consideration of the House.

DEMAND NO. 6—INDUSTRIES
(EXCLUDING SMALL SCALE INDUSTRIES, SERICULTURE AND INDUSTRIAL CO-OPERATIVES

"That a sum not exceeding Rs. 80,83,22,000 on Revenue Account and Rs. 14,02,00000 on Capital Account inclusive of the sum granted on account be granted to the Government to defray the charges which will come in course of payment during the financial year ending 31st day of March 1991 in respect of "Industries (Excluding Small Scale Industries, Sericulture an Industrial Co-operatives)".

DEMAND NO. 8.—SMALL SCALE INDUSTRIES

"That a sum not exceeding Rs. 40,16,60,000 on Revenue Account and Rs. 4,39,45,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1991 in respect of "Small Scale Industries".

DEMAND NO. 9.—INDUSTRIAL CO-OPERATIVES

"That a sum not exceeding Rs. 109,84,000 on Revenue Account and Rs. 50,44 000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1991 in respect of "Industrial Co-operatives".

DEMAND NO. 49.— POWER PROJECTS

"That a sum not exceeding Rs. 67,50,10 000 on Revenue Account and Rs, 3,11,98,00,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1991 in respect of "Power Projects".

DEMAND No. 54.—WAKFS

"That a sum not exceeding Rs. 92,50 000 on Revenue Account inclusive of the some granted on account be granted to the Government to defray the charges which will come in course of payment during the financial year ending 31st day of March 1991 in respect of "Wakfs".

ಶ್ರೀ ಎಂ. ಎಸ್. ಆತ್ಮಾನಂದ (ರೇಷ್ಮೆ ಖಾತೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ

(ಅಭಿಯಾಚನೆ ಕ್ರಮಾಂಕ ೧೦)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇಷ್ಮೆ ವ್ಯವಸಾಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೬೩,೨೩,೧೦,೦೦೦ ರೂಪಾಯಿಂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೮,೯೫,೫೭,೦೦ ರೂಪಾಯಿಂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಉಪಾಧ್ಯಕ್ಷರು.— ಬೇಡಿಕೆಗಳನ್ನು ಮಂಡಿಸಲಾಗಿದೆ. ಈಗ ಅದರ ಮೇಲಿನ ಚರ್ಚೆ ಶ್ರೀ ಏಕಾಂತಯ್ಯನವರು

†ಶ್ರೀ ಎಚ್. ಏಕಾಂತಯ್ಯ (ಚಿತ್ರದುರ್ಗ) —ಮಾನ್ಯ ಉಪಾಧ್ಯಕ್ಷರೇ ಮಾನ್ಯ ಕೈಗಾರಿಕಾ ಸಚಿವರು ಹಾಗೂ ರೇಷ್ಮೆ ಖಾತೆ ರಾಜ್ಯ ಸಚಿವರು ಮಂಡಿಸಿರುವ ಬೇಡಿಕೆಗಳ ಬಗ್ಗೆ ನಾನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಲು ಬಯಸುತ್ತೇನೆ. ಕರ್ನಾಟಕ ರಾಜ್ಯದಲ್ಲಿರುವ ಕೈಗಾರಿಕೆಗಳಿಂದ ರಾಜ್ಯಕ್ಕೆ ಬರತಕ್ಕಂಥ ಆದಾಯ ಏನು ಇದೆ. ಈ ಆದಾಯ ರಾಜ್ಯದ ಆದಾಯದಲ್ಲಿ ಐದನೇ ಒಂದು ಭಾಗದಷ್ಟು ಇದೆ. ಈ ಒಂದು ಕೈಗಾರಿಕೆ ಉತ್ಪಾದನೆಯಿಂದ ಬಂದಂತಹ ಆದಾಯ ಇತ್ತೀಚಿನ ದಿವಸಗಳಲ್ಲಿ ಕುಂಟಿತಗೊಳ್ಳುತ್ತಿದೆ ಈ ಪ್ರವೃತ್ತಿಯನ್ನು ನಾವು ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಕಂಡಿದ್ದೇವೆ. ಅದಕ್ಕೆ ವಿಭಿನ್ನವಾದ ಸುಳಿವು ಏನು ಎನ್ನುವುದು ನಮಗೆ ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಸಿಗಲಿಲ್ಲ. ಅದೇ ರೀತಿಯಿಂದ ಕರ್ನಾಟಕ ರಾಜ್ಯದ ಕೈಗಾರಿಕೆಗಳಿಂದ ಬರುವ ಆದಾಯ ಏನು ಇದೆ, ಆ ಆದಾಯದ ಭಾಗವನ್ನು ನಾವು ಲೆಕ್ಕಕ್ಕೆ ತೆಗೆದುಕೊಂಡರೆ ರಾಷ್ಟ್ರೀಯ ಆದಾಯದ ಕೊಡುಗೆ ಏನು ಇದೆ, ಆ ಕೊಡುಗೆ ಕೂಡ ವರ್ಷೇ ವರ್ಷೇ ಕಡಿಮೆಯಾಗುತ್ತಿದೆ. ಕರ್ನಾಟಕ ರಾಜ್ಯದಲ್ಲಿ ದೊಡ್ಡ ಪ್ರಮಾಣದ ಕೈಗಾರಿಕೆಗಳಲ್ಲಿ ಸುಮಾರು ೪ ಸಾವಿರ ಕೋಟಿ ರೂಪಾಯಿಂಗಳನ್ನು ತೊಡಗಿಸಿದ್ದೇವೆ ಅದೇ ರೀತಿ ೧ ಲಕ್ಷ ೫ ಸಾವಿರಕ್ಕಿಂತಲೂ ಹೆಚ್ಚು ಸಣ್ಣ ಕೈಗಾರಿಕಾ ಘಟಕಗಳು ನಮ್ಮಲ್ಲಿವೆ. ಇಷ್ಟೆಲ್ಲಾ ಇದ್ದರೂ ಸಹಾ ನಮ್ಮ ಕೈಗಾರಿಕಾ ಉತ್ಪನ್ನ ಏನಿದೆ, ಇದು ದಿನೇ ದಿನೇ ಕಡಿಮೆಯಾಗುತ್ತದೆ. ಕಡಿಮೆಯಾಗುವುದಕ್ಕೆ ಕಾರಣ ಏನೆಂದು ಮಾನ್ಯ ಮಂತ್ರಿಗಳಿಗೆ ಕೇಳಿದರೆ, ಅವರು ಹೇಳುತ್ತಾರೆ, ಹೆಚ್ಚು ಆಡಳಿತಾತ್ಮಕವಾದಂಥ ಖರ್ಚು ಇದಕ್ಕೆ ಕಾರಣವೆಂದು ಹೇಳಿದ್ದಾರೆ. ಅದೇರೀತಿ ಲಾಭದಾಯಕವಲ್ಲದ ವ್ಯವಹಾರಿಕ ನೀತಿಯನ್ನು ಅನುಸರಿಸುತ್ತಿರುವುದರಿಂದ ಮತ್ತು ಕೆಲವು ಸಂದರ್ಭಗಳಲ್ಲಿ ಅಸಮರ್ಥತೆಯಿಂದ ಈ ಒಂದು ನಷ್ಟಕ್ಕೆ ಕಾರಣ ಎಂಬ ಮಾತನ್ನೂ ಹೇಳಿದ್ದಾರೆ. ಅದರ ಜೊತೆಯಲ್ಲಿ ಈ ಒಂದು ಸಣ್ಣ ಕೈಗಾರಿಕೆಗಳು ಏನಿವೆ. ಇವು ರೋಗಗ್ರಸ್ತವಾಗಬೇಕಾದರೆ, ಮತ್ತು ನಷ್ಟವಾಗಬೇಕಾದರೆ ಮುಖ್ಯವಾಗಿ ೪ ಕಾರಣಗಳನ್ನು ನಾವು ಹೇಳಬಹುದಾಗಿದೆ. ಮೊದಲನೆಯದಾಗಿ ಆ ಕಾರ್ಖಾನೆಗಳನ್ನು ನಡೆಸಲು ಬೇಕಾದಂಥ ದುಡಿಯುವ ಬಂಡವಾಳವನ್ನು ಸಾಕಷ್ಟು ಪ್ರಮಾಣದಲ್ಲಿ ನೆರವಿನ ರೂಪದಲ್ಲಿ ಕೊಡದಿರುವುದು, ಅದರ ಜೊತೆಯಲ್ಲಿ ಆಡಳಿತ ಮಂಡಳಿಯ ದುರಾಡಳಿತವು ಸಹ ಅನೇಕ ಸಂದರ್ಭಗಳಲ್ಲಿ ಕೈಗಾರಿಕಾ ಘಟಕಗಳು ನಷ್ಟ ಅನುಭವಿಸಲಿಕ್ಕೆ ಅಥವಾ ರೋಗಗ್ರಸ್ತವಾಗಿ ಮುಚ್ಚಲಿಕ್ಕೆ ಕಾರಣವಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ನೆರವಿನ ರೂಪದಲ್ಲಿ ಪಡೆದಂಥ ಹಣ ಅನೇಕ ಸಂದರ್ಭಗಳಲ್ಲಿ ನಾವು ನೀವು ನೋಡಿದ ಹಾಗೆ ಆ ಹಣವನ್ನು ದುರುಪಯೋಗ ಪಡಿಸಿಕೊಂಡ ಕಾರಣದಿಂದ ನಷ್ಟವಾಗಲಿಕ್ಕೆ ಕಾರಣವಾಗಿರುತ್ತದೆ. ಮತ್ತು ಎಲ್ಲದಕ್ಕಿಂತ ಹೆಚ್ಚಿನದಾಗಿ ಯೋಜನೆಗಳನ್ನು ರೂಪು ಮಾಡುವಾಗ ನಾವು ತಯಾರು ಮಾಡುವಂಥ ಯೋಜನಾ ವರದಿ ಏನಿದೆ, ಆ ಯೋಜನಾ ವರದಿಯು ವೈಜ್ಞಾನಿಕವಾದ ರೀತಿಯಲ್ಲಿ ವಸ್ತುಸ್ಥಿತಿಯ ಆಧಾರದ ಮೇಲೆ ರೂಪು ಮಾಡದೇ ಇರುವುದರಿಂದ. ತತ್ಸಂಬಂಧವಾಗಿ ತದನಂತರ ನಾವು ಅನೇಕ ಕಷ್ಟಗಳನ್ನು ನೋಡಿದ್ದೇವೆ. ಈ ರೀತಿಯಾಗಿ ಅನೇಕ ಕಾರಣಗಳಿಂದ ನಾವು ಈ ಒಂದು ಸಣ್ಣ ಮತ್ತು ದೊಡ್ಡ ಪ್ರಮಾಣದ ಕೈಗಾರಿಕಾ ಘಟಕಗಳಿಂದ ಇವತ್ತಿನ ದಿವಸ ನಮ್ಮ ನಿರೀಕ್ಷೆಗೆ ಅನುಗುಣವಾಗಿ ನಾವು ಲಾಭವನ್ನು ಪಡೆಯುತ್ತಿಲ್ಲ ಮತ್ತು ಕೈಗಾರಿಕೆಗಳು ಸಹಾ ಸರಿಯಾಗಿ

ನಡೆಯುತ್ತಿಲ್ಲ. ಈ ಸಣ್ಣ ಕೈಗಾರಿಕಾ ಘಟಕಗಳನ್ನು ಸ್ಥಾಪನೆ ಮಾಡಿದಂದಿನಿಂದ ೧೯೮೩–೮೪ನೇ ಸಾಲಿನವರೆಗೆ ಸುಮಾರು ೪೦ ಸಾವಿರ ಘಟಕಗಳು ಇದ್ದವು. ತದನಂತರ ೧೯೮೯–೯೦ರ ಸಾಲಿನಲ್ಲಿ ಅದರ ಸಂಖ್ಯೆ ೧೫೦೦೦ ಆಗಿದೆ. ಈ ರೀತಿ ಘಟಕಗಳನ್ನು ಸ್ಥಾಪನೆ ಮಾಡುವುದಕ್ಕೆ ನಾವು ಅನುಸರಿಸತಕ್ಕ ನೀತಿಯೇ ಅದಕ್ಕೆ ಕಾರಣವೆಂದು ತಾವೇ ತೀರ್ಮಾನ ಮಾಡಬಹುದು. ಈ ಘಟಕಗಳ ಸಂಖ್ಯೆ ಹೆಚ್ಚಿದಂತೆ ರೋಗಗ್ರಸ್ತ ಘಟಕಗಳ ಸಂಖ್ಯೆಯೂ ಹೆಚ್ಚಾಗಿವೆ. ಈಗ ಸುಮಾರು ೧೬೦೦ಕ್ಕಿಂತಲೂ ಹೆಚ್ಚು ಸಣ್ಣ ಘಟಕಗಳು ರೋಗಗ್ರಸ್ತವಾಗಿವೆ. ದೊಡ್ಡ ಪ್ರಮಾಣದ ಕೈಗಾರಿಕೆಗಳೂ ರೋಗಗ್ರಸ್ತವಾಗಿರುವುದನ್ನು ನಾವು ನೋಡಿದ್ದೇವೆ. ಈ ತರಹ ರೋಗಗ್ರಸ್ತವಾಗಿರುವ ಘಟಕಗಳನ್ನು ಪುನಶ್ಚೇತನಗೊಳಿಸುವುದಕ್ಕೆ ನಾವು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಮಧ್ಯಮ ಮತ್ತು ದೊಡ್ಡ ಪ್ರಮಾಣದ ಕೈಗಾರಿಕಾ ಘಟಕಗಳು ಸಿಕ್ ಇಂಡಸ್ಟ್ರೀ ಎಂದಾದ ಮೇಲೆ ತತ್ಸಂಬಂಧವಾಗಿ ಅವುಗಳನ್ನು ಪುನಶ್ಚೇತನಗೊಳಿಸುವುದಕ್ಕೆ ಬಿ.ಐ.ಎಫ್.ಆರ್. ನಂತಹ ಸಂಸ್ಥೆಗೆ ಕಳುಹಿಸುತ್ತೇವೆ. ಅದೇ ರೀತಿ ಸಣ್ಣ ಕೈಗಾರಿಕಾ ಘಟಕಗಳು ರೋಗಗ್ರಸ್ತವಾದಾಗ ಅವುಗಳನ್ನು ಪುನಶ್ಚೇತನಗೊಳಿಸುವುದಕ್ಕೆ ಅಂಥಾ ಒಂದು ಮಂಡಳಿಯನ್ನು ನೇಮಕ ಮಾಡುವುದು ಅತ್ಯಂತ ಅವಶ್ಯಕವಾಗಿದೆಯೆಂದು ನಾನು ಭಾವಿಸುತ್ತೇನೆ. ಈ ಕೈಗಾರಿಕಾ ಘಟಕಗಳನ್ನು ಹೆಚ್ಚು ಮಾಡಲಿಕ್ಕೆ ಮತ್ತು ಅವುಗಳ ಉತ್ಪನ್ನ ಹೆಚ್ಚು ಮಾಡಲಿಕ್ಕೆ ಅನೇಕ ವಿಧವಾದಂಥ ನೀತಿಗಳನ್ನು ಹಿಂದಿನ ಸರ್ಕಾರ ಹಾಕಿಕೊಂಡಿತ್ತು ಅದೇರೀತಿ ಈಗಿನ ಸರ್ಕಾರವೂ ಹಾಕಿಕೊಳ್ಳಬಹುದು. ಅದಕ್ಕೆ ಬೇಕಾದಂಥ ರಿಯಾಯಿತಿಗಳನ್ನು, ಪ್ರೋತ್ಸಾಹಗಳನ್ನು ಕೊಡುವುದಕ್ಕಾಗಿ ನಮ್ಮ ರಾಜ್ಯದಲ್ಲಿ ೩ ವಲಯಗಳನ್ನಾಗಿ ವಿಂಗಡಣೆ ಮಾಡಲಾಗಿದೆ. ೩೧ ತಾಲ್ಲೂಕುಗಳು ಅಭಿವೃದ್ಧಿ ಪಥದಲ್ಲಿದ್ದರೆ ೧೩೧ ತಾಲ್ಲೂಕುಗಳು ಕೈಗಾರಿಕೆಗಳಿಂದ ಹಿಂದುಳಿದ ಪ್ರದೇಶಗಳೆಂದು ನಾವು ತೀರ್ಮಾನ ಮಾಡಿದ್ದೇವೆ. ಈ ದೇಶದಲ್ಲಿ ಕೈಗಾರಿಕಾ ಉತ್ಪನ್ನಗಳು ಹೆಚ್ಚಿಗೆ ಆಗಬೇಕಾದರೆ, ಕೈಗಾರಿಕೆಗಳಿಂದ ದೊರಕಬೇಕಾದಂಥ ಎಲ್ಲಾ ಸೌಲಭ್ಯಗಳು ಅಂದರೆ ಉದ್ಯೋಗಗಳು ದೊರಕಬೇಕಾದರೆ ಹಾಗೂ ಇವುಗಳು ಸರ್ವಾಂಗೀಣ ಅಭಿವೃದ್ಧಿಯನ್ನು ಹೊಂದಬೇಕಾದರೆ ಇವುಗಳು ನಮ್ಮ ರಾಜ್ಯದ ಎಲ್ಲಾ ಕಡೆಗಳಿಗೂ ವ್ಯಾಪಕವಾಗಿ ಹರಡಬೇಕಾದ ಅವಶ್ಯಕತೆ ಇದೆ. ಅದರಲ್ಲೂ ಹಿಂದುಳಿದ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವವರಿಗೆ ಎಲ್ಲಾ ರೀತಿಯ ರಿಯಾಯತಿ ಮತ್ತು ಪ್ರೋತ್ಸಾಹಗಳನ್ನು ಕೊಟ್ಟು ಆ ಮೂಲಕ ಕನಿಷ್ಟಪಕ್ಷ ಸಣ್ಣ ಪ್ರಮಾಣದ ಕೈಗಾರಿಕೆಗಳಾದರೂ ಈ ಪ್ರದೇಶದಲ್ಲಿ ಬೆಳೆಯಲು ಪ್ರಯತ್ನಗಳನ್ನು ಮಾಡಬೇಕಾಗಿದೆ. ದುರಾದೃಷ್ಟವಶಾತ್ ಎಲ್ಲಾ ಕಾರ್ಖಾನೆಗಳೂ ನಾವು ಎಂಥ ನೀತಿಯನ್ನು ಅನುಸರಿಸಿದರೂ ಸಹ, ಅದರಲ್ಲೂ ದೊಡ್ಡ ಪ್ರಮಾಣದ ಕೈಗಾರಿಕೆಗಳು ಬೆಂಗಳೂರು ಮತ್ತಿತರ ನಗರ ಪ್ರದೇಶಗಳಲ್ಲಿ ಮಾತ್ರ ಸೀಮಿತವಾಗಿ ಉಳಿದುಕೊಂಡಿವೆ. ಈ ಒಂದು ನೀತಿಯು ತಪ್ಪಿ, ಹಿಂದುಳಿದ ಪ್ರದೇಶಗಳಿಗೆ ಹೆಚ್ಚು ಅನ್ವಯವಾಗುವಂಥ ರೀತಿಯಲ್ಲಿ ಕೈಗಾರಿಕೆಗಳು ಸ್ಥಾಪನೆ ಆಗಲು ಎಲ್ಲಾ ರೀತಿಯ ರಿಯಾಯಿತಿಗಳನ್ನು ಮತ್ತು ಪ್ರೋತ್ಸಾಹಗಳನ್ನು ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಈ ಕೈಗಾರಿಕಾ ಸ್ಥಾಪನೆಯು ಕೇವಲ ಉತ್ಪಾದನೆಯನ್ನು ಹೆಚ್ಚು ಮಾಡಿಕೊಳ್ಳುವ ಒಂದೇ ಉದ್ದೇಶದಿಂದ ಕೂಡಿರಬಾರದು. ನಾವು ಅನೇಕ ಸಂದರ್ಭಗಳಲ್ಲಿ ಹೇಳಿದಂತೆ ಕೈಗಾರಿಕೆಗಳ ಸ್ಥಾಪನೆ ಮಾಡುವುದು ಮಾತ್ರ ಮೂಲ ಉದ್ದೇಶವಾಗಿ ಇರಬಾರದು. ಕೈಗಾರಿಕೆಗಳನ್ನು ಹೆಚ್ಚು ಮಾಡುವುದರ ಜೊತೆಯಲ್ಲಿ ಉದ್ಯೋಗಾವಕಾಶಗಳನ್ನು ಕೂಡ ಹೆಚ್ಚಿಗೆ ಮಾಡಿಕೊಳ್ಳಬೇಕಾಗಿದೆ. ನಾವುಗಳು ಹೀಗೆ ಸ್ಥಾಪನೆ ಮಾಡಿರತಕ್ಕಂಥ ಸಾವಿರಾರು ಇಂಥ ಘಟಕಗಳು ಸರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಇಲ್ಲದೇ ಹೋದರೆ ಅವುಗಳನ್ನು ಮುಚ್ಚಬೇಕಾದಂಥ ಪರಿಸ್ಥಿತಿಯು ನಿರ್ಮಾಣವಾಗುತ್ತದೆ. ಇಂಥ ಘಟಕಗಳು ಯಾವ ಕಾರಣಕ್ಕೋಸ್ಕರವಾಗಿ ಮುಚ್ಚಲ್ಪಡುತ್ತವೆ ಎಂಬುದನ್ನು ನೋಡಿ ನಮ್ಮ ಇತಿಮಿತಿಯೊಳಗೆ ಅವುಗಳಿಗೆ ಹೇಗೆ ಪುನಃಶ್ಚೇತನ ಕೊಡುವುದು ಸಾಧ್ಯ ಎಂಬುದನ್ನು ನೋಡಿಕೊಂಡು ಆ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ಅಂತೆಯೇ ಇಂಥ ಕೈಗಾರಿಕೆಗಳಲ್ಲಿನ ಆಡಳಿತ ವರ್ಗದವರು ಮತ್ತು ಅಧಿಕಾರಿ ವರ್ಗದವರು ಕೈಗಾರಿಕೆಯು ಲಾಭದಾಯಕವಾಗಿ ನಡೆದುಕೊಂಡು ಹೋಗುವಲ್ಲಿ ಏನೇನು ಪ್ರಯತ್ನಗಳನ್ನು ಮಾಡಬೇಕೋ ಅವುಗಳನ್ನು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಅನೇಕ ಸಂದರ್ಭದಲ್ಲಿ ಈ ವರ್ಗದವರು ಒಳ್ಳೆಯ ಪ್ರಯತ್ನಗಳನ್ನು ಮಾಡಿ ಉತ್ತಮ ಸಾಧನೆಯನ್ನು ಕಂಡುಕೊಂಡಿದ್ದಾರೆ ಮತ್ತು ಇತರರು ಪ್ರಯತ್ನವನ್ನು ಮಾಡದಿದ್ದ ಕಾರಣದಿಂದಾಗಿ ನಷ್ಟಕ್ಕೆ ಒಳಪಡಿಸಿದ್ದಾರೆ. ಅನೇಕ ಖಾಸಗೀ ಕಾರ್ಖಾನೆಗಳನ್ನು ನಾವು ನೋಡಿದ್ದೇವೆ. ಅವುಗಳು ಧ್ಯೇಯಧೋರಣೆಗಳು ವಿಶಿಷ್ಟವಾಗಿರುತ್ತವೆ. ರಾಜ್ಯ ಸರಕಾರವಾಗಲೀ, ಕೇಂದ್ರ ಸರಕಾರವಾಗಲೀ, ಕೈಗಾರಿಕೆಗಳಿಗೆ ಕೊಡತಕ್ಕಂಥ ಎಲ್ಲಾ ಲಾಭಗಳನ್ನು,

ಸೌಲಭ್ಯಗಳನ್ನು ಪಡೆದುಕೊಂಡು ಮತ್ತು ಇನ್ನೂ ಯಾವ್ಯಾವ ಲಾಭವನ್ನು ಹೊಂದಲಿಕ್ಕೆ ಸಾಧ್ಯ ಅವುಗಳನ್ನೆಲ್ಲಾ ಅನುಭವಿಸಿ ಅನಂತರ ಕಾರ್ಖಾನೆಗಳನ್ನು ಮುಚ್ಚಿ ಬೇರೆ ಕಡೆಗೆ ಹೋಗುವ ಪ್ರವೃತ್ತಿಯನ್ನು ನೋಡುತ್ತಿದ್ದೇವೆ. ಹೀಗೆ ಆಗದಂತೆ ನೋಡಿಕೊಳ್ಳಬೇಕು, ಅಂತೆಯೇ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡತಕ್ಕಂಥವರಿಗೆ ಸೂಕ್ತ ರೀತಿಯಲ್ಲಿ ಉತ್ತೇಜನ ಕೊಡುವಂಥ ಕಾರ್ಯಕ್ರಮಗಳು ಇರಬೇಕು. ಇಂಥ ಖಾಸಗಿ ವಲಯದ ಜನರು ಕಾರ್ಖಾನೆಗಳನ್ನು ಸ್ಥಾಪನೆ ಮಾಡಿ ರಾಷ್ಟ್ರೀಯ ಆದಾಯವನ್ನು ಹೆಚ್ಚಿಸುವ ದಿಸೆಯಲ್ಲಿ ಮತ್ತು ಹೆಚ್ಚು ಹೆಚ್ಚು ಜನರಿಗೆ ಉದ್ಯೋಗವನ್ನು ಕಲ್ಪಿಸಿಕೊಟ್ಟು ತಮ್ಮ ಕಾರ್ಖಾನೆಯನ್ನು ಲಾಭದಾಯಕವಾಗಿ ನಡೆಸಿಕೊಂಡು ಹೋಗುವಲ್ಲಿ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ. ತಾವುಗಳು ಸಹಾಯವನ್ನು ಅನೇಕ ರೀತಿಯಲ್ಲಿ ಕೊಡುತ್ತಿದ್ದೀರಿ. ಈ ವಿಚಾರದಲ್ಲಿ ಹೇಳುವುದಾದರೆ ಕೈಗಾರಿಕಾ ಇಲಾಖೆವ್ಯಾಪ್ತಿಯಲ್ಲಿ ಅನೇಕ ಸಂಘಸಂಸ್ಥೆಗಳು ಬರುತ್ತವೆ. ಸುಮಾರು ೨೯–೩೦ ಇಂಥ ಸಂಸ್ಥೆಗಳು ನಮ್ಮಲ್ಲಿ ಇವೆ. ಈ ಇಲಾಖೆಯ ಬಗ್ಗೆ ಹೆಚ್ಚಾಗಿ ಮಾತನಾಡುವುದಕ್ಕೆ ಸಮಯಾವಕಾಶ ಇಲ್ಲ. ಎನ್‌ಜಿಎಫ್‌ನಿಂದ ಹಿಡಿದು ಸಣ್ಣ ದೊಡ್ಡ ಘಟಕಗಳು ನಮ್ಮಲ್ಲಿ ಬೇಕಾದಷ್ಟು ಇವೆ. ಇವುಗಳಲ್ಲಿ ಆಡಳಿತ ಮಾಡತಕ್ಕ ರೀತಿ ನೀತಿಯಿಂದಾಗಿ ಬಹಳಷ್ಟು ಇಂದು ನಷ್ಟದಲ್ಲಿ ಕೆಲಸ ಮಾಡುತ್ತಿವೆ. ಅವುಗಳು ನಮ್ಮ ಕಾರ್ಯ ವೈಖರಿಯನ್ನು ಒಳ್ಳೆಯ ರೀತಿಯಲ್ಲಿ ಬದಲಾವಣೆ ಮಾಡಿಕೊಂಡಿಲ್ಲ, ಇವುಗಳಲ್ಲಿ ಕೆಲವು ಲಾಭದಾಯಕವಾಗಿ ಕೆಲಸ ಮಾಡಲು ಇವರ ಪರಿಶ್ರಮವು ಕಾರಣವಲ್ಲ. ಅದು ತನ್ನದೇ ಆದ ಕಾರಣಗಳಿಗಾಗಿ ಲಾಭವನ್ನು ಹೊಂದಿರಬಹುದು ಎಂದು ಕೂಡ ಹೇಳ ಬಯಸುತ್ತೇನೆ ಉದಾಹರಣೆಗೆ ಹೇಳುವುದಾದರೆ ಹಟ್ಟಿ ಚಿನ್ನದ ಗಣಿಗೆ ಯಾರನ್ನು ಹಾಕಿದರೂ ಅದು ಲಾಭದಲ್ಲಿ ಕೆಲಸ ಮಾಡುತ್ತದೆ. ಯಾಕೆಂದರೆ ಚಿನ್ನದ ಬೆಲೆಯು ದಿನೇದಿನೇ ಹೆಚ್ಚುತ್ತದೆಯೇ ಹೊರತಾಗಿ ಕಡಿಮೆಯಾಗುವುದಿಲ್ಲ. ಹೀಗಾಗಿ ಅದು ನಷ್ಟದಲ್ಲಿ ಇರಲು ಸಾಧ್ಯವಿಲ್ಲ. ಯಾವುದೇ ಕಾರ್ಖಾನೆ ಇದ್ದರೂ ಅವರು ತಮ್ಮ ಕಾರ್ಯಕ್ಷೇತ್ರವನ್ನು ಸುಸ್ಥಿತಿಯಲ್ಲಿ ಇಟ್ಟುಕೊಂಡು ಪರಿಶ್ರಮ ಪಡಬೇಕು. ಮಾಡುವ ಅನಾವಶ್ಯಕ ವೆಚ್ಚಗಳಿಗೆ ಕಡಿವಾಣ ಹಾಕಬೇಕು. ಉತ್ಪಾದನಾ ವೆಚ್ಚವನ್ನು ಆದಷ್ಟೂ ಕಡಿಮೆ ಮಾಡಿ ಅಧಿಕಾಧಿಕ ಲಾಭವನ್ನು ಪಡೆಯಲು ಎಲ್ಲರೂ ಶ್ರಮ ವಹಿಸಿದರೆ ಮಾತ್ರ ಇದು ಸಾಧ್ಯ ಎಂದು ಹೇಳಬಯಸುತ್ತೇನೆ.

ಅನೇಕ ಸಂದರ್ಭದಲ್ಲಿ ನಾನು ಈಗಾಗಲೇ ಹೇಳಿದಂತೆ ಈ ಕೈಗಾರಿಕೆಗಳನ್ನು ಲಾಭದಾಯಕ ಘಟಕಗಳನ್ನಾಗಿ ಮಾಡಬೇಕಾದರೆ ತಾವು ಮತ್ತೊಂದು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ ಬೇಕಾದಂತಹ ನೀತಿ ರೂಪಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಉದಾಹರಣೆಗಾಗಿ ನನಗೇ ಗೊತ್ತಿರುವಂಥ ಒಂದು ಘಟಕದ ಬಗ್ಗೆ ಹೇಳುತ್ತೇನೆ, ಹಟ್ಟಿ ಚಿನ್ನದ ಗಣಿ ಏನಿದೆ, ಅದರ ಜೊತೇಲಿ ನಷ್ಟ ಅನುಭವಿಸುತ್ತಿದ್ದ ಚಿತ್ರದುರ್ಗ ತಾಮ್ರದ ಗಣಿ ಮತ್ತು ಅರಸೀಕೆರೆ ಕಲ್ಯಾಣ ತಾಮ್ರದ ಗಣಿಗಳೇನಿದೆ. ಅವನ್ನು ಈ ಹಿಂದೆ ನಾವು ಸಂಯೋಜನೆ ಮಾಡಿ ವಹಿಸಿ ಕೊಟ್ಟೆವು. ಆದಾಯತೆರಿಗೆ ೭೨ ಎ ಪ್ರಕಾರ ಅವರಿಗೆ ಹಣ ಬಂತು, ಇದರಿಂದ ಅವರಿಗೆ ಏನು ನಷ್ಟ ಆಗುತ್ತಿತ್ತೋ ಅದನ್ನು ಸರಿದೂಗಿಸಿಕೊಳ್ಳಲು ಹಣ ಬಂತು ಆ ಹಣವನ್ನು ಈ ಸಂಸ್ಥೆಗಳನ್ನು ಲಾಭದಾಯಕವನ್ನಾಗಿ ಮಾಡಲು ಉಪಯೋಗಿಸಿಕೊಂಡರೂ ಇಲ್ಲಿಯವರೆಗೆ ನಾವು ಸಾಧಿಸಿದ್ದೇನು ? ಇದರ ಬಗ್ಗೆ ನಾನು ಅನೇಕ ಪತ್ರಗಳನ್ನು ಬರೆದೆ ಹಾಗೂ ಒತ್ತಾಯ ಮಾಡಿದೆ. ಆದರೂ ಕಳೆದ ಐದಾರು ವರ್ಷಗಳಿಂದ ಆದಾಯ ತೆರಿಗೆ ವಿನಾಯಿತಿ ಪಡೆದು ಅದರಿಂದ ಬಂದಂತಹ ಹಣವನ್ನು ಹಣಕಾಸಿನ ಸಂಸ್ಥೆಗಳ ಸಾಲ ತೀರಿಸಲು ಉಪಯೋಗಿಸಿ, ನಾವು ಈಗ ಲಾಭದಾಯಕವಾಗಿದ್ದೇವೆ ಎಂಬ ಮಾತನ್ನು ಹೇಳಿ. ಅದರ ಉಪಯೋಗವನ್ನು ಅಲ್ಲಿಯ ಕೆಲವು ಜನರು ಪಡೆದಿರಬಹುದು. ಆದರೆ ಅದರ ಜೊತೆಯಲ್ಲಿ ಬರಪೀಡಿತವಾದ ನನ್ನ ಕ್ಷೇತ್ರದಲ್ಲಿರುವಂಥ ತಾಮ್ರದ ಗಣಿ ಘಟಕವನ್ನು ಕಾನೂನು ಪ್ರಕಾರ ತಾವು ಅಭಿವೃದ್ಧಿ ಮಾಡಬೇಕು. ಇವೊತ್ತು ೨೫೦ ಟನ್ ಅದರ ಸಾಮರ್ಥ್ಯ ಏನಿದೆ. ಅದನ್ನು ಪ್ರತಿನಿತ್ಯ ೫೦೦ ಟನ್ ಉತ್ಪತ್ತಿ ಮಾಡುವ ಸಾಮರ್ಥ್ಯಕ್ಕೇರಿಸಿದರೆ ಮಾತ್ರ ಅದನ್ನು ಲಾಭದಾಯಕ ಮಾಡಲು ಸಾಧ್ಯ. ಆ ಬಗ್ಗೆ ಸಂಬಂಧಿಸಿದ ಸಚಿವರಲ್ಲಿ ಅಧಿಕಾರಿಗಳಲ್ಲಿ ವಿನಂತಿ ಮಾಡಿಕೊಂಡೆ. ಆದರೆ ಅವರಿಗೆ ಹಿಡಿಸಲಿಲ್ಲ, ನನ್ನ ಪ್ರಕಾರ ಹಟ್ಟಿ ಚಿನ್ನದ ಗಣಿಯಿಂದ ಬೇಕಾದಷ್ಟು ಲಾಭ ಬರುತ್ತಿದೆ, ಅದರ ಹಣವನ್ನು ಲಾಭವೆಂದು ನಮಗೆ ಬೇಕಾದಂತೆ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಇದೆ. ಇದನ್ನು ಮಾಡಿದರೆ ತಮಗೇನು ಉಪಯೋಗ ಎಂಬ ಭಾವನೆ ಅಲ್ಲಿನ ಅಧಿಕಾರಿಗಳಿಗೆ ಇದೆ. ಇಂತಹ ನೀತಿಯನ್ನು ಅನುಸರಿಸುವ ಅಧಿಕಾರಿಗಳೇನಿದ್ದಾರೆ ಅವರ ಪ್ರವೃತ್ತಿಯನ್ನು ಬದಲಾವಣೆ ಮಾಡಬೇಕಾಗಿದೆ. ಇಂತಹ ಘಟಕಗಳನ್ನು ಲಾಭದಾಯಕ ಮಾಡುವ ನೀತಿಯನ್ನು ಎಲ್ಲಿಯವರೆಗೆ ರೂಪಿಸುವುದಿಲ್ಲವೋ ಅಲ್ಲಿಯವರೆಗೆ ಅವು ಸಣ್ಣ ಕೈಗಾರಿಕೆ ಇರಬಹುದು ದೊಡ್ಡ ಕೈಗಾರಿಕೆ ಇರಬಹುದು. ಅವು ಲಾಭದಾಯಕವಾಗಿ ನಡೆಸುವುದಕ್ಕೆ ಸಾಧ್ಯವಿಲ್ಲವೆಂಬ ಮಾತನ್ನು ಹೇಳುತ್ತೇನೆ. ತಮ್ಮಲ್ಲಿ ಸುಮಾರು ೨೯ ಕಂಪೆನಿಗಳಿವೆ. ಅದರಲ್ಲಿ ಸುಮಾರು ೧೯೨ ಕೋಟಿ

ರೂಗಳನ್ನು ಪೇರು ಬಂಡವಾಳವನ್ನಾಗಿ ಹಾಕಿದ್ದೀರಿ ಅವು ಹೇಗೆ ನಡೆಯುತ್ತವೆ ಎಂದು ಪ್ರತಿಯೊಂದರ ಬಗ್ಗೆ ಹೇಳುವುದಕ್ಕೆ ಸಮಯವಿಲ್ಲ ಆದ್ದರಿಂದ ಕೆಲವು ಕಂಪನಿಗಳ ಬಗ್ಗೆ ಮಾತ್ರ ಹೇಳುತ್ತೇನೆ. ಇಂಗ್ಲೀಷ್ ರಿಪೋರ್ಟ್ ಪ್ರಕಾರ ೧೫ ಕಂಪೆನಿಗಳಿವೆ. ಕನ್ನಡ ರಿಪೋರ್ಟ್ ಪ್ರಕಾರ ೨೦ ಕಂಪೆನಿಗಳಿವೆ. ಅವು ವಾರ್ಷಿಕ ಲೆಕ್ಕವನ್ನು ಈ ಸಭೆಗೆ ಕೊಡಬೇಕು. ಅದರ ಜೊತೆಯಲ್ಲಿ ಆಡಿಟ್ ವರದಿಯನ್ನು ಸಹ ಕಂಪೆನಿಗಳ ಕಾಯಿದೆ ಪ್ರಕಾರ ಈ ಸಭೆಯಲ್ಲಿ ಇಡಬೇಕು. ಆದರೆ ಎಲ್ಲಿಟ್ಟಿದ್ದಾರೆ? ಇದೇನೂ ಹೊಸದಲ್ಲ. ಮೊದಲಿನಿಂದಲೂ ಒಂದು ಪ್ರವೃತ್ತಿ ನಮ್ಮ ಆಡಳಿತ ಮಂಡಲಿಯವರಲ್ಲಿ ಬೆಳೆಯುತ್ತಿದೆ. ಏನೆಂದರೆ ನಮ್ಮನ್ನು ಯಾರೂ ಕೇಳುವುದಿಲ್ಲ, ಖಾಸಗೀಯವರು ಏನಾದರೂ ಈ ರೀತಿ ತಪ್ಪು ಮಾಡಿದರೆ ಶಿಕ್ಷೆಯಾಗುತ್ತದೆ ಆದರೆ ಇವು ಸರ್ಕಾರಿ ಸಂಸ್ಥೆಯಾಗಿರುವುದರಿಂದ ಇಲ್ಲಿನ ಅಧಿಕಾರಿಗಳು ಕಾಯಿದೆಯಂತೆ ಕೆಲಸ ಮಾಡದಿದ್ದರೆ ತಾವು ಏನು ಮಾಡುತ್ತೀರಿ? ಕಂಪೆನಿಗಳ ಅಧಿನಿಯಮ ೬೧೯ (ಎ) ಪ್ರಕಾರ ಸರ್ಕಾರಿ ಕಂಪೆನಿಗಳು ತಮ್ಮ ಕಾರ್ಯ ಮತ್ತು ವ್ಯವಹಾರಗಳ ವಾರ್ಷಿಕ ವರದಿಯನ್ನು ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ರವರು ತಪಾಸಣೆ ಮಾಡಿದ ಯಾವುದಾದರು ಟೀಕೆಗಳಿದ್ದರೆ ಅವುಗಳೊಡನೆ ವಿಧಾನ ಮಂಡಳದ ಉಭಯ ಸದನಗಳಲ್ಲೂ ಮಂಡಿಸುವುದು ಅಗತ್ಯವಾದೆ. ಇದು ಅವರಿಗೂ ಗೊತ್ತಿದೆ. ನಮಗೂ ಗೊತ್ತಿದೆ, ಆದರೆ ಎಷ್ಟರ ಮಟ್ಟಿಗೆ ಈ ಕಂಪನಿಯ ಜನ ಸಂಬಂಧ ಪಟ್ಟಂಥ ಸಂಸ್ಥೆಗಳ ವಾರ್ಷಿಕ ವರದಿಗಳನ್ನು ಮತ್ತು ತಪಾಸಣೆ ಮಾಡಿದಂಥ ಲೆಕ್ಕ ಪತ್ರಗಳನ್ನು ಈ ಸಭೆಯ ಮುಂದೆ ಇಟ್ಟಿವೆ? ಇವತ್ತು ತಾವು ಕೇಳಿ ತಿಳಿದುಕೊಳ್ಳಬಹುದು, ಈಗಿರುವಂಥ ತಮ್ಮ ಇಲಾಖೆಯ ಅಡಿಯಲ್ಲಿರುವ ಸಂಸ್ಥೆಗಳು ಏನು ಇವೆ, ಆ ಸಂಸ್ಥೆಗಳು ಇವತ್ತಿನವರೆಗೂ ಸಹಾ ಪ್ರಸಕ್ತ ವರ್ಷದ ಲೆಕ್ಕಪತ್ರಗಳನ್ನು ಮಾಡಿಲ್ಲ. ೮೫–೮೬, ೮೭ ೮೮ ಅಥವಾ ೮೮–೮೯ ಇಷ್ಟನ್ನು ಆದರೂ ಮಾಡಿದರೆ ಪುಣ್ಯ ಇವರು ಏತಕ್ಕೋಸ್ಕರ ಮಾಡುತ್ತಿಲ್ಲ? ನಾನು ತಮ್ಮನ್ನು ಕೇಳುವುದು ಇಷ್ಟೆ, ನೀವು ಎಲ್ಲಿಯವರೆಗೆ ಲೆಕ್ಕ ಪತ್ರಗಳನ್ನು ಸಹಾ ಮಾಡಿಸದಿದ್ದರೆ, ಲೆಕ್ಕ ಪತ್ರದಲ್ಲಿರತಕ್ಕಂಥ ಲೋಪ ದೋಷಗಳನ್ನು ಕಂಡು ಹಿಡಿಯುವುದು ಯಾವಾಗ? ಹತ್ತು ವರ್ಷವಾದ ಮೇಲೆ ಲೆಕ್ಕ ಪತ್ರಗಳನ್ನು ಮಂಡಿಸಿದರೆ ಅದರ ಬಗ್ಗೆ ವರದಿಯನ್ನು ಕೊಟ್ಟರೆ ಹತ್ತು ವರ್ಷವಾದ ಮೇಲೆ ವಿಧಾನಸಭೆಯ ಮುಂದೆ ಬರುತ್ತದೆ ಅದಾದ ಮೇಲೆ ಬೇರೆಯವರು ಅದನ್ನು ನೋಡಿ ಲೋಪ ದೋಷಗಳನ್ನು ಕಂಡು ಹಿಡಿಯುವುದು ಯಾವಾಗ? ಮತ್ತು ಇದಾದ ಮೇಲೆ ಬೇರೆಯವರು ನೋಡಿ ಇದರ ಬಗ್ಗೆ ವರದಿಯನ್ನು ಕೊಟ್ಟು ವರದಿಯ ಆಧಾರದ ಮೇಲೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದು ಯಾವಾಗ ಎಂಬುದನ್ನು ನಾವು ನೀವು ಯೋಚನೆ ಮಾಡಬೇಕಾಗುತ್ತದೆ. ನಿಮಗೆ ಸಂಬಂಧಪಟ್ಟಂತೆ ನಾವಾಗಲೀ ನೀವಾಗಲಿ ಜೀವಂತವಾಗಿರಲಿಕ್ಕೆ ಸಾಧ್ಯವಿಲ್ಲ. ಅಕಸ್ಮಾತ್ ಜೀವಂತನಾಗಿದ್ದರೂ ಕೂಡಾ ನಾವು ನೀವು ಮತ್ತು ಅವರು ನಮ್ಮ ನಿಮ್ಮ ರಾಜಕೀಯ ಜೀವನದಿಂದ ಮತ್ತು ಅಧಿಕಾರದ ಜೀವನದಿಂದ ನಿವೃತ್ತರಾಗಿರುತ್ತೇವೆ, ಇಂಥ ಒಂದು ಪರಿಸ್ಥಿತಿಯನ್ನು ತಾವು ಹೋಗಲಾಡಿಸಬೇಕಾದರೆ ಒಂದು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಇದಕ್ಕೆ ಒಂದು ಕಾನೂನು ಇದೆ, ಕಾನೂನು ಪ್ರಕಾರ ಲೆಕ್ಕಪತ್ರಗಳನ್ನು ಬರೆಯುವುದಿಲ್ಲ ಎಂದು ಹೇಳಿದರೆ ಹೇಗೆ? ಇದು ಕೇವಲ ನಿಮ್ಮ ಇಲಾಖೆಗೆ ಮಾತ್ರ ಸೀಮಿತವಲ್ಲ. ರಾಜ್ಯದಲ್ಲಿರುವ ಅನೇಕ ಸಂಸ್ಥೆಗಳು ಈ ಕೆಲಸವನ್ನು ಮಾಡುತ್ತಿವೆ. ಈ ಮಾತನ್ನು ಏತಕ್ಕೆ ಒತ್ತಿ ಹೇಳುತ್ತಿದ್ದೇನೆಂದರೆ, ತಪ್ಪೇನಾದರೂ ಆಗಿದ್ದರೆ ಅದನ್ನು ಕಂಡು ಹಿಡಿಯತಕ್ಕಂಥ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಆ ದಿಸೆಯಲ್ಲಿ ತಾವು ಆಲೋಚನೆ ಮಾಡಬೇಕು, ಈ ವಾರ್ಷಿಕ ವರದಿಗಳನ್ನು ಕೇವಲ ವರದಿ ಮಾತ್ರ ಕೊಟ್ಟರೆ ಸಾಧ್ಯವಿಲ್ಲ, ಅದು ಸಾಧುವೂ ಅಲ್ಲ. ಇದರ ಜೊತೆಗೆ ಲೆಕ್ಕ ಪತ್ರಗಳ ಪಟ್ಟಿಯೂ ಸಹಾ ಆಗಬೇಕು. ಆಡಿಟೆಡ್ ಸ್ಟೇಟ್‌ಮೆಂಟ್ ಆಫ್ ಅಕೌಂಟ್ಸ್ ಏನು ಇದೆ, ಅದನ್ನು ಸಹಾ ತಾವು ಇಡುವಂಥ ಒಂದು ನೀತಿಯನ್ನು ಅನುಸರಿಸಬೇಕು. ಆದ ಮಾತ್ರ ಈ ದೇಶದಲ್ಲಿರತಕ್ಕಂಥ ಕಂಪನಿಗಳ ವ್ಯವಹಾರಗಳನ್ನು ನಾವು ನೀವು ಸೂಕ್ಷ್ಮವಾಗಿ ಅವಲೋಕಿಸಲಿಕ್ಕೆ ಪರಿಶೀಲನೆ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಎಲ್ಲಾ ಕಂಪನಿಗಳು ಸಹಾ ಒಂದಲ್ಲ ಒಂದು ವಿಧವಾಗಿ ಈ ರೀತಿಯಾಗಿ ಮಾಡುತ್ತಿವೆ ಎನ್ನತಕ್ಕಂಥ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕರ್ನಾಟಕ ಇಂಡಸ್ಟ್ರಿಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್, ಇದು ಬಹಳ ಮುಖ್ಯವಾದುದು ನಮ್ಮ ದೇಶದ ಜನರಿಗೆ ಬೇಕಾದ ಅದರಲ್ಲಿಯೂ ಕೈಗಾರಿಕೋದ್ಯಮಿಗಳಿಗೆ ಕೈಗಾರಿಕೆಗಳನ್ನು ಸ್ಥಾಪಿಸಲು ಬೇಕಾದಂಥ ಸಹಾಯವನ್ನು ಮಾಡಲಿಕ್ಕೆ ಈ ಸಂಸ್ಥೆಯನ್ನು ನಾವು ರಚನೆ ಮಾಡಿದ್ದೇವೆ. ಇದು ಏನು ಮಾಡುತ್ತಿದೆ? ಉದಾಹರಣೆಗೆ ಹೇಳುತ್ತಿದ್ದೇನೆ, ಬೇರೆ ಸಂಸ್ಥೆಗಳು ಏನಿವೆ, ಮಂಡಳಿ ಅಥವಾ ನಿಗಮಗಳು ಏನಿವೆ, ಅವು ಇದಕ್ಕೆ ವಿಭಿನ್ನವಾಗಿ ಕೆಲಸ ಮಾಡುತ್ತಿವೆ ಎಂದು ನಾನು ಹೇಳುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ, ಯಾವ ಒಂದು ಉದ್ದೇಶಕ್ಕೋಸ್ಕರ ಈ ಸಂಸ್ಥೆಗಳು ಸ್ಥಾಪಿತವಾಗಿವೆ, ಆ ಉದ್ದೇಶದಲ್ಲಿ ಸ್ವಲ್ಪವಾದರೂ ಸಹಾ ಅವರು ಏನಾದರೂ ಸಫಲರಾಗಿದ್ದಾರೆಯೇ ಎಂದು ನಾವು ಆಲೋಚನೆಯನ್ನು ಮಾಡಬೇಕಾಗುತ್ತದೆ. ಇಲ್ಲಿಯವರೆಗೆ ಸುಮಾರು ೭೭

ಸಾವಿರ ಎಕರೆಯನ್ನು ಅವರು ಭೂಸ್ವಾಧೀನ ಮಾಡಿಕೊಳ್ಳಬೇಕು ಎಂಬ ಮಾತನ್ನು ಹೇಳಿದರು ಅವರ ಪೈಕಿ ಅಕ್ವೈರ್ ಮಾಡಿಕೊಂಡಿದ್ದು ಸುಮಾರು ೨೯ ಸಾವಿರ ಎಕರೆ ಅದರಲ್ಲಿ ಅಭಿವೃದ್ಧಿಪಡಿಸಿದ್ದು ೧೫ ಸಾವಿರ ಎಕರೆ ಭೂಮಿಯನ್ನು ಕೊಟ್ಟಿದ್ದು ಹತ್ತು ಸಾವಿರ ಎಕರೆ ಎಂದರೆ ಏನು ಈ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದೀರಿ ಅಂದರೆ ಸ್ವಾಧೀನಪಡಿಸಿಕೊಂಡಂಥ ಭೂಮಿಯಲ್ಲಿ ಶೇಕಡ ೩೩ ರಷ್ಟು ಅಷ್ಟು ಭೂಮಿಯನ್ನು ಅವರು ಹಾಚಲಿಕ್ಕೆ ಸಾಧ್ಯವಾಗಿದೆಯೆಂದರೆ ನಮ್ಮ ನಿಮ್ಮ ಪ್ರಯತ್ನ ಯಾವ ದಿಸೆಯಲ್ಲಿ ಸಾಗುತ್ತಿದೆ ಎಂದು ಹೇಳಿದರೆ ಇದಕ್ಕಿಂತ ಹೆಚ್ಚಾದ ನಿದರ್ಶನಗಳು ಬೇಕಾಗಿಲ್ಲ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹೆಚ್ಚು ವೇಳೆ ಇಲ್ಲದ ಕಾರಣ ಅನೇಕ ಇತರ ಕಂಪನಿಗಳ ಬಗ್ಗೆ ಹೆಚ್ಚಾಗಿ ಅಲ್ಲದಿದ್ದರೆ ಒಂದು ಎರಡು ವಿಚಾರಗಳನ್ನು ಈ ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್ ಬಗ್ಗೆ ಹೇಳುತ್ತೇನೆ. ಇದಕ್ಕೆ ನಾವು ಸಹಾಯ ಧನವನ್ನು ಕೊಡುವಂಥ ಒಂದು ಪರಿಪಾಠವನ್ನು ಇಟ್ಟುಕೊಂಡಿದ್ದೇವೆ. ಕೈಮಗ್ಗದ ಖಾದಿ ಬಟ್ಟೆಗಳಿಗೆ ಕೈಮಗ್ಗದಿಂದ ನೇಯ್ದ ಖಾದಿ ಬಟ್ಟೆಗಳಿಗೆ ನಾವು ರಿಬೇಟನ್ನು ಕೊಡುತ್ತೇವೆ. ಈ ರಿಬೇಟನ್ನು ವರ್ಷದಲ್ಲಿ ೩೦–೪೫ ದಿವಸ ಏನು ವ್ಯವಹಾರವನ್ನು ಮಾಡುತ್ತದೆ. ಅಷ್ಟಕ್ಕೆ ಆ ದಿವಸಗಳಿಗೆ ಸೀಮಿತಗೊಂಡಂತೆ ಪರಿಹಾರವನ್ನು ರಿಬೇಟ್ ಮುಖಾಂತರ ಕೊಡುತ್ತೇವೆ ರಿಬೇಟ್‌ನ್ನು ಏನು ಕೊಡುತ್ತೇವೆ ಅದರಲ್ಲಿ ಆಗಿರುವಷ್ಟು ದುರುಪಯೋಗ ಅವರಲ್ಲಿ ಆದಷ್ಟು ಅನ್ಯಾಯ ಖಂಡಿತವಾಗಿಯೂ ಎಲ್ಲಿಯೂ ಆಗುವುದಿಲ್ಲ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಇನ್ನು ಯಾವ ರೀತಿ ರಿಬೇಟ್ ಪಡೆಯುತ್ತಾರೆ, ಅದನ್ನು ಯಾವ ರೀತಿಯಿಂದಲಾದರೂ ಯಾವಾಗಲಾದರೂ ಪರಿಶೀಲನೆ ಮಾಡಿದ್ದೀರಾ; ಚೆಕ್ ಮಾಡಿದ್ದೀರಾ? ಅವರ ಬೇಡಿಕೆ ಏನು ಇದೆ. ಅವರು ಕೊಟ್ಟಂತರ ಕ್ಲೈಮ್ಸ್ ಏನು ಇದೆ, ನಿಮ್ಮ ಇಲಾಖೆಯಿಂದ ಪರಿಶೀಲನೆ ಮಾಡುವಂತಹ ಒಂದು ಪ್ರವೃತ್ತಿಯನ್ನು ಇಟ್ಟುಕೊಂಡಿದ್ದೀರಾ? ಅನೇಕ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಕೇವಲ ಕೈಮಗ್ಗದ ಬಟ್ಟೆಗಳಲ್ಲಿ ಮಾತ್ರ ಅಲ್ಲ, ಬೇರೆ ಬೇರೆ ಬಟ್ಟೆಗಳಿಗೆ ಕೊಡುವಂತಹ ರಿಬೇಟ್ ದುರುಪಯೋಗ ಆಗುತ್ತಿದೆ. ಸರಿಯಾದ ರೀತಿಯಲ್ಲಿ ಸರಿಯಾದ ಜನರಿಗೆ ಮುಟ್ಟುತ್ತಿಲ್ಲ ಎಂಬ ಮಾತನ್ನು ಹೇಳುತ್ತಿದ್ದೇನೆ. ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್ ಕಮೀಷನ್‌ರವರು ಅಥವಾ ಬೋರ್ಡ್‌ನವರು ಏನು ರಿಯಾಯಿತಿ ಕೊಡುತ್ತಿದ್ದಾರೆ ಇದರಲ್ಲಿ ಬಹಳ ಅನ್ಯಾಯ ಆಗುತ್ತಿದೆ. ಅನೇಕ ಸಹಕಾರ ಸಂಘಗಳಿಗೆ ತಾವು ದತ್ತಿಯನ್ನು ಅವರ ಕೆಲಸಕ್ಕೋಸ್ಕರ ಉಪಯೋಗಿಸಿಕೊಳ್ಳಲಿಕ್ಕೆ, ಕೊಳ್ಳಲಿಕ್ಕೆ ಅನುಮತಿಯನ್ನು ಕೊಟ್ಟಿದ್ದೀರಿ. ಆ ದತ್ತಿ ಕೊಂಡಿದ್ದನ್ನು ಕೃತಕವಾಗಿ ಅವರು ಸೃಷ್ಟಿ ಮಾಡುತ್ತಾರೆ. ಅಲ್ಲಿ ಅರಳೀ ಮಾಡುತ್ತಾರೆ, ಅದು ಲೆಕ್ಕಕ್ಕೆ ಬರುತ್ತದೆ. ಅರಳೀ ಮಾಡಿದ್ದನ್ನು ಮತ್ತೆ ಅಂಜಿ ಮಾಡುತ್ತಾರೆ. ಮತ್ತೆ ಅಂಜಿಯಿಂದ ನೂಲು ಮಾಡುತ್ತಾರೆ, ನೇಯುತ್ತಾರೆ, ಮತ್ತು ಮಾರಾಟ ಮಾಡುತ್ತಾರೆ. ಹೀಗೆ ಎಲ್ಲಾ ಹಂತದಲ್ಲಿಯೂ ಸಹ ಜನಗಳಿಗೆ ವಂಚನೆ ಮಾಡುವಂತಹ ಒಂದು ಪ್ರವೃತ್ತಿ ಇದೆ. ಇದು ತಮಗೆ ಗೊತ್ತಿಲ್ಲ ಎಂದು ನಾನು ತಿಳಿದು ಕೊಂಡಿಲ್ಲ. ತಮಗೆ ಗೊತ್ತಿದ್ದರೂ ಸಹ ನಾವು ಅನುಸರಿಸುವಂತಹ ನೀತಿ, ಈ ರೀತಿ ಅವರು ಕೆಲಸ ಮಾಡುತ್ತಿದ್ದರೂ ಸಹ ಅವರ ಮೇಲೆ ಕಠಿಣವಾದ ಕ್ರಮವನ್ನು ನಾವು ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಇವೊತ್ತಿನ ದಿವಸ ನಾವು ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತೇವೆ. ಆದರೆ ಭ್ರಷ್ಟಾಚಾರದಿಂದ ಜನ ಸಾಮಾನ್ಯರ ಶೋಷಣೆ ಮಾತ್ರ ಆಗುವುದಿಲ್ಲ. ಇದರ ಜೊತೆಯಲ್ಲಿ ನಾವು ನೀವು ಮಾತ್ರ ಅಲ್ಲ, ಸಾಮಾನ್ಯ ಜನರನ್ನು ಸಹ ನೀತಿ ಬಾಹಿರರಾಗಿ ಮಾಡುತ್ತದೆ ಇದರ ಬಗ್ಗೆ ಹೆಚ್ಚು ಒತ್ತು ಕೊಡಬೇಕು. ಭ್ರಷ್ಟಾಚಾರ ನಡೆದಿದೆ ಎಂಬ ಆರೋಪ ಬಂದರೂ ಸರಿಯಾದ ರೀತಿಯಲ್ಲಿ ವಿಚಾರಣೆ ಮಾಡಿ ವಿಚಾರಣೆ ಯಿಂದ ಮೇಲ್ನೋಟಕ್ಕೆ ಏನಾದರೂ ಸಾಬೀತು ಆಗುವ ಅಂಶ ಇದ್ದರೆ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಮತ್ತು ಅಧಿಕಾರೇತರರ ಮೇಲೆ ದೃಢವಾದ ಕಠಿಣವಾದ ಕ್ರಮವನ್ನು ತಾವು ತೆಗೆದುಕೊಳ್ಳುವ ಬಗ್ಗೆ ಪ್ರಯತ್ನ ಮಾಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ೧೯೮೩ನೇ ಇಸವಿಯಲ್ಲಿ ಹೊಸ ಸರ್ಕಾರ ಬಂದು ಏನು ಕೈಗಾರಿಕಾ ನೀತಿಯನ್ನು ಅನುಸರಿಸಿದೆ. ಅದು ಪ್ರೋತ್ಸಾಹಕರವಾದ ರೀತಿಯಲ್ಲಿ ನಡೆಯುತ್ತಾ ಇದೆ ಅದರಿಂದ ಉಪಯೋಗ ಆಗಿದೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಅದಕ್ಕೋಸ್ಕರ ಅವರನ್ನು ನಾನು ಅಭಿನಂದಿಸುತ್ತೇನೆ. ಆದರೆ ಇಷ್ಟೇ ಸಾಲದು. ಕೇವಲ ಸಣ್ಣ ಮತ್ತು ದೊಡ್ಡ ಘಟಕಗಳನ್ನು ಸ್ಥಾಪನೆ ಮಾಡುವುದು ಇವೊತ್ತಿನ ದಿವಸ ಮುಖ್ಯ ಅಲ್ಲ. ಈ ರಾಜ್ಯದ ಕೈಗಾರಿಕಾ ಉತ್ಪನ್ನವನ್ನು ಹೆಚ್ಚು ಮಾಡಲಿಕ್ಕೆ ಈ ರಾಜ್ಯದ ಜನರಿಗೆ ಉದ್ಯೋಗ ಕೊಡಲಿಕ್ಕೆ ಬೇಕಾದಂತಹ ಕೈಗಾರಿಕಾ ನೀತಿಯನ್ನು ಅನುಸರಿಸಬೇಕು. ಕೈಗಾರಿಕಾ ನೀತಿ ಗ್ರಾಮೀಣ ಪ್ರದೇಶದ ಜನರಿಗೆ ಹೆಚ್ಚು ಉದ್ಯೋಗವನ್ನು ಕೊಡಲಿಕ್ಕೆ, ಅನುಕೂಲಕರವಾಗಿ ಇರಬೇಕು. ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಬೆಳೆದಂತಹ ಬೆಳೆಗಳು ಏನು ಇದೆ, ಕೃಷಿ ಉತ್ಪನ್ನದ ಆಧಾರಿತ ಕೈಗಾರಿಕೆಗಳನ್ನು ತಾವು ಸ್ಥಾಪನೆ ಮಾಡಬೇಕು. ಅದಕ್ಕೆ ಹೆಚ್ಚು ಮಹತ್ವ ಕೊಡಬೇಕು ಎಂದು ಹೇಳುತ್ತೇನೆ. ಸಹಕಾರಿ ರಂಗದ

ಕೈಗಾರಿಕೆಗಳ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳುತ್ತಿದ್ದೇನೆ. ಈ ಸಹಕಾರಿ ನೂಲಿನ ಗಿರಣಿ ಇರಬಹುದು ಅಥವಾ ಸಹಕಾರಿ ಸಕ್ಕರೆ ಕಾರ್ಖಾನೆ ಇರಬಹುದು, ಈ ಕಾರ್ಖಾನೆಗಳು ಲಾಭದಾಯಕವಾದ ಸಂಸ್ಥೆಗಳನ್ನಾಗಿ ಮಾಡುವುದಕ್ಕೆ ತಾವು ಧೃಢವಾದ ನಿಲುವನ್ನು ಅನುಸರಿಸಬೇಕು. ಅವರು ಕೊಳ್ಳುವಂತಹ ಕಚ್ಚಾ ಮಾಲಿನ ಬೆಲೆ ಏನು ಇದೆ ಅಥವಾ ಮಾರಾಟ ಮಾಡುವಂತಹ ಉತ್ಪಾದನಾ ವಸ್ತುಗಳ ಬೆಲೆ ಏನು ಇದೆ ಇವುಗಳನ್ನು ಅವರು ಯಾವ ರೀತಿ ಕೊಂಡುಕೊಳ್ಳುತ್ತಾರೆ ಯಾವ ರೀತಿ ಅವುಗಳನ್ನು ಮಾರಾಟ ಮಾಡುತ್ತಾರೆ ಈ ಎರಡೂ ಅಂಶಗಳನ್ನು ತಾವು ಪರಿಶೀಲಿಸಿದರೆ ಸಾಕು. ಅವರ ಬಣ್ಣ ಬಯಲಾಗುತ್ತದೆ. ಇದರ ಜೊತೆಯಲ್ಲಿ ಅವ್ಯವಹಾರಿಕವಾದ ರೀತಿಯಲ್ಲಿ ಅವರು ಸಂಸ್ಥೆಯ ಹಣವನ್ನು ಉಪಯೋಗಿಸುವುದು ಅಥವಾ ವಿನಿಯೋಗಿಸುವಂತಹದು. ಇದನ್ನು ಸಹ ತಡೆಗಟ್ಟಬೇಕಾಗಿದೆ. ಇದರ ಜೊತೆಯಲ್ಲಿ ಈಗಾಗಲೇ ಖಾಸಗೀ ರಂಗದಲ್ಲಿರುವಂತಹ ಅಥವಾ ಸರ್ಕಾರಿ ಸ್ವಾಮ್ಯದೊಂದಿಗೆ ಇರುವಂತಹ ಕೈಗಾರಿಕಾ ಆಡಳಿತ ಮಂಡಲಿ ಏನು ಇದೆ. ಈ ಆಡಳಿತ ಮಂಡಲಿಗಿಂತ ಹೆಚ್ಚು ದುರಾಡಳಿತಕ್ಕಿಂತ ಈ ಒಂದು ಸಂಸ್ಥೆಗಳಲ್ಲಿ ನಡೆಯುತ್ತಾ ಇದೆ. ಇದನ್ನು ತಡೆಗಟ್ಟಬೇಕಾಗಿದೆ. ಇದನ್ನು ತಡೆಗಟ್ಟುವುದರ ಮುಖಾಂತರವಾಗಿ ತಾವು ಇವೊತ್ತಿನ ದಿವಸ ಹೆಚ್ಚು ಉತ್ಪನ್ನ ಮಾಡಲಿಕ್ಕೆ ಸಾಧ್ಯವಿದೆ. ಈ ಕೈಗಾರಿಕೆಗಳು ಏನು ಇದೆಯೋ, ಇವು ನಿಜವಾಗಿ ಉತ್ತಮವಾದ ಸ್ಥಿತಿಯಲ್ಲಿ ಇರಬೇಕಾದರೆ ನಾವು ನೀವು ನಿರೀಕ್ಷಿಸುವಂತೆ ಈ ರಾಜ್ಯದ ಸಂಪತ್ತನ್ನು ಹೆಚ್ಚು ಮಾಡಬೇಕಾದರೆ ನೀವು ಹೊಸ ಹೊಸ ನೀತಿಯನ್ನು ಅನುಸರಿಸಬೇಕಾಗಿದೆ. ಇವೊತ್ತಿನ ದಿವಸ ನಿಮ್ಮ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದಿದೆ. ನಿಮ್ಮ ಪಕ್ಷವು ನಂಬಿದ ತತ್ವಗಳಿಗೆ ಅನುಗುಣವಾಗಿ ಹೊಸ ಕೈಗಾರಿಕಾ ನೀತಿಯನ್ನು ನೀವು ಅನುಸರಿಸಿದರೆ ನಮ್ಮ ಅಭ್ಯಂತರ ಏನೂ ಇಲ್ಲ. ಟೀಕೆ ಇಲ್ಲ. ಈಗ ನಾವು ರೂಪಿಸಿ ಜಾರಿ ಮಾಡುವಂತಹ ಕೈಗಾರಿಕಾ ನೀತಿಯೂ ಸಹ ತಮ್ಮ ಅಧ್ಯಕ್ಷತೆಯ ಪರಿಣಾಮವಾಗಿಯೇ ಅಥವಾ ಅಧಿಕಾರಿಗಳ ಸ್ವೇಚ್ಛಾ ವರ್ತನೆಯಿಂದ ತಕ್ಕ ಫಲವನ್ನು ಕಾಣದಾಗಿದೆ. ಯಾರು ಈ ನೀತಿಯನ್ನು ಅನುಸರಿಸುತ್ತಾರೆ, ಅವರು ಸರಿಯಾದ ರೀತಿಯಲ್ಲಿ ಕೆಲಸ ಮಾಡದೇ ಹೋದರೆ ಖಂಡಿತವಾಗಿ ಅವರ ಮೇಲೆ ರಾಜಕೀಯ ಹಸ್ತಕ್ಷೇಪಕ್ಕೆ ಮನ್ನಣೆ ಕೊಡದೇ ಇರುವ ರೀತಿಯಲ್ಲಿ ಕೆಲಸ ಮಾಡಿದಾಗ ಮಾತ್ರ ಒಳ್ಳೆಯ ಒಂದು ಆಡಳಿತ, ಒಳ್ಳೆಯ ಕೈಗಾರಿಕೆ ನೀತಿ ರೂಪಿತವಾಗಿ, ಕೈಗಾರಿಕೆ ರಂಗದಲ್ಲಿ ಸುಸ್ಥಿತಿ ಉಂಟಾಗಲಿಕ್ಕೆ ಸಾಧ್ಯ ಆಗುತ್ತದೆ. ಆಗ ಮಾತ್ರ ಕೈಗಾರಿಕಾ ಉತ್ಪತ್ತಿ ಏನು ಇದೆ, ಕೈಗಾರಿಕಾ ಸಂಪತ್ತು ಏನು ಇದೆ, ಉತ್ಪತ್ತಿ ಏನು ಇದೆ ಈ ರಾಜ್ಯಕ್ಕೆ ಬರಲು ಸಾಧ್ಯ ಆಗುತ್ತದೆ. ಅದರ ಮುಖಾಂತರವಾಗಿ ಸಾಮಾಜಿಕವಾಗಿ ಸಂಕಷ್ಟದಲ್ಲಿರುವ ಜನರ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಲಿಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

೩.೧೫ ಪಿ.ಎಂ.

ನಾನು ಇನ್ನೂ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗಿದ್ದರೂ ಸಹ ಸಮಯವಿಲ್ಲದ ಪ್ರಯುಕ್ತ ನನಗೆ ಮುಖ್ಯವೆನಿಸಿದಂಥ ಒಂದೆರಡು ವಿಚಾರಗಳನು ಮಾತ್ರ ಪ್ರಸ್ತಾಪ ಮಾಡಲಿಕ್ಕೆ ಇಷ್ಟಪಡುತ್ತೇವೆ. ನಿಮ್ಮ ಇಲಾಖೆಯಲ್ಲಿ ಅತ್ಯಂತ ಬೇಸರ ತಗಿಸುವ, ಜನರನ್ನು ಹೆಚ್ಚಿಗೆ ಶೋಷಣೆ ಮಾಡಿದಂಥ ಸಂಸ್ಥೆ ಅಂದರೆ ಕರ್ನಾಟಕ ವಿದ್ಯುತ್ ಮಂಡಲಿ ಅಂದರೆ ತಪ್ಪಾಗಲಿಕ್ಕಿಲ್ಲ. ನಾವೆಲ್ಲರೂ ಗ್ರಾಮಾಂತರ ಪ್ರದೇಶದಿಂದ ಬಂದಿರುವುದರಿಂದ ಅದರ ಅನುಭವ ನಮಗಿಂತ ಬೇರೆಯವರಿಗೆ ಆಗಿರಲಿಕ್ಕಿಲ್ಲ ಎನ್ನುವ ದೃಷ್ಟಿಯಿಂದ ಅದರ ಬಗ್ಗೆ ಒಂದೆರಡು ವಿಚಾರಗಳನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕರ್ನಾಟಕ ವಿದ್ಯುತ್ ನಿಗಮ ಒಂದೇ ಏಕೆ, ನಮ್ಮ ಸರ್ಕಾರದ ಎಲ್ಲ ಸಂಸ್ಥೆಗಳವರು ಒಂದು ಒಳ್ಳೆಯ ಕೆಲಸ ಮಾಡುತ್ತಾ ಇವೆ, ಇದು ನಿರಂತರವಾಗಿ ಬೆಳೆದು ಬಂದಿದೆ. ಏನೇ ಇರಲಿ ಬಿಜಲಿ ಅತ್ಯುತ್ತಮವಾದಂಥ ಕಾಗದದಲ್ಲಿ ವಿವಿಧವಾದಂಥ ಅಂದ, ಬಣ್ಣದಿಂದ ಕೂಡಿದಂಥ ವರದಿಗಳನ್ನು ಕೊಡುತ್ತಾರೆ. ಅದಕ್ಕೆ ನಾವು ಅವರನ್ನು ಮೆಚ್ಚಬೇಕಾಗಿದೆ. ಇದನ್ನು ಅನೇಕರು ಅನೇಕಸಾರಿ ಹೇಳಿದರು. ಅವರ ಮನೋಭಾವ ಮಾತ್ರ ಬದಲಾಗಿಲ್ಲ, ನಮ್ಮ ನಿಮ್ಮ ಮನೋಭಾವವೂ ಬದಲಾಗಿಲ್ಲ, ಇದನ್ನು ಮಾಡಿ ಎಂದು ಹೇಳುವಂಥ ಮನೋಭಾವ ನಮ್ಮಲ್ಲಿ ಬದಲಾಗಿಲ್ಲ. ಅವರನ್ನು ಬದಲಾಯಿಸಬೇಕು ಎಂಬ ನಮ್ಮ ಮನೋಭಾವ ಬದಲಾಗಿಲ್ಲ. ಅದು ಏನೇ ಇರಲಿ ಇವತ್ತಿನ ದಿವಸ ನಾನು ತಮ್ಮಲ್ಲಿ ಕೇಳುವುದಿಷ್ಟೆ. ಈ ಕರ್ನಾಟಕ ವಿದ್ಯುತ್ ಮಂಡಲಿ ಬಗ್ಗೆ ಹೇಳುವಾಗ, ಹಿಂದೆ ಇದ್ದವರ ಬಗ್ಗೆಯಾಗಲಿ, ಇಂದು ಇರುವವರ ಬಗ್ಗೆಯಾಗಲಿ ನಾನು ಏನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಕರ್ನಾಟಕ ವಿದ್ಯುತ್ ಮಂಡಲಿ ಅನುಸರಿಸುತ್ತಾ ಇರುವಂಥ ನೀತಿ ಏನಿದೆ ಅದು ಜನರ ಪರವಾಗಿ ಇದೆಯೋ ಇಲ್ಲವೇ ಎಂಬುದನ್ನು ತಾವು ಆಲೋಚನೆ ಮಾಡಬೇಕಾಗಿದೆ. ನಮ್ಮ ವಿದ್ಯುತ್ ಉತ್ಪಾದನೆಗೆ ಬೇಕಾದಂಥ ಕಾರ್ಯಕ್ರಮಗಳನ್ನು ಹಿಂದಿನ ಅನೇಕ ವರ್ಷಗಳಲ್ಲಿ ನಮ್ಮ ಬೇಡಿಕೆಯನ್ನು

ಅನುಸರಿಸಿ ನಾವು ಹೆಚ್ಚು ಮಾಡಲಿಕ್ಕೆ ಕ್ರಮವನ್ನು ತೆಗೆದುಕೊಳ್ಳದೆ ಇರಬಹುದು. ಅದು ಬೇರೆ ಪ್ರಶ್ನೆ. ಇದರ ಬಗ್ಗೆ ನಮ್ಮನ್ನು ನೀವು ದೂಷಣೆ ಮಾಡುವುದಾಗಲಿ ಅಥವಾ ನಿಮ್ಮನ್ನು ನಾವು ದೂಷಣೆ ಮಾಡುವುದಾಗಲಿ ಅದು ಬೇರೆ ಪ್ರಶ್ನೆ. ಏನು ವಿದ್ಯುತ್ ಉತ್ಪಾದನೆಯಾಗುತ್ತದೆ, ಆ ಉತ್ಪತ್ತಿಯಾದಂಥ ವಿದ್ಯುತ್ತನ್ನು ಎಷ್ಟರಮಟ್ಟಿಗೆ ನಾವು ಉಪಯೋಗ ಮಾಡುತ್ತಾ ಇದ್ದೇವೆ, ಮತ್ತು ವಿದ್ಯುತ್ ಉತ್ಪಾದನೆಗೆ ವೆಚ್ಚ ಏನಾಗುತ್ತದೆ ಆ ವೆಚ್ಚವನ್ನು ಕಡಿಮೆ ಮಾಡಲಿಕ್ಕೆ ಆಗಿದೆಯೋ, ಕಡಿಮೆ ಮಾಡಲಿಕ್ಕೆ ಸಾಧ್ಯವಿಲ್ಲವೆ? ಇವತ್ತಿನ ದಿವಸ ಸುಮಾರು ೪೫ ಲಕ್ಷ ಗ್ರಾಹಕರು ಇದ್ದಾರೆ. ಸುಮಾರು ೪೫ ಸಾವಿರ ಉದ್ಯೋಗಿಗಳಿದ್ದಾರೆ. ಅದಕ್ಕೆ ಸಾವಿರಾರು ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತಾ ಇದ್ದೇವೆ. ಹೀಗಿದ್ದರೂ ಸಹ ಇದರ ಉಪಯೋಗ ಮಾತ್ರ ನಿಜವಾಗಲೂ ಸಹ ಸಾಮಾನ್ಯವಾದಂಥ ಜನರಿಗೆ ಆಗುವಲ್ಲಿ ವಿಶೇಷವಾದಂಥ ಶೋಷಣೆ ಮಾಡುವಂಥ ನೀತಿಯನ್ನು ನಾವು ಅನುಸರಿಸಿದ್ದೇವೆ. ಇದರ ಜೊತೆಯಲ್ಲಿ ಯಾರು ಈ ಒಂದು ಮಂಡಲಿಯಲ್ಲಿದ್ದಾರೆ, ಅವರು ಹೆಚ್ಚು ಹೆಚ್ಚು ಶ್ರೀಮಂತರಾಗಲಿಕ್ಕೆ ಬೇಕಾದಂಥ ರೀತಿಯಲ್ಲಿ ಈ ಒಂದು ವ್ಯವಹಾರ ನಡೆಯುತ್ತಾ ಇದೆ. ಎಲ್ಲದಕ್ಕಿಂತ ಹೆಚ್ಚಾಗಿ ಈ ಗ್ರಾಹಕರಲ್ಲಿ ಕೆಲವು ಜನ ಶ್ರೀಮಂತರು ಏನಿದ್ದಾರೆ, ಆ ಶ್ರೀಮಂತರು ಮಾತ್ರ ಹೆಚ್ಚು ಹೆಚ್ಚು ಶ್ರೀಮಂತರಾಗಲಿಕ್ಕೆ ಅವರದೇ ಆದಂಥ ಅನೇಕ ನೀತಿಯಿಂದ ಅಥವಾ ಅದು ವ್ಯವಹಾರಿಕ ನೀತಿ ಎನ್ನಬಹುದು ಅಥವಾ ಅವ್ಯವಹಾರಿಕ ನೀತಿ ಎನ್ನಬಹುದು. ಈ ನೀತಿಯನ್ನು ಅನುಸರಿಸುವುದರಿಂದ ಇವತ್ತಿನದಿವಸ ಅವರು ಹೆಚ್ಚು ಲಾಭ ಪಡೆಯಲಿಕ್ಕೆ ಸಾಧ್ಯವಾಗಿದೆ ನಾವೆಲ್ಲರೂ ಮಾತನಾಡುತ್ತೇವೆ. ಉತ್ಪಾದನೆಯಾದಂಥ ವಿದ್ಯುತ್ ಏನಿದೆ ಅದನ್ನು ಜನರಿಗೆ ಹಂಚಬೇಕಾದರೆ, ಪೂರೈಕೆ ಮಾಡಬೇಕಾದರೆ ಆಗುವಂಥ ಟ್ರಾನ್ಸ್‌ಮಿಷನ್ ಲಾಸ್ ಮತ್ತು ಡಿಸ್ಟ್ರಿಬ್ಯೂಷನ್ ಲಾಸ್ ಏನಿದೆ ಅದು ಬಹಳ ಜಾಸ್ತಿ ಎಂಬ ಮಾತನ್ನು ನಾವು ಹೇಳುತ್ತಾ ಇದ್ದೇವೆ. ೧೯೮೮-೮೯ ಏನಿತ್ತು, ಅದಕ್ಕಿಂತ ೧೯೮೯-೯೦ರಲ್ಲಿ ಸ್ವಲ್ಪ ಕಡಿಮೆಯಾಗಿದೆ ಎಂದು ಎಲ್ಲೋ ಓದಿದಹಾಗೆ ನನಗೆ ಜ್ಞಾಪಕ ಇದೆ. ಶೇಕಡ ೨೦ರಷ್ಟು ಟ್ರಾನ್ಸ್‌ಮಿಷನ್ ಅಂಡ್ ಡಿಸ್ಟ್ರಿಬ್ಯೂಷನ್ ಲಾಸ್ ಏನು ಆಗುತ್ತಿದೆ, ಅದನ್ನು ಕಡಿಮೆ ಮಾಡಲಿಕ್ಕೆ ಸಾಧ್ಯವಿಲ್ಲವೆ? ನಿಜವಾಗಲೂ ಅಷ್ಟು ಆಗುತ್ತಾ ಇದೆಯೇ? ನಾವು ಆ ಕಡೆ ಇದ್ದಾಗ ನಮ್ಮ ಸರ್ಕಾರದ ಪರವಾಗಿ ಜನ ಹೇಳುತ್ತಾ ಇದ್ದರು. ಆಗ ನೀವು ಹೇಳಿದ್ದಿರಿ ಎಂದು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ, ತಾವು ಅದನ್ನು ನೋಡಿಕೊಳ್ಳಬಹುದು. ಆದರೆ ಅಧಿಕಾರದಲ್ಲಿರುವಂಥ ಜನ ಯಾವುದೇ ಸರ್ಕಾರವಿರಲಿ, ಸರ್ಕಾರದ ಪ್ರಮುಖ ಹೊಣೆಗಾರಿಕೆಯಲ್ಲಿರುವಂಥ ಜನ ಹೇಳುವುದೇನೆಂದರೆ, ಇಲ್ಲ ಇಲ್ಲ ನಮ್ಮ ಅನೇಕ ಲೈನುಗಳನ್ನು ಸರಿಯಾಗಿ ಹಾಕುತ್ತಾ ಇಲ್ಲ, ಆ ದೃಷ್ಟಿಯಿಂದಾಗಿದೆ ಎಂದು.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೆ, ಟ್ರಾನ್ಸ್‌ಮಿಷನ್ ಲಾಸ್ ಬಗ್ಗೆ ಮಾನ್ಯ ಏಕಾಂತಯ್ಯನವರು ಹೇಳುತ್ತಿದ್ದಾರೆ. ಇದು ಸ್ಟೇಟ್ ಆವರೇಜ್ ೨೦ ರಿಂದ ೨೨ ಪರ್ಸೆಂಟ್ ಇದೆ. ಇದು ಕೆಲವು ಕಡೆ ೭೨ ಪರ್ಸೆಂಟ್ ಇದೆ. ೨೨ ಅಲ್ಲ ೭೨ ಪರ್ಸೆಂಟ್ ಕೆಲವು ಕಡೆ ಇದರಲ್ಲಿ ಕದಿಯುವುದು ಎಲ್ಲವನ್ನೂ ಅವರು ಒಂದೇ ಲೆಕ್ಕಕ್ಕೆ ಹಾಕುತ್ತಾರೆ. ಇದು ೭೨ ಪರ್ಸೆಂಟ್ ಇದೆ. ಇದಕ್ಕೆ ಬೇಕಾದಂಥ ಉದಾಹರಣೆಗಳು ಸಾಕಷ್ಟು ಇವೆ. ಇವತ್ತಿನದಿವಸ ನನ್ನ ಕ್ಷೇತ್ರದ ಉದಾಹರಣೆ ಕೂಡ ಇದೆ. ಮಾನ್ಯ ಏಕಾಂತಯ್ಯನವರು ರಾಜ್ಯಮಟ್ಟದಲ್ಲಿ ಹೇಳುತ್ತಾ ಇದ್ದಾರೆ. ಆದರೆ ಕೆಲವು ಕಡೆ ಇನ್ನೂ ಹೆಚ್ಚಿಗೆ ಇರುವುದಕ್ಕೆ ಕೂಡ ಸಾಧ್ಯವಿದೆ. ಇನ್ನೂ ಹೆಚ್ಚಿಗೆ ಇವೆ ಎನ್ನುವುದನ್ನು ಸರ್ಕಾರ ಗಮನಿಸಬೇಕು, ಸರ್ಕಾರದ ಗಮನಕ್ಕೆ ತರಬೇಕು ಎನ್ನುವ ದೃಷ್ಟಿಯಿಂದ ಮಾತ್ರ ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ.— ಈ ಬಗ್ಗೆ ನಾವು ಬಹಳ ದೂರ ಏನೂ ಹೋಗಬೇಕಿಲ್ಲ, ಬೆಂಗಳೂರಿನಲ್ಲಿ ಐ ಟಿ ಐ. ಡಿವಿಜನ್ ಇದೆ. ಅದನ್ನು ಸಬ್ ಡಿವಿಜನ್ ಎಂದು ಕರೆಯುತ್ತಾರೇನೋ, ಅದು ಕೂಡ ನನಗೆ ಸರಿಯಾಗಿ ಗೊತ್ತಿಲ್ಲ. ಇಲ್ಲಿ ಈ ಹಿಂದೆ ಏನೂ ಉತ್ಪಾದನೆ ಬರುತ್ತಿತ್ತು. ಈ ವರ್ಷ ಎಷ್ಟು ಬರುತ್ತಿದೆ, ಇದನ್ನು ತಾವು ನೋಡಿದರೆ, ಈ ದೇಶದಲ್ಲಿ ಕದಿಯುವವರ ಸಂಖ್ಯೆ ಜಾಸ್ತಿಯಾಗುತ್ತಿದೆ ಎನ್ನುವುದು ಕಂಡುಬರುತ್ತಿದೆ. ಇದರ ಪ್ರಮಾಣ ಕೂಡ ಜಾಸ್ತಿ ಆಗುತ್ತಿದೆ ಎನ್ನುವುದನ್ನು ತಾವು ಒಪ್ಪುತ್ತೀರಿ. ಒಳ್ಳೆಯ ಅಧಿಕಾರಿಗಳು ಇರುವ ಕಡೆ, ನಿಷ್ಠೆಯಿಂದ ಕೆಲಸ ಮಾಡುವಂಥ ಅಧಿಕಾರಿಗಳು ಇರುವ ಕಡೆ, ಶ್ರೀಮಂತರ ಪ್ರಲೋಭನೆಗೆ ಒಳಗಾಗದಂಥ ಜನ ಯಾರಿದ್ದಾರೆ ಅಲ್ಲಿ ಕಳ್ಳತನ ಸ್ವಲ್ಪ ಕಡಿಮೆಯಾಗುತ್ತದೆ. ಅವರು ಇಲ್ಲದ ಕಡೆ ಕಳ್ಳತನ ಜಾಸ್ತಿಯಾಗುತ್ತದೆ. ಇದನ್ನು ನಿಲ್ಲಿಸುವಂಥ ಒಂದು ದೃಢವಾದಂಥ ಒಂದು ನೀತಿ ತಮಗೆ ಬೇಕು. ನಾವು ಅಸಿಸ್ಟೆಂಟ್ ಇಂಜಿನಿಯರ್‌ಗಳ ಬಗ್ಗೆ ಹೇಳುವುದು ಬೇಡ. ಕೆ.ಇ.ಬಿ. ಸಬ್-ಡಿವಿಜನ್ ವಿಭಾಗಗಳಲ್ಲಿರುವ ಲೆಡ್ಜರ್ ಕ್ಲರ್ಕಗಳನು ಬದಲಾವಣೆ ಮಾಡುವುದಕ್ಕಾಗುವುದಿಲ್ಲ, ಅದು ಸಾಧ್ಯವೂ ಇಲ್ಲ. ನನ್ನ ಅನುಭವಕ್ಕೆ ಬಂದಂಥ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ತಾವು ಮೀಟರ್ ರೀಡಿಂಗ್‌ಗೆ ಕಳುಹಿಸುತ್ತೀರಿ. ಆ ಪುಸ್ತಕದಲ್ಲಿ ತಾವು ಏನಾದರೂ ಸೀರಿಯಲ್ ನಂಬರು ಹಾಕುತ್ತೀರಾ ಕೊಡತಕ್ಕ

ಬಿಲ್‌ಗೆ ಸೀರಿಯಲ್ ನಂಬರ್ ಹಾಕುತ್ತೀರಾ ಲೆಡ್ಜರ್ ಕ್ಲರ್ಕ್‌ಗೆ ಕೊಡುತ್ತಾನೆ. ಅವನು ಎಂಟ್ರಿ ಮಾಡುವುದಿಲ್ಲ. ೧೦–೫೦ ಸಾವಿರ ರೂಪಾಯಿಗೆ ಸಂಬಂಧಪಟ್ಟಂತೆ ಎಂಟ್ರಿ ಮಾಡುವುದೇ ಇಲ್ಲ. ವಾಪಸ್ಸು ತೆಗೆದುಕೊಳ್ಳುತ್ತಾನೆ. ಹಿಂಗಕ್ಕೆ ಮುಳ್ಳು ತಿರುಗಿಸುತ್ತಾನೆ. ಆ ತಿಂಗಳು ಬರುವುದಿಲ್ಲ. ಮುಂದಿನ ತಿಂಗಳು ಬರುವುದಿಲ್ಲ, ಯಾವುದೋ ಒಂದು ತಿಂಗಳು ಬಾಕಿ ಬರುತ್ತದೆ. ನಿಮ್ಮಲ್ಲಿ ಮೀಟರ್ ರೀಡರ್ಸ್ ಮತ್ತು ಲೆಡ್ಜರ್ ಕ್ಲರ್ಕ್‌ಗಳು ಕೂಡ ಸರಿಯಾಗಿ ಕೆಲಸ ಮಾಡುವುದಿಲ್ಲ. ನಿಮ್ಮಲ್ಲಿ ಅನೇಕ ಜನ ಲಾಭ ಮಾಡುವ ಒಂದೇ ಉದ್ದೇಶದಿಂದ ಸಂಪಾದನೆ ಮಾಡುವ ಉದ್ದೇಶದಿಂದ ಶ್ರೀಮಂತರ ಪ್ರಲೋಭನೆಗೆ ಒಳಗಾಗಿರುವುದರಿಂದ ಕಳ್ಳತನದ ವಿದ್ಯುತ್ ಪ್ರಮಾಣ ಜಾಸ್ತಿಯಾಗಿದೆಯೇ ಹೊರತು ತಾವು ಟಿ ಅಂಡ್ ಡಿ ಲಾಸ್ ಎಂದು ಏನು ಕರೆಯುತ್ತೀರಿ, ಅದು ಶೇಕಡಾ ೨೦ರಷ್ಟು ಇರಲಿಕ್ಕೆ ಸಾಧ್ಯವೇ ಇಲ್ಲ. ಇದು ಯಾವ ದೇಶದಲ್ಲಿಯೂ ಇಲ್ಲ. ನಾವು ನಿಮ್ಮಿಂದ ನಿರೀಕ್ಷೆ ಮಾಡುವುದು, ಇದು ನಿಮ್ಮ ಕಾಲದಲ್ಲೂ ಶೇಕಡಾ ೨೦ ಇತ್ತು. ನಮ್ಮ ಕಾಲದಲ್ಲೂ ಇದೆ ಎಂದರೆ ನಮ್ಮದು ತಕರಾರು ಇಲ್ಲ. ಇದನ್ನು ಕಡಿಮೆ ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ತಾವು ಮಾಡುವುದಾದರೆ, ತಾವು ಕಠಿಣವಾದ ನೀತಿಯನ್ನು ತೆಗೆದುಕೊಳ್ಳುವುದರ ಕಡೆಗೆ ಗಮನ ಕೊಡಬೇಕು. ಇದು ಕೇವಲ ಅಧಿಕಾರಿಗಳಿಂದ ಮಾತ್ರ ಆಗಿದೆ ಎಂದು ನಾನು ಹೇಳುವುದಿಲ್ಲ. ಅನೇಕ ಸಂದರ್ಭದಲ್ಲಿ ಲಾಭ ಪಡೆಯುವಂಥ ಜನ ಅಧಿಕಾರಿಗಳಿಗೆ ತಮ್ಮದೇ ಆದಂಥ ಮಾತುಗಳನ್ನು ಹೇಳಿ, ತಮ್ಮದೇ ಆದಂಥ ಪ್ರಲೋಭನೆಗೆ ಒಳಪಡಿಸಿ ಲಾಭ ಪಡೆಯಬಹುದು. ಆದರೆ ಆ ರೀತಿ ಲಾಭ ಪಡೆಯುತ್ತಾರೆನ್ನುವುದು ಸರ್ಕಾರಕ್ಕೆ ಕಂಡ ಮೇಲೆ, ನಿಮಗೆ ಕಂಡ ಮೇಲೆ ಅದನ್ನು ನಿಲ್ಲಿಸುವುದಕ್ಕೆ ಧೃಡವಾದಂಥ ಕಠಿಣವಾದಂಥ ಕ್ರಮ ತೆಗೆದುಕೊಳ್ಳದೇ ಹೋದರೆ, ನಾವು ನೀವು ಶಾಮೀಲಾಗಿದ್ದೇವೆನ್ನುವ ಅರ್ಥ ಬರುತ್ತದೆ. ಇವತ್ತು ಟ್ರಾನ್ಸ್‌ಮಿಷನ್ ಲಾಸ್ ಮತ್ತು ಡಿಸ್ಟ್ರಿಬ್ಯೂಷನ್ ಲಾಸ್ ಆಗುತ್ತಿದೆ, ಇದು ಅಧಿಕಾರಿಗಳು ಮತ್ತು ಬೇರೆಯವರು ಶಾಮೀಲಾಗಿ ನಡೆಯುತ್ತಿದೆಯೇ ಹೊರತು ಈ ಪ್ರಮಾಣದಲ್ಲಿ ಆಗುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ತಾವು ಆಲೋಚನೆ ಮಾಡಬೇಕು. ಬಾಕಿದಾರರ ಬಗ್ಗೆ ನಾವೂ ಹೇಳಿದ್ದೇವೆ, ನೀವು ಹೇಳಿದ್ದೀರಿ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಗೆ ಬಾಕಿ ಕಟ್ಟಬೇಕಾದವರು ಬಡವರಲ್ಲ, ಶ್ರೀಮಂತರು. ಸರ್ಕಾರ ಏನಾದರೂ ರಿಯಾಯಿತಿ ತೋರಿಸಿದರೆ, ಶ್ರೀಮಂತರಿಗೆ ಅನುಕೂಲವಾಗುತ್ತದೆ. ಈ ಬಾಕಿಯನ್ನು ಕಟ್ಟುನಿಟ್ಟಾಗಿ ವಸೂಲು ಮಾಡುವುದಕ್ಕೆ ಅಧಿಕಾರಿಗಳಿಗೆ ತಾವು ಸೂಚನೆ ಕೊಟ್ಟರೆ, ನಿಮ್ಮ ಆದಾಯ ಜಾಸ್ತಿಯಾಗುತ್ತದೆ. ಬಾಕಿ ಇರತಕ್ಕ ಕೋಟಿಗಟ್ಟಲೆ ಹಣವನ್ನು ವಸೂಲು ಮಾಡುವುದಕ್ಕೆ ದೃಢವಾದಂಥ ನೀತಿಯನ್ನು ತಾವು ಅನುಸರಿಸಬೇಕು. ಇವತ್ತಿನ ದಿವಸ ನೌಕರರ ಬಗ್ಗೆ ನಮಗೆ ಗೌರವ ಇದೆ, ದುಡಿಯುವಂಥ ಜನರ ಬಗ್ಗೆ, ಶ್ರಮ ಜೀವಿಗಳ ಬಗ್ಗೆ ನಮಗೆ ಗೌರವ ಇದೆ. ದುಡಿಯುತಕ್ಕ ಜನಗಳಿಗೆ ಸರಿಯಾದ ವೇತನ ಕೊಡಬೇಕೆಂಬುದನ್ನು ನಾನು ಒಪ್ಪುತ್ತೇನೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯಲ್ಲಿ ೪೫,೦೦೦ ಜನ ನೌಕರರು ಕೆಲಸ ಮಾಡುತ್ತಿದ್ದಾರೆ. ಇವರಿಗೆ ವಿಶೇಷವಾದಂಥ ಕೆಲವು ಸೌಲಭ್ಯ ಕೊಟ್ಟಿದ್ದೀರಿ. ಅವರ ಮನೆಗಳಲ್ಲಿ ಪುಕ್ಕಟ್ಟೆಯಾಗಿ ವಿದ್ಯುತ್ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಯಾವುದೋ ಒಂದು ಕಾಲದಲ್ಲಿ ವಿದ್ಯುತ್ ಜಾಸ್ತಿ ಇದ್ದಾಗ ಎಲ್ಲೋ ಪ್ರಾಜೆಕ್ಟ್‌ಗಳಲ್ಲಿ ಕೆಲಸ ಮಾಡುತ್ತಾರೆ ಎಂಬ ಕಾರಣದಿಂದ ಕೊಟ್ಟಿರಬಹುದು. ಆದರೆ ಅದನ್ನು ಇವತ್ತೂ ಕೂಡ ಮುಂದುವರಿಸಿಕೊಂಡು ಹೋಗುತ್ತಿರುವುದರಿಂದ ೪ ಕೋಟಿ ರೂಪಾಯಿ ವಿದ್ಯುತ್ ಮಂಡಲಿಗೆ ನಷ್ಟವಾಗುತ್ತಿದೆ. ಈ ನೌಕರರಿಗಾಗಿ ಫ್ರೀ ಆಗಿ ಕೊಡತಕ್ಕ ವಿದ್ಯುತ್ತಿನ ಬೆಲೆ ಸುಮಾರು ೪ ಕೋಟಿ ಎಂಬ ಅಂದಾಜು ಇದೆ. ಇದನ್ನು ಸರಿಪಡಿಸಲು ಸಾಧ್ಯವಿಲ್ಲವೇ? ನೀವು ಹೇಳಬಹುದು ಇದನ್ನು ನಿಲ್ಲಿಸಿದರೆ ಅವರು ಸ್ಟ್ರೈಕ್ ಮಾಡುತ್ತಾರೆ, ಬೈಯುತ್ತಾರೆ ಅಂದರೆ ಅದು ತಮಗೆ ಬಿಟ್ಟ ವಿಚಾರ. ಈ ದೇಶದಲ್ಲಿ ಸುಸಂಘಟಿತ ಮತ್ತು ಸುಶಿಕ್ಷಿತ ಜನರು ಯಾರಿದ್ದಾರೆ, ಅವರು ತಮ್ಮ ಸಂಘಟನೆಯ ಮೂಲಕ ಒತ್ತಾಯ ಮಾಡುವುದರಿಂದ ಅವರಿಗೆ ಎಲ್ಲಾ ಸೌಲಭ್ಯಗಳನ್ನು ಕೊಡಬೇಕಾಗುತ್ತದೆ ಎಂದು ಹೇಳಿದರೆ ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ. ಏನೆಂದರೆ ಈಗ ಏನು ಅಸಂಘಟಿತ ಜನ ಇದ್ದಾರೆ, ಅಂದರೆ ನಮ್ಮ ರೈತರು ಇದ್ದಾರೆ ಅವರಿಗೆ ಅನುಕೂಲ ಮಾಡಿಕೊಡಿ ಎಂದರೆ ನೀವು ಹಣದ ಕೊರತೆ ಇದೆ ಎಂದು ಹೇಳುತ್ತೀರಿ, ಇದು ಸರಿಯೇ? ಮೊನ್ನೆ ಸಿಂಧ್ಯರವರು ಗ್ರೀನ್ ಕಾರ್ಡ್‌ನಲ್ಲಿ ಕೊಡತಕ್ಕ ಅಕ್ಕಿ ಬೆಲೆಯನ್ನು ೨ ರೂಪಾಯಿಯಿಂದ ಎರಡೂವರೆ ಜಾಸ್ತಿ ಮಾಡಿರುವುದು ಸರಿಯಲ್ಲ, ಅದು ಬಡವರಿಗಾಗಿ ಕೊಡುತ್ತಿರುವುದು ಎಂದು ಕೇಳಿದ್ದಕ್ಕೆ ನೀವು ದುಡ್ಡಿಲ್ಲ ಎಂದು ಹೇಳಿದ್ದಿರಿ, ಅದು ೩೫ ಲಕ್ಷ ಕುಟುಂಬದವರಿಗೆ ಸೇರಿದಂತಹ ಒಂದು ವ್ಯವಸ್ಥೆಯಾಗಿತ್ತು. ಆದರೆ ಇಲ್ಲಿ ನೀವು ೪೫ ಸಾವಿರ ಜನರಿಗೆ ೪ ಕೋಟಿ ರೂಪಾಯಿಯ ವಿದ್ಯುತ್ತನ್ನು ಪುಕ್ಕಟೆಯಾಗಿ ಕೊಡುತ್ತಿದ್ದೀರಿ ಇದಕ್ಕೆ ನಿಮಗೆ ಏನೂ ಅನ್ನಿಸುವುದಿಲ್ಲವೆ? ಈ ಸರ್ಕಾರ ಶ್ರೀಮಂತರ ಮತ್ತು ಸುಶಿಕ್ಷಿತ ಜನರ ಪರವಾಗಿದೆಯೋ ಅಥವಾ ಬಡವರ ಪರವಾಗಿದೆಯೋ ಎಂದು ನಾನು ಕೇಳಬೇಕಾಗಿದೆ? ಅಷ್ಟೆ ಅಲ್ಲ, ವಿದ್ಯುತ್ ಮಂಡಲಿಯಲ್ಲಿ ಇನ್ನೂ ಹಲವಾರು ಅವ್ಯವಹಾರಗಳು ನಡೆಯುತ್ತಿವೆ ನನಗೆ ಅಥವಾ ನಿಮಗೆ ಮನೆಯನ್ನು ಕೊಟ್ಟಿರಿ

ಸಂಬಳದಲ್ಲಿ ಇಷ್ಟು ಎಂದು ಹಿಡಿದುಕೊಳ್ಳುತ್ತಾರೆ. ವಿದ್ಯುತ್ ಮಂಡಲಿಯಲ್ಲಿ ನೌಕರರಿಗೆ ಮನೆಗಳನ್ನು ಕೊಟ್ಟಿದ್ದಾರೆ. ಬೇರೆ ಬೇರೆ ಇಲಾಖೆಗಳಲ್ಲಿರುವಂತೆ ಸಂಬಳದ ೧೦ನೇ ೧ ಭಾಗವನ್ನು ಹಿಡಿದುಕೊಳ್ಳಬೇಕಾಗುತ್ತದೆ. ಆದರೆ ಇಲ್ಲಿ ಆ ಮನೆಗಳ ಬೆಲೆಯ ಡಿಪ್ರೀಸಿಯೇಷನ್ ತೆಗೆದು ಕೇವಲ ೫೦-೬೦ ರೂಪಾಯಿಯೆಂದು ಬಾಡಿಗೆ ನಿಗದಿ ಮಾಡಿದ್ದಾರೆ. ಏತಕ್ಕೋಸ್ಕರ ಈ ಒಂದು ನೀತಿಯನ್ನು ಅನುಸರಿಸುತ್ತೀದ್ದೀರಿ? ಬೇರೆ ಇಲಾಖೆಯಲ್ಲಿರತಕ್ಕ ಸರ್ಕಾರಿ ನೌಕರರುಗಳಿಗೆ ವಸತಿ ಗೃಹಗಳನ್ನು ಕೊಡುವಾಗ ಯಾವರೀತಿ ಬಾಡಿಗೆ ವಸೂಲು ಮಾಡುತ್ತೀರಿ ಅದೇರೀತಿಯಾಗಿ ಇವರಿಗೂ ಮಾಡಲು ತಮಗೆ ಶಕ್ಯವಿಲ್ಲವೆ? ಎಲ್ಲದಕ್ಕಿಂತ ಹೆಚ್ಚು ಇನ್ನೊಂದು ಎಲ್ಲಾ ಕಡೆ ನಡೆಯುತ್ತಿದೆ. ಅದು ಇಲ್ಲೂ ನಡೆಯುತ್ತಿದೆ ಅದೇನೆಂದರೆ ನಮ್ಮ ನೌಕರರುಗಳಿಗೆ ನಾವು ಮೆಡಿಕಲ್ ಭತ್ಯ ಮತ್ತು ಬೇರೆಬೇರೆ ಭತ್ಯಗಳನ್ನು ಕೊಡುತ್ತೇವೆ. ಈ ಮೆಡಿಕಲ್ ಭತ್ಯವನ್ನು ಒಂದು ಕಾನೂನಿನ ಪ್ರಕಾರವಾಗಿ ನಾವು ಕೊಡುತ್ತಿದ್ದೇವೆ. ಅದನ್ನು ಕೊಡೋಣ, ನಾನು ಬೇಡವೆಂದು ಹೇಳುವುದಿಲ್ಲ. ಕಾನೂನಿನಲ್ಲಿ ಏನಿದೆ ನಿಯಮಗಳು ಏನಿವೆ ಆ ಪ್ರಕಾರ ಭತ್ಯ ಕೊಡಬೇಕಾಗಿತ್ತು. ಆದರೆ ಇಲ್ಲಿ ಇದನ್ನೇ ಒಂದು ದಂಧೆ ಮಾಡಿಕೊಂಡಿದ್ದಾರೆ. ನಿಮ್ಮ ವಿದ್ಯುತ್ ಮಂಡಲಿಯಲ್ಲಿ ಬಹಳ ಅವ್ಯವಹಾರ ಇದರ ಬಾಬ್ತಿನಲ್ಲಿ ನಡೆಯುತ್ತಿದೆ. ನನ್ನ ಹತ್ತಿರ ಇದಕ್ಕೆ ಬೇಕಾದಂತಹ ಆಧಾರಗಳು ಇವೆ. ಕೆಲವು ಡಾಕ್ಟರ್‌ಗಳ ಹತ್ತಿರ ಹೋಗುತ್ತಾರೆ. ಆ ಡಾಕ್ಟರ್ ಹೆಸರು ಬರೆಯುವುದಿಲ್ಲ. ಯಾವ ಇಲಾಖೆ ಎಂಬುದನ್ನು ಬರೆಯುವುದಿಲ್ಲ. ಯಾವ ಕಛೇರಿಯಲ್ಲಿ ಕೆಲಸ ಮಾಡುತ್ತಾನೆ. ಎಂಬುದನ್ನು ಬರೆಯುವುದಿಲ್ಲ. ಆದರೆ ರೋಗದ ಹೆಸರನ್ನು ಬರೆಯುತ್ತಾನೆ. ಮತ್ತು ಸೈನ್ ಮಾಡಿಕೊಡುತ್ತಾನೆ. ಇಲ್ಲಿ ಸಾರಾಸಗಟು ಗುತ್ತಿಗೆ ತೆಗೆದುಕೊಂಡು ಏಜೆನ್ಸಿಗಳು ಇವೆ ಅವರು ಸಂಬಂಧಪಟ್ಟ ಫಾರಂಗಳಲ್ಲಿ ಡಾಕ್ಟರ್‌ರ ಸಹಿಯನ್ನು ಮಾಡಿಸಿಕೊಂಡು ಅದನ್ನು ತಮ್ಮಲ್ಲೇ ಇಟ್ಟುಕೊಂಡು ಆ ಮೇಲೆ ತಮಗೆ ಬೇಕಾದ ಔಷಧಿಗಳನ್ನು ತೆಗೆದುಕೊಂಡು ಅದರ ಮರುಪಾವತಿ ಪಡೆಯುವಂತಹ ವ್ಯವಸ್ಥೆ ನಡೆಯುತ್ತಿದೆ. ಇದು ತಮ್ಮ ಗಮನಕ್ಕೆ ಬಂದಿದ್ದರೆ ಏನು ಕ್ರಮ ತೆಗೆದುಕೊಂಡಿದ್ದೀರೆಂಬುದನ್ನು ತಿಳಿಸಬೇಕು. ನಾನು ಈ ಮಾತನ್ನು ಹೇಳುವಾಗ ನೌಕರರಿಗೆ ಕೊಡಬೇಕಾದ ಭತ್ಯವನ್ನು ಕೊಡಬಾರದೆಂದು ಹೇಳುತ್ತಿಲ್ಲ. ಇಲ್ಲಿ ನಡೆಯುತ್ತಿರುವ ಅವ್ಯವಹಾರಗಳನ್ನು ತಡೆಗಟ್ಟಲು ಪ್ರಮಾಣಿಕವಾದ ಒಂದು ವ್ಯವಸ್ಥೆಯನ್ನು ಮಾಡಬೇಕು. ಇದಕ್ಕೆ ಬೇಕಾದ ಮಾಹಿತಿಗಳನ್ನು ಬೇಕಾದರೆ ತಮಗೆ ಒದಗಿಸುತ್ತೇನೆ. ಕೇವಲ ನೌಕರರಾಗಲಿ ಡಾಕ್ಟರ್‌ರಾಗಲಿ ಶಿಕ್ಷೆ ಮಾಡಿಸಬೇಕೆಂದು ನಾನು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿಲ್ಲ. ಈ ಮಂಡಲಿ ಯಲ್ಲಿ ನಡೆಯುತ್ತಿರುವ ವ್ಯವಸ್ಥೆಯನ್ನು ಸರಿಪಡಿಸಬೇಕೆಂಬ ಉದ್ದೇಶದಿಂದಮಾತ್ರ ನಾನು ಹೇಳುತ್ತಿದ್ದೇನೆ.

ಇನ್ನು ಪೋಲ್‌ಗಳ ಬಗ್ಗೆ ಹೇಳಬೇಕಾದರೆ. ಎಲ್ಲಿ ಉತ್ಪಾದನೆ ಮಾಡುತ್ತಾರೋ ಎಂಬುದು ಗೊತ್ತಿಲ್ಲ. ಇದನ್ನು ಯಾರಿಗೆ ಗುತ್ತಿಗೆಗೆ ಕೊಟ್ಟಿದ್ದಾರೆ ಎಂಬುದನ್ನು ನೋಡಬೇಕು. ಇದು ಬಹಳ ಮನನೋಯಿಸುವ ಸಂಗತಿಯಾಗಿದೆ. ಈ ದೇಶದಲ್ಲಿ ಯಾವುದೇ ಅಧಿಕಾರ ಇರಬಹುದು ಲಾಭ ಬರುವಂತಹ ವ್ಯವಹಾರವನ್ನು ರಾಜಕಾರಣಿ ಹಾಗೂ ಅಧಿಕಾರಿ ಇಬ್ಬರು ಶಾಮೀಲಾಗದೆ ಮಾಡಲು ಸಾಧ್ಯವಿಲ್ಲ ಅಧಿಕಾರಿಗಳು ಕೂಡ ತಾವು ನಿವೃತ್ತಿ ಹೊಂದಿದ ಮೇಲೆ ಏನೇನು ಮಾಡುತ್ತಾರೆ ಎಂಬುದನ್ನು ಕೂಡ ನೋಡಬೇಕಾಗುತ್ತದೆ. ಈ ಅಧಿಕಾರಿಗಳು ಅಂದರೆ ಚೀಫ್ ಇಂಜಿನಿಯರ್ ಆಗಲಿ ಮತ್ತೊಬ್ಬರಾಗಲಿ ಕೆಲಸ ಬಿಡುವುದೆ ತಡ ತಮ್ಮ ತಮ್ಮ ಮಕ್ಕಳಿಗೆ ಈ ಮಂಡಲಿಯಲ್ಲಿ ವ್ಯವಹಾರಗಳನ್ನು ಮಾಡಿಸಿಕೊಡತಕ್ಕಂಥಹ ಪ್ರವೃತ್ತಿ ಈ ದೇಶದಲ್ಲಿ ಬೆಳೆದು ಬಂದಿದೆ.

ಅದಕ್ಕಿಂತಲೂ ನಾನು ಹೆಚ್ಚಾಗಿ ಹೇಳುತ್ತೇನೆ. ನನಗೆ ಜ್ಞಾಪಕ ಇದೆ, ನಮ್ಮ ಅಧಿಕಾರಿಗಳ ಎಷ್ಟೊಂದು ಅಸಡ್ಡೆಯಿಂದ ಕೆಲಸ ಮಾಡುತ್ತಾರೆ ಅಂದರೆ ಇವತ್ತಿನ ದಿವಸ ಏನಾದರೂ ತುಮಕೂರಿಗೆ ಕಂಬಗಳು ಬೇಕೆಂದರೆ. ಬೆಂಗಳೂರಿನಿಂದ ಕಂಬಗಳನ್ನು ಕೊಡುವುದಿಲ್ಲ. ಅದಕ್ಕೆ ಬದಲಾಗಿ ಧಾರವಾಡದಿಂದ ತುಮಕೂರಿಗೆ ಕಂಬ ತರಿಸಲಿಕ್ಕೆ ಹೇಳುತ್ತಾರೆ. ಇದನ್ನು ಏತಕ್ಕೆ ಮಾಡುತ್ತಾರೆಂದರೆ, ಪೋಲು ನಿರ್ಮಾಣ ಮಾಡತಕ್ಕವನಿಗೆ ಲಾಭ ಮಾಡಲಿಕ್ಕೆ, ಅವನು ಬೆಂಗಳೂರಿನಲ್ಲಿಯೂ ಮಾಡುತ್ತಾನೆ. ಧಾರವಾಡದಲ್ಲಿಯೂ ಮಾಡುತ್ತಾನೆ ಆದರೆ ಅವನು ಹೇಳುವುದು. ಬೆಂಗಳೂರಿನಲ್ಲಿ ಸ್ಟಾಕ್ ಇಲ್ಲ, ಧಾರವಾಡದಿಂದ ಕಳುಹಿಸುತ್ತೇನೆಂದು ಇವರು ಆಗಲಿ ಎಂದು ಹೇಳುತ್ತಾರೆ. ಆಗ ಅವನು ಅದೇ ಕಂಪನಿಯವನು ಬೆಂಗಳೂರಿನಿಂದಲೇ ತುಮಕೂರಿಗೆ ಕಳುಹಿಸುತ್ತಾನೆ. ಲೆಕ್ಕ ಮಾತ್ರ ಧಾರವಾಡದಿಂದ ತುಮಕೂರಿಗೆ ಬಂತು ಎಂದು ತೋರಿಸುತ್ತಾನೆ. ನಾನು ಹೇಳುವಂಥ ಮಾತನ್ನು ರುಜುವಾತು ಮಾಡುತ್ತೇನೆ. ಈ ಮಾತನ್ನು ನಾನು ಏತಕ್ಕೋಸ್ಕರ ಹೇಳುತ್ತಿದ್ದೇನೆ ಎಂದರೆ, ಸಂಬಂಧಪಟ ಅಧಿಕಾರಿಗಳು ನಿಜವಾಗಿಯೂ ರಾಜ್ಯದ ಹಿತವನ್ನು ಗಮನದಲ್ಲಿಟ್ಟುಕೊಳ್ಳದೆ ಬೇರೆಯವರಿಗೆ ಲಾಭ ಮಾಡಬೇಕೆಂಬ ದೃಷ್ಟಿಯಿಂದ ತಮ್ಮ ಆಡಳಿತವನ್ನು ನಡೆಸುವಂಥ ಪ್ರವೃತ್ತಿ ಏನಿದೆ ಇದು ಕಂಬಿಗೆ ಸೀಮಿತವಾಗಿದೆಯೆಂದು ಹೇಳುವುದಿಲ್ಲ. ಈ ದೇಶದಲ್ಲಿರತಕ್ಕ ಸರ್ಕಾರಿ ಸ್ವಾಮ್ಯದಲ್ಲಿರತಕ್ಕ ಕಂಪನಿಗಳ

ಅಧಿಕಾರಿಗಳು ಈ ಪ್ರವೃತ್ತಿಯನ್ನು ಏನು ಹೊಂದಿದ್ದಾರೆ, ಅದನ್ನು ತಡೆಹಿಡಿಯಲಿಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕು. ಮಾನ್ಯ ಮಂತ್ರಿಗಳು ಕೆ.ಇ.ಬಿ.ಯಿಂದ ರೈತರಿಗೆ ಮಾಸಲಾತಿ ಮೇಲೆ ನಾವು ವಿದ್ಯುತ್ ಪೂರೈಕೆ ಮಾಡುತ್ತೇವೆಂದು ಹೇಳಿದರು, ಮಾಸಲಾತಿ ಇಲ್ಲ. ಅದು ಅವರು ತಪ್ಪು ಹೇಳಿರಬಹುದು, ತಾವು ಆದ್ಯತೆಯ ಮೇಲೆ ಕೊಡುತ್ತಿದ್ದೀರಿ. ಇವೊತ್ತು ಅನೇಕ ಜಿಲ್ಲೆಗಳಲ್ಲಿ, ಬೇರೆ ಬೇರೆ ಜಿಲ್ಲೆಗಳ ವಿಚಾರ ಗೊತ್ತಿಲ್ಲ. ಕೋಲಾರ ಜಿಲ್ಲೆ ಎಂದು ಕಾಣುತ್ತದೆ. ಅನೇಕ ಜಿಲ್ಲೆಗಳಲ್ಲಿ, ಒಂದೆರಡು ವರ್ಷಕ್ಕಿಂತ ಹೆಚ್ಚು ಕಾಲದಿಂದ ವಿದ್ಯುತ್ ಪೂರೈಕೆ ಮಾಡಿಲ್ಲ. ನೀವು ದೊಡ್ಡ ದೊಡ್ಡ ಬಂಡವಾಳದಾರರಿಗೆ, ಹಣ ಹಾಕಿದ್ದಾರೆ ಎನ್ನುವ ರೂಪದಲ್ಲಿ ಅವರಿಗೆ ಬೇಕಾದಂಥ ವಿದ್ಯುತ್ ಸರಬರಾಜು ಮಾಡಲಿಕ್ಕೆ ಆದ್ಯತೆಯ ಮೇಲೆ ಕೊಟ್ಟರೆ ನಮ್ಮ ಗತಿ ಏನು? ಈ ದೇಶದಲ್ಲಿ ಉತ್ಪಾದನೆಯಾದಂಥ ವಿದ್ಯುತ್‌ನಲ್ಲಿ ಶೇಕಡ ೩೦ರಷ್ಟು ರಿಯಾಯಿತಿಯಲ್ಲಿ ತಾವು ಕೊಡುತ್ತಿದ್ದೀರಿ. ಅದರ ಜೊತೆಯಲ್ಲಿ ಅರ್ಥ ಮಾಡಿಕೊಳ್ಳಬೇಕು. ಇವೊತ್ತಿನ ದಿವಸ ಸಾಲಮಾಡಿ, ೩೦ರಿಂದ ೫೦ ಸಾವಿರ ರೂಪಾಯಿ ಸಾಲ ಮಾಡಿ, ಅವನು ಕೊಳವೆ ಬಾವಿ ತೆಗಸಿ ಮೋಟಾರ್ ಹಾಕಿಸಿ ವರ್ಷಗಟ್ಟಲೆ ವಿದ್ಯುತ್‌ಗೆ ಕಾಯುವುದಾದರೆ, ಅವನು ಪುನಃ ಚೇತನಗೊಳ್ಳಲಿಕ್ಕೆ ಖಂಡಿತ ಸಾಧ್ಯವಿಲ್ಲ. ಅದು ಎಷ್ಟೇ ಇರಲಿ, ಆದ್ಯತೆಯ ಮೇಲೆ ಕನಿಷ್ಠಪಕ್ಷ ಆರು ತಿಂಗಳೊಳಗೆ, ಆದರೂ ಸಹ ನೀವು ಈ ದೇಶದಲ್ಲಿ ಯಾವುದೇ ರೈತರಿಂದ ವ್ಯವಸಾಯದ ಉತ್ಪನ್ನವನ್ನು ಹೆಚ್ಚಿಸುವ ದೃಷ್ಟಿಯಿಂದ ಬೇಡಿಕೆ ಬರಲಿ, ಅವನಿಗೆ ತಾವು ಸಹಾಯ ಮಾಡಬೇಕು. ಅದಕ್ಕೆ ಬೇಕಾದಂಥ ನೀತಿಯನ್ನು ತಾವು ಅನುಸರಿಸಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದರ ಜೊತೆಯಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದು ಇದ್ದೆ. ಈಗ ಕಾಲದ ಅಭಾವದಿಂದ ಕೆಲವು ವಿಚಾರಗಳನ್ನು ಮಾತ್ರ ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ದೇಶದ ರೈತನ ಕೃಷಿ ಉತ್ಪನ್ನ ಹೆಚ್ಚು ಮಾಡಲಿಕ್ಕೆ ತನ್ನ ಉತ್ಪಾದನೆಯ ಶಕ್ತಿಯನ್ನು ಹೆಚ್ಚು ಮಾಡಲಿಕ್ಕೆ ತಾವು ಖಂಡಿತವಾಗಿ ಸಹಾಯ ಮಾಡಬೇಕಾದರೆ. ಒಂದು ದೃಢವಾದ ನೀತಿಯನ್ನು ಅನುಸರಿಸಬೇಕು. ಅದು ರೈತನ ಪರವಾದಂಥ ನೀತಿಯಾಗಿರಬೇಕು. ಅದರ ಜೊತೆಗೆ ಒಂದು ಆದೇಶವನ್ನು ಹೊರಡಿಸಬೇಕು. ಯಾರು ಯಾರದು ೬ ತಿಂಗಳಿಗಿಂತಲೂ ಜಾಸ್ತಿಯಾಗಿದೆ, ಯಾರಿಗೆ ವಿದ್ಯುತ್ ಪೂರೈಕೆಯಲ್ಲಿ ವಿಳಂಬವಾಗಿದೆ, ಆ ಎಲ್ಲಾ ಜನರಿಗೂ, ಆ ರೈತರು ಯಾವುದೇ ಮೂಲೆಯಲ್ಲಿರಲಿ, ಒಂದೆರಡು ವಾರಗಳಲ್ಲಿ ಅವರಿಗೆ ವಿದ್ಯುತ್ ಪೂರೈಕೆ ಮಾಡುತ್ತೇವೆಂಬ ಆಶ್ವಾಸನೆಯನ್ನು ಕೊಡಬೇಕು. ನಿಜವಾಗಿಯೂ ಕೂಡ ವಿದ್ಯುತ್ ಪೂರೈಕೆ ಆಗದಿದ್ದರೆ, ಅವರು ಮತ್ತಷ್ಟು ಸಂಕಷ್ಟದಿಂದ ಬಳಲಬೇಕಾಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವೊತ್ತು ಈ ದೊಡ್ಡ ಬೇಡಿಕೆಗಳ ಬಗ್ಗೆ ಚರ್ಚೆ ಆರಂಭವಾಗಿದೆ. ಕೇವಲ ಒಂದು ಗಂಟೆಯಲ್ಲಿ ಸರ್ಕಾರೀ ಸ್ವಾಮ್ಯದಲ್ಲಿರತಕ್ಕ ೨೯ ಕಂಪನಿಗಳ ಬಗ್ಗೆ ಮತ್ತು ಅನೇಕ ಇಲಾಖೆಗಳ ಬೇಡಿಕೆಗಳ ಬಗ್ಗೆ ಮಾತನಾಡಬೇಕೆಂದರೆ, ಸಾಧ್ಯವಾಗುವುದಿಲ್ಲ. ನಾನು ಇವೊತ್ತು ಏನು ಮಾತನಾಡಿದ್ದೇನೆ, ನಿಜಕ್ಕೂ ಸಹ ಕೆಲವೇ ಮಂಡಲಿಗಳಿಗೆ, ನಿಗಮಕ್ಕೆ ಸಂಬಂಧಪಟ್ಟರೂ ಸಹ ಈ ಒಂದು ಪ್ರವೃತ್ತಿ ಅಥವಾ ಕಾರ್ಯವೈಖರಿ ಏನಿದೆ ಇದು ನಿಜವಾಗಿಯೂ ಎಲ್ಲಾ ಮಂಡಲಿಗಳಿಗೂ ಕೂಡ ಅನ್ವಯವಾಗುತ್ತದೆ. ಈ ಒಂದು ಮಂಡಳಿಗಳ ಕಾರ್ಯನಿರ್ವಹಣೆಯನ್ನು ಸರಿಪಡಿಸುವುದರ ಮುಖೇನ, ಈ ಕೈಗಾರಿಕೆಗಳ ಉತ್ಪನ್ನವನ್ನು ಹೆಚ್ಚು ಮಾಡಲಿಕ್ಕೆ ಬೇಕಾದಂಥ ಹೊಸ ಕೈಗಾರಿಕೆಯ ನೀತಿಯನ್ನು ರೂಪಿಸಿದರೂ ಪರವಾಯಿಲ್ಲ, ಇವೊತ್ತಿನ ದಿವಸ ಒಂದು ದೃಢವಾದಂಥ ನೀತಿಯಲ್ಲಿ ಅದನ್ನು ಜಾರಿ ಮಾಡಬೇಕೆಂದು ಹೇಳುತ್ತೇನೆ. ಇನ್ನು ರೇಷ್ಮೆ ಸಚಿವರು ಮಂಡಿಸಿದಂಥ ಬೇಡಿಕೆಗಳ ಬಗ್ಗೆ ಮತ್ತು ಉಳಿದ ಬೇಡಿಕೆಗಳ ಬಗ್ಗೆ, ನನ್ನ ಸ್ನೇಹಿತರಾದಂಥ ಸಿಂಧ್ಯ ಅವರು ಮಾತನಾಡುವುದರಿಂದ. ಮತ್ತೆ ತಮ್ಮ ಅಪ್ಪಣೆಯ ಮೇರೆಗೆ ನನ್ನ ಮಾತನ್ನು ಪೂರೈಸುತ್ತೇನೆ. ತಾವು ಇಷ್ಟು ಕಾಲ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ರಾಜೂಗೌಡ (ಹನೂರು).—ಮಾನ್ಯ ಉಪಾಧ್ಯಕ್ಷಣಿಯವರೇ, ಈ ಸದನದ ಮುಂದೆ ಮಂಡಿಸಿರತಕ್ಕಂತಹ ಎಲ್ಲಾ ಬೇಡಿಕೆಗಳನ್ನು ಪುರಸ್ಕರಿಸುತ್ತಾ, ಎಲ್ಲಾ ಬೇಡಿಕೆಗಳ ಬಗ್ಗೆ ಮಾತನಾಡುವುದಕ್ಕೆ ಸಮಯದ ಅಭಾವವಿರುವುದರಿಂದ ನನಗೆ ಪ್ರಿಯವಾಗಿರತಕ್ಕಂತಹ ರೇಷ್ಮೆ ಇಲಾಖೆಯ ಬಗ್ಗೆ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಪ್ರತಿ ವರ್ಷದಲ್ಲಿ ಸಾವಿರಾರು ಕೋಟಿ ರೂಪಾಯಿ ವಿದೇಶಿ ವಿನಿಮಯ ಗಳಿಸತಕ್ಕಂತಹ ಲಕ್ಷಾಂತರ ಜನರಿಗೆ ಉದ್ಯೋಗ ಒದಗಿಸತಕ್ಕಂತಹ ಈ ಒಂದು ಇಲಾಖೆಯನ್ನು ಎಲ್ಲರೂ ಕಡೆಗಣಿಸುತ್ತಿದ್ದಾರೆಂದು ಹೇಳಿದರೆ ತಪ್ಪಾಗುವುದಿಲ್ಲವೆಂದು ನನ್ನ ಅನಿಸಿಕೆ. ೧೯೮೭–೮೮, ೧೯೮೮-೮೯ರ ಇಲಾಖೆಯ ವರದಿಯನ್ನು ನೋಡಿದರೆ ಈ ರೇಷ್ಮೆ ಕೈಗಾರಿಕೆಗಳಿಗೆ ಸಂಬಂಧಪಟ್ಟಂತಹ ವರದಿಯನ್ನು ೪ ಪುಟದಲ್ಲಿ ಸೇರಿಸಿದ್ದಾರೆ. ಇದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಈ ಪರಿಪಾಠವನ್ನು ಕೈಬಿಟ್ಟು ಮುಂದಿನ ವರ್ಷದಿಂದ ರೇಷ್ಮೆ ಇಲಾಖೆಯ ವರದಿಯನ್ನು ಸರಿಯಾಗಿ ಕೊಡಬೇಕೆಂದು ಹೇಳಬಯಸುತ್ತೇನೆ. ಮೊದಲು ಈ ಇಲಾಖೆಯನ್ನು ಸಚಿವ ಸಂಪುಟದ ಮಂತ್ರಿಯವರಿಗೆ ಒಪ್ಪಿಸುತ್ತಿದ್ದರು. ಈಗ ರಾಜ್ಯ ಮಂತ್ರಿಯವರಿಗೆ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು

ಸಂಪುಟವನ್ನು ವಿಸ್ತರಣೆ ಮಾಡತಕ್ಕಂತಹ ಸಂದರ್ಭದಲ್ಲಿ ಈ ರಾಜ್ಯ ಮಂತ್ರಿಗಳನ್ನು ಸಂಪುಟ ದರ್ಜೆಗೆ ಏರಿಸಬೇಕೆಂದು ಕೇಳಿಕೊಂಡು ಇಲಾಖೆಯ ಬಗ್ಗೆ ಕೆಲವು ವಿಚಾರಗಳನ್ನು ಹೇಳುತ್ತೇನೆ. ಕರ್ನಾಟಕ ರೇಷ್ಮೆ ಜಗತ್ತಿನಾದ್ಯಂತ ಪ್ರಸಿದ್ಧವಾದುದು. ಇದರ ಸೊಬಗು, ಸೌಂದರ್ಯ, ನಾವಿನ್ಯತೆ ಶ್ರೀಮಂತಿಕೆ ಬೇರೆ ಯಾವುದರಲ್ಲೂ ಕೂಡ ತೆಂಬಲಿಕ್ಕೆ ಸಾಧ್ಯವಿಲ್ಲ, ಇದಕ್ಕೆ ಸುಮಾರು ೨೦೦ ವರ್ಷಗಳ ಚರಿತ್ರೆ ಇದೆ. ಇದು ಈ ರಾಜ್ಯದ ಕಲ್ಪವೃಕ್ಷ ಮತ್ತು ಕಾಮಧೇನುವಾಗಿದೆ. ಕರ್ನಾಟಕ ಎಂದರೆ ರೇಷ್ಮೆ, ರೇಷ್ಮೆ ಎಂದರೆ ಕರ್ನಾಟಕ ಎಂಬ ಪರಿಸ್ಥಿತಿ ಇದೆ. ಕರ್ನಾಟಕದಲ್ಲಿ ಎಲ್ಲಾ ಕಲ್ಚರ್ ಇದೆಯೋ ಅದೇ ಸಿರಿ ಕಲ್ಚರ್. ಸಿರಿ ಎಂದರೆ ಸಂಪತ್ತು, ಕಲ್ಚರ್ ಎಂದರೆ ಸಂಸ್ಕೃತಿ. ಸಂಪತ್ತಿನಿಂದ ಕೂಡಿದಂತಹ ಸಂಸ್ಕೃತಿ ಈ ಇಲಾಖೆ. ಅಂದರೆ ಸಿರಿಕಲ್ಚರ್ ಇಲಾಖೆ ಎಂದು ಕರೆಯುತ್ತಾರೆ. ಈ ಇಲಾಖೆಯನ್ನು ಸೋಗು ಮೋರೆ ಎಂದು ಹೇಳಬಹುದು. ಸೋಗು ಎಂದರೆ ಸೊಗಸಾಗಿರತಕ್ಕಂಥಾದ್ದು ಸಂಪತ್ತಿನಿಂದ ಕೂಡಿರತಕ್ಕಂಥಾದ್ದು ಮೋರೆ ಎಂದರೆ ಮುಖ. ಸೊ ಎಂದರ ಸೊಪ್ಪು ಗೂ ಎಂದರೆ ಗೂಡು, ಮು-ಮೊಟ್ಟೆ, ರೇ-ರೇಷ್ಮೆ ಸೋಗು ಮೋರೆ ಅಂದರೆ ಸಂಪತ್ತಿನಿಂದ ಕೂಡಿರತಕ್ಕಂತಹ ಲಕ್ಷಣವಾದ ಇಲಾಖೆ ಎಂಬ ಮಾತನ್ನು ಒಂದೇ ವಾಕ್ಯದಲ್ಲಿ ಹೇಳಲಿಚ್ಛೆಪಡುತ್ತೇನೆ. ದುಡಿಮೆಗೆ ಪ್ರಧಾನವಾಗಿರತಕ್ಕಂತಹ ಕೈಗಾರಿಕೆ ಇದು. ಅತಿ ಕಡಿಮೆ ಬಂಡವಾಳದಲ್ಲಿ ವರ್ಷ ಪೂರ್ತಿ ಹೆಚ್ಚಿನ ಜನರಿಗೆ ಉದ್ಯಮವನ್ನು ಒದಗಿಸತಕ್ಕಂತಹ ಒಂದು ಹೆಸರುವಾಸಿಯಾಗಿರತಕ್ಕಂತಹ ಗೃಹ ಕೈಗಾರಿಕೆ ಇದು, ಹುಳುಸಾಕಾಣಿಕೆಯಿಂದ ಹಿಡಿದು ರೇಷ್ಮೆಬಟ್ಟೆ ಆಗುವತನಕ ವರ್ಷದ ಪೂರ್ತಿ ಸುಮಾರು ೫ ಜನರಿಗೆ ಉದ್ಯೋಗವನ್ನು ಕೊಡತಕ್ಕಂತಹ ಕೈಗಾರಿಕೆ ಇದಾಗಿದೆ. ಇದಕ್ಕೆ ಋತುಮಾನದ ಅಡ್ಡಿ ಇಲ್ಲದೆ ವರ್ಷ ಪೂರ್ತಿ ಕೆಲಸವನ್ನು ಕೊಡತಕ್ಕಂತಹ ರೇಷ್ಮೆಕೈಗಾರಿಕೆಯನ್ನು ಬಿಟ್ಟರೆ ಬೇರೆ ಯಾವುದೂ ಈ ರೀತಿಯಾಗಿಲ್ಲ. ಮೈಸೂರು ತುಮಕೂರು ಬೆಂಗಳೂರು ಈ ಜಿಲ್ಲೆಗಳಲ್ಲಿ ಈ ಕೃಷಿ ಉದ್ಯಮವಿಲ್ಲದಿದ್ದರೆ ಸತತವಾಗಿ ಬಂಗಾಲ ಪ್ರದೇಶವಾಗುತ್ತಿತ್ತು. ಎಂದು ಹೇಳಲು ಇಷ್ಟಪಡುತ್ತೇನೆ. The severity of drought is not felt in the area where there is sericuture. ಅಂದರೆ ಕ್ಷಾಮದ ಬಿಸಿ ಅಥವಾ ತಾಪ ಈ ಜಿಲ್ಲೆಗಳಿಗೆ ತಟ್ಟುವುದಿಲ್ಲವೆಂಬ ಮಾತನ್ನು ಹೇಳುತ್ತೇನೆ. ಅತಿ ಕಡಿಮೆ ಬಂಡವಾಳದ ಕೈಗಾರಿಕೆಯಾಗಿ ದುಡಿಮೆಗೆ ಪ್ರಧಾನವಾಗಿರತಕ್ಕಂತಹ ಕೈಗಾರಿಕೆಗೆ ಒತ್ತು ಕೊಟ್ಟು ಇದನ್ನು ಗ್ರಾಮಾಂತರ ಪ್ರದೇಶಗಳಿಗೆ ವಿಸ್ತರಿಸಿದಾಗ ನಿರುದ್ಯೋಗ ಸಮಸ್ಯೆ ಬಗೆ ಹರಿಯುತ್ತದೆ ಮತ್ತು ಬಡವರ ಆರ್ಥಿಕ ಸ್ಥಿತಿ ಉತ್ತಮಗೊಳ್ಳುತ್ತದೆಂದು ಹೇಳುತ್ತೇನೆ. ಯಾವುದೇ ಅಭಿವೃದ್ಧಿ ಯೋಜನೆಗೆ ಶಕ್ತಿಯನ್ನು ತುಂಬಿ ಕೊಡತಕ್ಕಂತಹ ಒಂದು ಸಾಮರ್ಥ್ಯವನ್ನು ಈ ರೇಷ್ಮೆ ಉದ್ಯಮ ಪಡೆದಿದೆ. ಜವಾಹರ್ ರೋಜ್‌ಗಾರ್ ಯೋಜನೆ ಮಹಿಳೆಯರ ಅಭಿವೃದ್ಧಿ ಯೋಜನೆ, ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ, ಇಂತಹ ಅನೇಕ ಯೋಜನೆಗಳಿಗೆ ಇದು ಹೆಚ್ಚು ಬೆಂಬಲವನ್ನು ನೀಡುತ್ತದೆ. ಇವತ್ತಿನ ದಿವಸ ಕಾಫಿ ಉದ್ಯಮ ನಷ್ಟದಲ್ಲಿದೆ ಕಾಫಿ ಉದ್ಯಮದಲ್ಲಿ ಹೇಳುವುದಾದರೆ ಕಾಫಿ ಬೆಳೆಯುತಕ್ಕಂತಹ ಪ್ರದೇಶದಲ್ಲಿ ಶೇಕಡಾ ೫ ರಿಂದ ೧೦ ರಷ್ಟು ಪ್ರದೇಶದಲ್ಲಿ ಹಿಪ್ಪು ನೇರಳೆ ಸೊಪ್ಪನ್ನು ಅದರ ನೆರಳಾಗಿ ಬೆಳೆಸಿದಾಗ ಕಾಫಿ ಉದ್ಯಮಕ್ಕೆ ಹಾನಿಯಾಗಿದೆ ಹೆಚ್ಚಿಗೆ ರೇಷ್ಮೆಯನ್ನು ಬೆಳೆಸಲು ಅನುಕೂಲವಾಗುತ್ತದೆ. ಇಂತಹ ಕೃಷಿಯನ್ನು ರಾಜ್ಯದಲ್ಲಿ ನಾವು ಉಪ-ಕಸುಬನ್ನಾಗಿ ಮಾಡಿಕೊಳ್ಳಬೇಕೆಂದು ನಾನು ಸರಕಾರಕ್ಕೆ ಹೇಳುತ್ತೇನೆ. ಕಳೆದ ಸಾರಿ ನನ್ನ ಬೇಡಿಕೆಯನ್ನು ಈ ಸದನದ ಮುಂದಿಟ್ಟಿದ್ದೇನೆ, ಏಕೆಂದರೆ ಪ್ರತಿಯೊಂದು ಕ್ಷೇತ್ರದಲ್ಲೂ ಕೂಡ ಇದು ಸಾವಿರಾರು ಕೋಟಿ ರೂಪಾಯಿ ವಿದೇಶಿ ವಿನಿಮಯ ಗಳಿಸುತ್ತಿದೆ ಎಂದು ಕೂಡ ಪ್ರತಿಪಾದನೆ ಮಾಡಿದ್ದಾರೆ. ಇದರಿಂದ ಪ್ರತ್ಯೇಕ ಪರೋಕ್ಷವಾಗಿ ಸುಮಾರು ೩೦ ಲಕ್ಷ ಜನರಿಗೆ ಕೆಲಸ ಕೊಡುತ್ತಿದ್ದೇವೆ. ಇಂತಹ ಈ ಇಲಾಖೆಯನ್ನು ಎರಡಾಗಿ ವಿಭಾಗ ಮಾಡಿ ಒಂದು ಅಭಿವೃದ್ಧಿಯ ಭಾಗ ಮತ್ತೊಂದು ಆಡಳಿತಾತ್ಮಕ ಭಾಗವೆಂದು ಮಾಡಿ ಇದಕ್ಕೆ ಇಬ್ಬರು ನಿರ್ದೇಶಕರನ್ನು ನೇಮಿಸಬೇಕೆಂದು ನಾನು ಹಿಂದಿನಿಂದ ಕೇಳುತ್ತಿದ್ದೇನೆ ಆದರೆ ಇದು ಆಗಲಿಲ್ಲ. ಇನ್ನು ಮುಂದಾದರೂ ಇಬ್ಬರು ನಿರ್ದೇಶಕರನ್ನು ನೇಮಿಸಬೇಕು ಮತ್ತು ಈ ಇಲಾಖೆಯ ಬಗ್ಗೆ ಹೆಚ್ಚು ಅನುಭವವಿರುವಂತಹ ಇದರ ಬಗ್ಗೆ ಅರಿತು ನುರಿತಂತಹವರು ಯಾರಿದ್ದಾರೆ ಅವರನ್ನು ನಿರ್ದೇಶಕರನ್ನಾಗಿ ನೇಮಕ ಮಾಡಬೇಕೆಂದು ನನ್ನ ಸಲಹೆ ಇದೆ.

ಈ ಒಂದು ಕೋರಿಕೆಯನ್ನು ಮತ್ತು ಬೇಡಿಕೆಯನ್ನು ಸರ್ಕಾರ ಇದುವರೆಗೂ ಈಡೇರಿಸಲಿಲ್ಲ ಬಹುಶಃ ಅದಕ್ಕೆ ಕಾರಣ ಏನು ಎಂದು ಗೊತ್ತಾಗಲಿಲ್ಲ. ೧೦ ಜನ ಜಾಯಿಂಟ್ ಡೈರೆಕ್ಟರ್‌ರವರು ಇರುವಾಗ ಇಬ್ಬರು ಡೈರೆಕ್ಟರ್‌ಗಳಿದ್ದರೆ ಏನು ತಪ್ಪಾಗುತ್ತದೆ ? ಈ ವಿಚಾರವನ್ನು ಮಾನ್ಯ ಮಂತ್ರಿಗಳು ಗಮನದಲ್ಲಿ ಇಟ್ಟುಕೊಂಡು ಆದಷ್ಟು ಬೇಗ ಇದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ವಿಶ್ವಬ್ಯಾಂಕ್‌ನ ನೆರವಿನಿಂದ ಈ ಇಲಾಖೆ ಏನು ಸಾಧನೆಯನ್ನು ಮಾಡಿದೆ ಎಂಬುದನ್ನು ಕೂಲಂಕುಷವಾಗಿ ಯೋಚನೆ ಮಾಡಬೇಕಾಗಿದೆ. ರೇಷ್ಮೆ ಉತ್ಪಾದನೆಯಲ್ಲಿ ೨ ವರ್ಷಗಳ ಹಿಂದೆ

ಜಪಾನ್‌ನ್ನು ಭಾರತ ಹಿಂದಕ್ಕೆ ಹಾಕಿತು. ನಮ್ಮ ಭಾರತ ಇಡೀ ಪ್ರಪಂಚದಲ್ಲೇ ಇವತ್ತು ೨ ನೇ ಸ್ಥಾನದಲ್ಲಿದೆ. ರೇಷ್ಮೆ ಉತ್ಪಾದನೆಯಲ್ಲಿ ಪ್ರಮುಖ ರಾಷ್ಟ್ರಗಳಾಗಿರುವ ಜಪಾನ್, ಸೌತ್ ಕೊರಿಯ ಇವು ಹಿಂದೆ ಸರಿದಿವೆ. ಕಾರಣ ಏನೆಂದರೆ ಈ ರೇಷ್ಮೆ ಕೃಷಿ ಏನಿದೆ ಇದು ಶೀತೋಷ್ಣ ವಲಯಕ್ಕಿಂತ ಪೂರ್ಣವಾಗಿ ಉಷ್ಣ ವಲಯಕ್ಕೇ ಸೀಮಿತವಾಗಿದೆ. ಇದು ಇಡೀ ಭಾರತಕ್ಕೇ ಅನ್ವಯಿಸತಕ್ಕ ಒಂದು ಕೃಷಿ ಉದ್ಯೋಗವಾಗಿದೆ. ಇಡೀ ವರ್ಷ ಇಲ್ಲಿ ಬಿಸಿಲು ಇರುವುದರಿಂದ ಈ ದೇಶದಲ್ಲಿ ರೇಷ್ಮೆ ಒಂದು ಕೃಷಿ ಉದ್ದಿಮೆಯಾಗಿ ಬೆಳೆಯಲು ಅವಕಾಶ ಇದೆ. ಗ್ರಾಮಾಂತರ ಪ್ರದೇಶದಲ್ಲಿ ನೆಲ, ಜಲ ಧಾರಾಳವಾಗಿ ಸಿಕ್ಕುವುದರಿಂದ ಈ ಕೃಷಿ ನಮ್ಮ ದೇಶಕ್ಕೆ ಹೇಳಿ ಮಾಡಿದಂತಿದೆ. ನಾನು ಈಗಾಗಲೇ ಹೇಳಿದಂತೆ ಜಪಾನ್, ರೇಷ್ಮೆಯನ್ನು ಬೆಳೆಯುವುದನ್ನು ಕೈಬಿಟ್ಟಿದೆ. ಏಕೆಂದರೆ, ಅಲ್ಲಿ ನೆಲದ ಅಭಾವ ಇದೆ, ಜನರ ಅಭಾವ ಇದೆ, ಶೀತೋಷ್ಣ ವಾಯುಗುಣವಿರುವುದರಿಂದ ಅಲ್ಲಿ ಕೇವಲ ೪—೫ ಬೆಳೆಗಳನ್ನು ಮಾತ್ರ ಬೆಳೆಯಲಿಕ್ಕೆ ಸಾಧ್ಯವಾಗಿದೆ. ಇದರಿಂದಾಗಿ ಈ ರೇಷ್ಮೆ ಕೃಷಿಯನ್ನು ಜಪಾನ್ ಕೈಬಿಟ್ಟಿದೆ. ಇವತ್ತು ಇಡೀ ಪ್ರಪಂಚದಲ್ಲಿ ೬೦ ಸಾವಿರ ಟನ್ ರೇಷ್ಮೆ ಉತ್ಪಾದನೆ ಏನು ಆಗುತ್ತಿದೆ, ಅದರಲ್ಲಿ ಚೈನಾದಿಂದ ೩೦ ಸಾವಿರ ಟನ್, ಭಾರತ ೮೫೦೦ ಟನ್ ಜಪಾನ್ ೮ ಸಾವಿರ ಟನ್, ಯು.ಎಸ್.ಎಸ್. ಆರ್. ೪ ಸಾವಿರ ಟನ್, ಬ್ರೆಜಿಲ್ ಮತ್ತು ಸೌತ್ ಕೊರಿಯ ೨ ಸಾವಿರ ಟನ್ ಬೆಳೆಯುತ್ತಿವೆ. ೮೦-೮೧ ರಲ್ಲಿ ನಮ್ಮ ರಾಜ್ಯದಲ್ಲಿ ಎಷ್ಟು ರೇಷ್ಮೆಯನ್ನು ಬೆಳೆಯಲಾಗುತ್ತಿತ್ತು ಎಷ್ಟು ಹೆಕ್ಟೇರ್‌ನಲ್ಲಿ ಬೆಳೆಯಲಾಗುತ್ತಿತ್ತು, ಇವತ್ತು ಎಷ್ಟು ಬೆಳೆಯಲಾಗುತ್ತಿದೆ ಎಂಬುದನ್ನು ಹೋಲಿಕೆ ಮಾಡಿ ನೋಡಿದರೆ ಸುಮಾರು ೧೯ ಲಕ್ಷ ಹಳ್ಳಿಗಳಲ್ಲಿ ಈ ಕೃಷಿಯನ್ನು ಮಾಡುತ್ತಿದ್ದುದು ಇವತ್ತು ಬಹಳ ಜಾಸ್ತಿಯಾಗಿದೆ. ಇದರಿಂದಾಗಿ ೨.೨೮ ಲಕ್ಷ ಜನರಿಗೆ ಪ್ರತ್ಯೇಕವಾಗಿ ಮತ್ತು ಸುಮಾರು ೩.೬೮ ಲಕ್ಷ ಜನರಿಗೆ ಪರೋಕ್ಷವಾಗಿ ಕೆಲಸವನ್ನು ಈ ಉದ್ಯೋಗ ದೊರಕಿಸಿಕೊಡುತ್ತಿದೆ. ಇವತ್ತು ಒಟ್ಟು ೧೭.೮೫ ಲಕ್ಷ ಜನರು ಈ ಕಸಬನ್ನು ಅವಲಂಭಿಸಿದ್ದಾರೆ, ನಮ್ಮ ಭಾರತ ರೇಷ್ಮೆಯನ್ನು ಬೆಳೆಯುವುದರಲ್ಲಿ ಅತ್ಯಂತ ದೊಡ್ಡ ದೇಶ ಇಡೀ ಭಾರತದಲ್ಲಿ ಎಷ್ಟು ರೇಷ್ಮೆ ಉತ್ಪಾದನೆ ಆಗುತ್ತದೆ ಅದರಲ್ಲಿ ಸುಮಾರು ೭೦-೭೫ ಪರ್ಸೆಂಟ್ ನಮ್ಮ ಕರ್ನಾಟಕ ರಾಜ್ಯದಲ್ಲೇ ಉತ್ಪಾದನೆ ಆಗುತ್ತದೆ. ನಮ್ಮ ರಾಜ್ಯದಲ್ಲಿ ಕೃಷಿಗೆ ಎಷ್ಟು ಭೂಮಿ ಯೋಗ್ಯವಾಗಿದೆ, ಅದರಲ್ಲಿ ಕೇವಲ ೧ ಪರ್ಸೆಂಟ್ ಭೂಮಿಯಲ್ಲಿ ಹಿಪ್ಪನೇರಳೆಯನ್ನು ಬೆಳೆದರೂ ಕೂಡ ಸುಮಾರು ೯ ರಿಂದ ೧೦ ಸಾವಿರ ಟನ್ ರೇಷ್ಮೆಯನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಇಡೀ ಭಾರತದಲ್ಲಿ ರೇಷ್ಮೆ ಕೃಷಿಗೆ ಯೋಗ್ಯ ಭೂಮಿ ಏನಿದೆ ಅದರಲ್ಲಿ ಕೇವಲ ,೬೧೧ ಭಾಗ ಭೂಮಿಯಲ್ಲಿ ರೇಷ್ಮೆಯನ್ನು ಹಾಕಿದರೂ ಕೂಡ ಸುಮಾರು ೩೦ ಸಾವಿರ ಟನ್ ರೇಷ್ಮೆಯನ್ನು ಧಾರಾಳವಾಗಿ ಉತ್ಪಾದನೆ ಮಾಡಲಿಕ್ಕೆ ಸಾಧ್ಯವಾಗುತ್ತದೆ. ನಾವು ಇದಕ್ಕೆ ಸರಿಯಾದ ಆದ್ಯತೆಯನ್ನು ಕೊಟ್ಟಿದ್ದೇ ಆದರೆ ರೇಷ್ಮೆ ಮತ್ತು ಕೃಷಿ ಈ ಎರಡರಲ್ಲೂ ಸುಮಾರು ೨ಕೋಟಿ ಜನರಿಗೆ ನಮ್ಮ ರಾಜ್ಯದಲ್ಲಿ ಉದ್ಯೋಗವನ್ನು ಕೊಡತಕ್ಕ ಶಕ್ತಿ ಬರುತ್ತದೆ. ೮೦-೮೧ರಿಂದ ನಾವು ಗಳಿಸಿರತಕ್ಕ ಒಂದು ವಿವರಗಳನ್ನು ನೋಡಿದರೆ ೨೭೮೦ ಟನ್ ರೇಷ್ಮೆಯಿಂದ ಇವತ್ತು ೭೬೬೦ ಟನ್‌ಗಳಿಗೆ ಮುಟ್ಟಿದ್ದೇವೆ ಆದರೆ ಇದು ಇಷ್ಟೇ ಸಾಕೇ? ನಾವು ಮಾಡತಕ್ಕ ವೆಚ್ಚವನ್ನು ನಿರ್ಧರಿಸುವಾಗ ನಮ್ಮ ನಿರೀಕ್ಷೆ ಏನಿತ್ತು ಏನು ಗುರಿಯನ್ನು ನಮ್ಮ ಇಲಾಖೆಯವರು ಇಟ್ಟುಕೊಂಡಿದ್ದರು, ಅದಕ್ಕಿಂತಲೂ ಜಾಸ್ತಿ ತಲುಪಿದ್ದರೂ ಕೂಡ ನನ್ನ ದೃಷ್ಟಿಯಲ್ಲಿ ಇದು ಬಹಳ ಕಡಿಮೆ. ಇದನ್ನು ಇನ್ನೂ ಹೆಚ್ಚು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ ಈಗಿರತಕ್ಕ ವ್ಯವಸ್ಥೆಯಲ್ಲಿ ನಮ್ಮ ಭಾರತದಲ್ಲಿ ಸುಮಾರು ೧೦ ಸಾವಿರ ಟನ್ ರೇಷ್ಮೆಯನ್ನು ಬೆಳೆಯುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ ಏನು ಗುರಿ ಇದೆ ಅದಕ್ಕಿಂತಲೂ ಹೆಚ್ಚು ಬೆಳೆಯಲು ನಮಗೆ ಸಾಧ್ಯ ಎಂದು ನಮ್ಮ ಇಲಾಖೆಯವರಿಗೆ ಸಲಹೆಯನ್ನು ಕೊಡುತ್ತಿದ್ದೇನೆ. ಈಗ ಮಳೆ ಆಶ್ರಯದಲ್ಲಿರತಕ್ಕ ಹಿಪ್ಪನೇರಳೆ ಬೇಸಾಯ ಏನಿದೆ, ಇದನ್ನೆಲ್ಲಾ ನೀರಾವರಿ ಕೃಷಿಗೆ ಒಳಪಡಿಸಿದರೆ ಆ ಎಲ್ಲಾ ಪ್ರದೇಶದಲ್ಲೂ ರೇಷ್ಮೆ ಕಡ್ಡಿಯನ್ನು ಹಾಕಿದರೆ ಇಡೀ ಭಾರತದಲ್ಲಿ ನಾವು ಏನು ನಿರೀಕ್ಷೆ ಮಾಡಿದ್ದೇವೆ ಅಷ್ಟನ್ನೂ ಕೂಡ ಕೇವಲ ನಮ್ಮ ರಾಜ್ಯ ಒಂದರಲ್ಲೇ ಬೆಳೆಯುವುದಕ್ಕೆ ಸಾಧ್ಯ ಇದೆ ಎನ್ನತಕ್ಕ ಮಾತನ್ನು ಹೇಳಬಯಸುತ್ತೇನೆ. ನಾನು ತಮಗೆ ಹೇಳುತ್ತೇನೆ, ನಮ್ಮ ಅಧಿಕಾರಿಗಳು ರೈತಾಪಿ ಜನರ ಹತ್ತಿರ ಹೋಗಿಲ್ಲ ಆ ಕಡ್ಡಿಯನ್ನು ತೆಗೆಸಿಲ್ಲ, ಜಮೀನನ್ನು ನೀರಾವರಿಗೆ ಒಳಪಡಿಸಲಿಲ್ಲ. ಇದರಿಂದಾಗಿ ನಮಗೆ ಬರತಕ್ಕ ಸೊಪ್ಪು ಕಡಿಮೆಯಾಗುತ್ತಿದೆ. ೧ ಎಕರೆಯಲ್ಲಿ ಸುಮಾರು ೧೦ ಸಾವಿರ ಕೆ. ಜಿ. ಸೊಪ್ಪನ್ನು ಏನು ನಾವು ನಿರೀಕ್ಷಣೆ ಮಾಡುತ್ತೇವೆ ಅಷ್ಟು ಬರುವುದಿಲ್ಲ. ಕಡಿಮೆಯಾಗುತ ದೆ.

೩-೪೫ ಪಿ. ಎಂ.

ಹತ್ತು ಸಾವಿರ ಕೆ. ಜಿ. ಸೊಪ್ಪು ಬಂದಾಗ ೧೦೦ ಮೊಟ್ಟೆಗೆ ೩೦-೩೫ ಕೆ. ಜಿ. ಗೂಡು ಆದಾಗ ೯ ರಿಂದ ಒಂಬತ್ತೂವರೆ ಕೆ. ಜಿ. ಗೂಡಿಗೆ ಒಂದು ಕೆ, ಜಿ. ರೇಷ್ಮೆ ಪ್ರಮಾಣದ ಆದಾಗ ನಾವು ಏನು ನಿರೀಕ್ಷಣೆ ಮಾಡುತ್ತೇವೆ, ಸುಮಾರು ೧೦ ಸಾವಿರ ಟನ್ ಅದನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಬಹುಶ

ಇದೇ ರೀತಿಯಲ್ಲಿ ನೀವು ಮಾಡಿದಾಗ ಹೆಚ್ಚು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ದಯ ವಿಟ್ಟು ತಾವು ರೈನ್ ಫೆಡ್ ಏರಿಯಾ ಎಂದು ಹೇಳಿರುತ್ತೀರಿ. ಅದನ್ನೆಲ್ಲವನ್ನೂ ಕೂಡ ನೀರಾವರಿಗೆ ಒಳ ಪಡಿಸಬೇಕು. ಆ ಕೆಲಸವನ್ನು ತಾವು ಮಾಡಿದಾಗ ಹೆಚ್ಚಿನ ರೇಷ್ಮೆ ಉತ್ಪಾದನೆ ಮಾಡುವುದರ ಜೊತೆಗೆ ಅನೇಕ ಜನರಿಗೆ ಉದ್ಯೋಗವನ್ನೂ ಕೂಡ ಒದಗಿಸಲಿಕ್ಕೆ ಸಾಧ್ಯವಾಗುತ್ತದೆನ್ನುವ ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ನಮ್ಮ ದೇಶದಲ್ಲಿ ಕೃಷಿಗೆ ಯೋಗ್ಯವಾಗಿರುವ ಭೂಮಿ ಸುಮಾರು ೬೭.೮ ಮಿಲಿಯನ್ ಹೆಕ್ಟೇರ್ಸ್ ಇದೆ. ಇದರಲ್ಲಿ ಶೇಕಡಾ ಒಂದರಷ್ಟು ಭೂಮಿಯನ್ನು ರೇಷ್ಮೆ ಕೃಷಿಗೆ ಕೈಗೊಂಡಾಗ ೬ ಲಕ್ಷ ೭೨ ಸಾವಿರ ಹೆಕ್ಟೇರ್ ಆಗುತ್ತದೆ. ಒಂದು ಹೆಕ್ಟಾರ್‌ಗೆ ಸರಾಸರಿ ೨೦ ಸಾವಿರ ಕೆ. ಜಿ. ಸೊಪ್ಪು ಬಂದಾಗ ಅದಕ್ಕೆ ಮೊಟ್ಟೆಗಳು ಎಷ್ಟು ಬೇಕು ಎಂದು ಅಳವಡಿಸಿದಾಗ ಸುಮಾರು ೧೩೫.೬ ಕೋಟಿ ಮೊಟ್ಟೆ ಬೇಕಾಗುತ್ತದೆ. ಆದ್ದರಿಂದ ೧೦೦ ಮೊಟ್ಟೆಗೆ ೩೦ ರಿಂದ ೩೫ ಕೆ. ಜಿ. ಗೂಡು ಆದಾಗ ಸುಮಾರು ೪ ಲಕ್ಷ ೬ ಸಾವಿರದ ೨೦೦ಸಾವಿರ ಟನ್ ಗೂಡು ಉತ್ಪಾದನೆಯಾಗುತ್ತದೆ. ೧೦ ಕೆ. ಜಿ. ಗೆ ಒಂದು ಕೆ. ಜಿ. ಆದಾಗ ೪೦ ಸಾವಿರ ೬೮೧ ಟನ್ ರೇಷ್ಮೆ ಉತ್ಪಾದನೆಯಾಗುತ್ತದೆ. ಈ ಒಂದು ದಿಸೆಯಲ್ಲಿ ನಾವು ಕೆಲಸ ಮಾಡಿದಾಗ ನಾವು ಹೆಚ್ಚಿನ ಜನರಿಗೆ ಕೆಲಸ ಕೊಡಬಹುದು ಮತ್ತು ಸಾವಿರ ಕೋಟಿ ಇರತಕ್ಕ ವಿದೇಶಿ ವಿನಿಮಯವನ್ನು ೨ ಸಾವಿರ ಇಲ್ಲವೇ ೩ ಸಾವಿರ ಕೋಟಿವರೆಗೆ ಗಳಿಸುವುದಕ್ಕೂ ಸಾಧ್ಯವಾಗುತ್ತದೆಂದು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ದಯವಿಟ್ಟು ತಾವು ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಸುಮಾರು ೨೦-೩೦-೪೦ ವರ್ಷಗಳ ಕಡ್ಡಿ ಏನು ಇದೆ, ಆ ಕಡ್ಡಿಯನ್ನು ತೆಗೆಯಿಸಿ ಆ ಭೂಮಿಯನ್ನು ನೀರಾವರಿಗೆ ಒಳಪಡಿಸಿ ಅದಕ್ಕೆ ಹೊಸ ಕಡ್ಡಿಯನ್ನು ಹಾಕಿದರೆ ಅದರಿಂದ ಹೆಚ್ಚಿನ ಬೆಳೆಯನ್ನು ನಿರೀಕ್ಷಣೆ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಬಹುಶಃ ಅತಿ ಕಡಿಮೆ ಖರ್ಚಿನಲ್ಲಿ ರೈತನಿಗೆ ಹೆಚ್ಚು ಉತ್ಪಾದನೆಯನ್ನು ಕೊಡುತ್ತದೆನ್ನುವ ವಿಷಯವನ್ನೂ ಕೂಡ ನಾನು ಹೇಳುತ್ತಿದ್ದೇನೆ. ಎಂ ಫೈ ಕಡ್ಡಿ ಉತ್ತಮವಾಗಿರತಕ್ಕಂಥ ಕಡ್ಡಿ ಅದು ಸಿಕ್ಕಿದರೆ ದಯವಿಟ್ಟು ಆ ಕೆಲಸವನ್ನು ಸಹ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ ಆದಷ್ಟು ಜಾಗ್ರತೆ ಈ ಕೆಲಸ ಮಾಡುತ್ತೀರೆಂದು ಮನಸ್ಸಿನಲ್ಲಿಟ್ಟುಕೊಂಡು ತಮಗೆ ಈ ವಿಷಯವನ್ನು ಹೇಳುತ್ತಿದ್ದೇನೆ.

ಒಂದು ಸಾರಿ ನಮ್ಮ ಬೇಡಿಕೆಗೆ ಅನುಗುಣವಾಗಿ ರೇಷ್ಮೆ ಉತ್ಪಾದನೆಯಾಗಲಿಲ್ಲ. ಎರಡು ಸಾವಿರ ಟನ್ ರೇಷ್ಮೆ ಕಡಿಮೆಯಾಯಿತು. ಆಗ ಈ ಕೈಗಾರಿಕೆಯಲ್ಲಿ ನಿರತರಾಗಿರತಕ್ಕಂಥ ನೇಕಾರರು ಬಹಳ ಕಷ್ಟವನ್ನು ಅನುಭವಿಸಬೇಕಾಯಿತು. ರೇಷ್ಮೆ ಅವರಿಗೆ ಸಿಕ್ಕದ ಕಾರಣಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳ ಬಳಿಗೆ ಒಂದು ನಿಯೋಗ ಬಂದರು. ಮಾನ್ಯ ಮುಖ್ಯಮಂತ್ರಿಗಳು ಒಂದು ಸಲಹೆಯನ್ನು ಕೊಟ್ಟು ಒಂದು ಸಮಿತಿಯನ್ನು ಮಾಡಿದರು ಆ ಸಮಿತಿಯವರು ಏನು ಸಲಹೆಯನ್ನು ಕೊಟ್ಟರು ಅದು ಕಾರ್ಯಗತವಾಗಲಿಲ್ಲ. ಅದನ್ನು ಕೂಡ ದಯವಿಟ್ಟು ಗಮನಿಸಿ ನೇಕಾರರಿಗೆ ಸುಲಭ ದರದಲ್ಲಿ ನೂಲು ಸಿಕ್ಕತಕ್ಕಂಥ ಕೆಲಸವನ್ನು ತಾವು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇವತ್ತು ತಾವು ಮಾಡಿರತಕ್ಕಂಥ ಬಿತ್ತನೆ ಯಾವುದೆಂದರೆ ನಮ್ಮ ದೇಶದಲ್ಲಿರತಕ್ಕಂಥ ಬೈ ಓಲ್ಟಿನ್ ತಳಿ ಬೈಓಲ್ಟಿನ್ ರೇಷ್ಮೆಗುಣಮಟ್ಟಕ್ಕೆ ಬಹುಶಃ ಸಮಾನವಾಗಿರತಕ್ಕಂಥಒಂದುರೇಷ್ಮೆಯನ್ನು ತಾವುಉತ್ಪಾದನೆ ಮಾಡುತ್ತಿದ್ದೀರಿ. ಬಹುಶಃ ಇದನ್ನು ಮಾಡಿರುವುದರಿಂದ ಶೇಕಡ ೩೩ ರಷ್ಟು ಗೂಡ ಜಾಸ್ತಿ ಬರುತ್ತದೆ. ಆದಾಗ್ಯೂ ಕೂಡ ನಾವು ಪರದೇಶಕ್ಕೆ ಹೋಲಿಸಿ ಕೊಂಡಾಗ ತಾವು ಉತ್ಪಾದನೆ ಮಾಡತಕ್ಕಂಥ ರೇಷ್ಮೆ ನಮ್ಮ ದೇಶದಲ್ಲಿ ಕಡಿಮೆ ಇದೆ ಎಂದು ಹೇಳ ಬೇಕಾಗುತ್ತದೆ. ಚೀನಾದಲ್ಲಿ ಒಂದು ಎಕರೆ ಹಿಪ್ಪುನೇರಳೆಯಿಂದ ಸುಮಾರು ೩೨ ಕೆ.ಜಿ ರೇಷ್ಮೆ ಉತ್ಪಾದನೆ ಮಾಡುತ್ತಾರೆ. ಅದೇ ರೀತಿಯಲ್ಲಿ ಜಪಾನ್ ದೇಶದಲ್ಲಿಯೂ ಕೂಡ ಒಂದು ಎಕರೆಯಲ್ಲಿ ೯೦ ಕೆ.ಜಿ ಉತ್ಪಾದನೆಯಾಗುತ್ತದೆ. ನಮ್ಮ ರಾಜ್ಯದಲ್ಲಿ ೧೯೮೦-೮೧ ರಲ್ಲಿ ಸುಮಾರು ೧೦ ಕೆ. ಜಿ. ಇದ್ದುದು ೧೯೮೭-೮೮ ರಲ್ಲಿ ೧೪ ಕೆ. ಜಿ. ಗೆ ಬಂದಿತು. ಬಹುಶಃ ಇವತ್ತು ನಾನು ಹೇಳತಕ್ಕಂಥ ಬೇಸಾಯವನ್ನು ಮಾಡಿದರೆ ಸುಮಾರು ಒಂದು ಎಕರೆಗೆ ೪೦ ಕೆ.ಜಿ. ರೇಷ್ಮೆಯನ್ನು ಬೆಳೆಯಲಿಕ್ಕೆ ಸಾಧ್ಯವಾಗುತ್ತದೆ ದಯವಿಟ್ಟು ಈ ಕೆಲಸವನ್ನು ತಾವು ಮಾಡಬೇಕು. ಯಾವಾಗಲೂ ಗೂಡಿಗೂ ರೇಷ್ಮೆಗೂ ತಾವು ತೂಗಿ ನೋಡಬಾರದು. ಸೊಪ್ಪು ಮತ್ತು ರೇಷ್ಮೆ ಈ ರೇಶಿಯೋದಲ್ಲಿ ತೂಗಿನೋಡಬೇಕು ಎಂದು ಎಕರೆಯಲ್ಲಿ ಎಷ್ಟು ಸೊಪ್ಪು ಆಗುತ್ತದೆ. ಎಷ್ಟು ಸೊಪ್ಪಿನಲ್ಲಿ ನಾವು ಎಷ್ಟು ಗೂಡನ್ನು ಬೆಳೆಯಲಿಕ್ಕೆ ಸಾಧ್ಯವಾಗುತ್ತದೆ. ಆ ಒಂದು ಪ್ರಮಾಣದಲ್ಲಿ ರೇಶಿಯೊವನ್ನು ಅನುಸರಿಸಿದಾಗ ಒಂದು ಎಕರೆಯಲ್ಲಿ ಸುಮಾರು ೯೦ ರಿಂದ ೫೦ ಕೆ. ಜಿ. ರೇಷ್ಮೆ ಉತ್ಪಾದನೆಯನ್ನು ಮಾಡುವ ರೀತಿಯಲ್ಲಿ ಕೆಲಸ ಮಾಡಿದಂತಾಗುತ್ತದೆ. ಆದ್ದರಿಂದ ತಾವು ರೇಷ್ಮೆ ಹೊಸ ತಳಿ ಮತ್ತು ಒಳ್ಳೆಯ ಕಡಿ ಕಂಡುಹಿಡಿಯತಕ್ಕಂಥ ಕೆಲಸವನ್ನು ಕೂಡ ಮಾಡಬೇಕೆಂದು ಹೇಳಬಯಸುತ್ತೇನೆ.

ಸ್ವಾಮಿ ಇನ್ನೊಂದು ರೀತಿಯಲ್ಲಿ ರೇಷ್ಮೆ ಉತ್ಪಾದನೆಯನ್ನು ಜಾಸ್ತಿ ಮಾಡಲಿಕ್ಕೆ ಸಾಧ್ಯವಿರುತ್ತದೆ. ಇವತ್ತು ಸುಮಾರು ೧೮–೨೨ ಕೋಟಿ ಮೊಟ್ಟೆಯನ್ನು ನಾವು ತಯಾರು ಮಾಡಿ ಸುಮಾರು ೭ ಸಾವಿರ ೬೦ ಟನ್ ರೇಷ್ಮೆ ಉತ್ಪಾದನೆ ಮಾಡುತ್ತೇವೆ. ಅಷ್ಟೇ ಮೊಟ್ಟೆ ಯಲ್ಲಿ ಜಾಸ್ತಿ ರೇಷ್ಮೆಯನ್ನು ಉತ್ಪಾದನೆ ಮಾಡಲಿಕ್ಕೆ ಸಾಧ್ಯವಾಗುತ್ತದೆ.

ಇದನ್ನು ಲೆಕ್ಕ ಹಾಕಿಕೊಂಡಾಗ ೫ ಮೊಟ್ಟೆಗೆ ಒಂದು ಕೆ. ಜಿ. ರೇಷ್ಮೆ ಆಗುತ್ತದೆ. ಈಗ ಇರತಕ್ಕ ವ್ಯವಸ್ಥೆಯಲ್ಲಿ ೨೦ ಕೋಟಿ ಮೊಟ್ಟೆ ಉತ್ಪಾದನೆಯಾಗುತ್ತಗೆ. ಆದರಿಂದ ಹೆಚ್ಚಿಗೆ ಗೂಡಿನ ಉತ್ಪಾದನೆ ಯಾಗುತ್ತದೆ ನಮ್ಮ ನಿರೀಕ್ಷೆಗಿಂತ ಜಾಸ್ತಿ ರೇಷ್ಮೆ ಉತ್ಪಾದನೆ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ದೇಶದಲ್ಲಿ ಅತ್ಯುತ್ತಮ ರೇಷ್ಮೆ ಎಂದು ಏನು ಹೇಳುತ್ತೇವೆ ಅದನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಬಹಳ ಕಳಪೆ ಮಟ್ಟದ್ದು ಎಂದು ಹೇಳುತ್ತಾರೆ. ಚೆನಾದ್ದು ಎ.ಬಿ ದರ್ಜೆಯದಾದರೆ ನಮ್ಮದು ಹೆಚ್. ದರ್ಜೆಯದು. ಅಂತರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಇಂಡಿಯಾ ದೇಶದ ರೇಷ್ಮೆ ಏನಿದೆ ಇದರ ಗುಣಮಟ್ಟ ಕಡಿಮೆ ಎಂದು ತೀರ್ಮಾನಿಸಲಾಗಿದೆ. ವಿಶ್ವಮಟ್ಟದಲ್ಲಿ ಒಳ್ಳೆಯ ರೇಷ್ಮೆ ಎಂದು ಹೆಸರು ಪಡೆಯಬೇಕಾದರೆ ರೇಷ್ಮೆ ತಯಾರಿಸುವಲ್ಲಿ ಅವರು ಏನು ಕ್ರಮ ಅನುಸರಿಸುತ್ತಾರೆ ಅದನ್ನು ನಾವು ರೂಢಿಸಿಕೊಳ್ಳಬೇಕು. ರೇಷ್ಮೆ ಉತ್ಪಾದನೆ ಮಾಡಬೇಕಾದರೆ ನಾವು ಏನೇನು ಮಾಡಬೇಕೆಂಬುದರ ಬಗ್ಗೆ ತಾವು ದಯಮಾಡಿ ಯೋಜನೆ ಮಾಡಬೇಕೆಂದು ಹೇಳುತ್ತೇನೆ. ನಮ್ಮ ರೇಷ್ಮೆದಾರ ಒಂದೇ ಸಮ ಎಳೆ ಬರುವುದಿಲ್ಲ. ಮಧ್ಯದಲ್ಲಿ ಕಟ್ ಆಗುತ್ತದೆ. ಇದಕ್ಕೆ ಕಾರಣ, ನಮ್ಮಲ್ಲಿ ಮೊಳೆಗಳಿಗೆ ದಾರವನ್ನು ಜೋಡಿಸುವ ಕಲೆ ಸರಿಯಾಗಿ ಗೊತ್ತಿಲ್ಲ. ಅಲ್ಲದೆ ಇದನ್ನು ಬಹಳ ದಿನಗಳಿಂದ ಗುಡಿ ಕೈಗಾರಿಕೆ ಎಂದು ಟ್ರೀಟ್ ಮಾಡಿದ್ದರಿಂದ ಮುಂದೆ ಬರಲಿಕ್ಕೆ ಆಗಲಿಲ್ಲವೆಂದು ಹೇಳಬಹುದು ಕೇಂದ್ರ ರೇಷ್ಮೆ ಸಂಶೋಧನಾಲಯದಲ್ಲಿ ಹೊಸದೊಂದು ಯಂತ್ರವನ್ನು ಸಿದ್ಧಪಡಿಸಿದ್ದಾರೆ. ಅದರಲ್ಲಿ ಒಟ್ಟಿಗೆ ಹತ್ತು ಪಿಂಜಿ ಬರುತ್ತದೆ ಆ ಯಂತ್ರವನ್ನು ಎಲ್ಲಾ ಕಡೆ ಬಳಸುವಂತಾದರೆ ವಿಶ್ವದ ಮಾರುಕಟ್ಟೆಯಲ್ಲಿ ನಾವು ಕೂಡ ಸ್ಪರ್ಧೆ ನಡೆಸುವುದಕ್ಕೆ ಸಾಧ್ಯವಾಗುತ್ತದೆ ಯಾವುದಾದರೂ ಒಂದು ಎಳೆ ಕಿತ್ತುಹೋದಾಗ ಆ ಪಿಂಜಿ ಮಾತ್ರ ನಿಲ್ಲಿಸಲು ಸಾಧ್ಯ ಬೇರೆ ಪಿಂಜಿಗಳು ಓಡುತ್ತಿರುತ್ತವೆ, ಇದರಿಂದ ಒಂದು ರಾಟೆಯಲ್ಲಿ ಹೆಚ್ಚಿಗೆ ರೇಷ್ಮೆಯನ್ನು ಉತ್ಪಾದಿಸಲು ಸಾಧ್ಯ ಮತ್ತು ವಿಶ್ವ ಮಾರುಕಟ್ಟೆಯಲ್ಲಿ ಸ್ಪರ್ಧಿಸಲು ಸಾಧ್ಯ ಎಂದು ಕೆಲವು ಅಧಿಕಾರಿಗಳು ನಿಪುಣರು ಹೇಳಿದ್ದಾರೆ. ಅಲ್ಲದೆ ಆ ಒಂದು ಕೆ. ಜಿ. ರೇಷ್ಮೆಗೆ ೧೦೦ ರಿಂದ ೨೦೦ ರೂಪಾಯಿ ಜಾಸ್ತಿ ಸಿಗಲು ಸಾಧ್ಯವೆಂದು ಸಹ ಹೇಳಿದ್ದಾರೆ. ಇವತ್ತಿನ ದಿವಸ ರೇಷ್ಮೆ ಕೈಗಾರಿಕೆಯಲ್ಲಿ ಅನೇಕ ಜನರೇನು ನಿರತರಾಗಿದ್ದಾರೆ ಅವರನ್ನು ಕರೆದುಕೊಂಡು ಹೋಗಿ ತೋರಿಸಿ ಇದನ್ನು ಮಾಡಲಿಕ್ಕೆ ನೀವು ಪ್ರಯತ್ನ ಮಾಡಿ ಎಂದು ಅವರಿಗೆ ಉತ್ತೇಜನ ಕೊಟ್ಟು ಈ ಕೆಲಸ ಮಾಡಿದಾಗ ವಿಶ್ವದ ಮಾರುಕಟ್ಟೆಯಲ್ಲಿ ಸ್ಪರ್ಧೆ ನಡೆಸಲು ಸಾಧ್ಯವಾಗುತ್ತದೆ ೧೯೮೦–೮೧ ರಿಂದ ಯಾರೂ ಈ ಕೆಲಸ ಮಾಡಿಲ್ಲ. ತಮ್ಮ ಕಾಲದಲ್ಲಿ ಈ ಕೆಲಸ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ರೇಷ್ಮೆ ಕೃಷಿಕ ಸೊಪ್ಪು ಬೆಳೆದು ಹುಳು ಸಾಕುತ್ತಾನೆ. ಹುಳು ಗೂಡು ಕಟ್ಟಿಕೊಂಡು ಸುಪ್ತಾವಸ್ಥೆಯಲ್ಲಿ ಮಲಗುತ್ತದೆ. ರೀಲರ್ ನೂಲನ್ನು ಬಿಚ್ಚಿ ಕಚ್ಚಾ ರೇಷ್ಮೆಯನ್ನು ಮಾರಾಟ ಮಾಡುತ್ತಾನೆ. ಹುರಿಕಾರ ಹುರಿ ಮಾಡುತ್ತಾನೆ. ನೇಕಾರ ಜವಳಿ ಮಾಡಿ ಮಾರುಕಟ್ಟೆಗೆ ತಲುಪಿಸುತ್ತಾನೆ ಈ ಒಂದು ಸರಣಿಯಲ್ಲಿ ಅತ್ಯಧಿಕ ಲಾಭ ಯಾರಿಗೆ ಸಿಕ್ಕುತ್ತದೆಂದು ವಿಶ್ಲೇಷಣೆ ಮಾಡಿದಾಗ ಒಟ್ಟು ಮೌಲ್ಯದ ಪ್ರತಿ ನೂರು ರೂಪಾಯಿನ ವರಮಾನ ಯಾವ ರೀತಿ ಹಂಚಿಕೆಯಾಗುತ್ತದೆಂದರೆ ಶೇಕಡಾವಾರು ಪ್ರಮಾಣದಲ್ಲಿ ಕೃಷಿಕನಿಗೆ ೫೩. ೮. ರೀಲರ್‌ಗೆ ೬. ೮. ಹುರಿಕಾರನಿಗೆ ೯. ೧. ನೇಕಾರನಿಗೆ ೧೦. ೭. ವರ್ತಕನಿಗೆ ೧೬. ೬– ಈ ಸರಣಿಯಲ್ಲಿ ಲಾಭ ಬರುತ್ತನೆ, ರೇಷ್ಮೆ ಕೃಷಿಕ ಇತರಯವರಿಗಿಂತ ಚೆನ್ನಾಗಿದ್ದಾನೆಂದು ಆಯಿತು. ಇನ್ನೂ ಹೆಚ್ಚಿನ ಮಟ್ಟದಲ್ಲಿ ಕೆಲಸ ಮಾಡಬೇಕಾದರೆ. ರೈತರಿಗೆ ಶೇಕಡಾ ೭೫–೮೦ ಭಾಗ ಲಾಭ ಸಿಗಬೇಕಾದರೆ ತಾವು ಏನು ಮಾಡಬೇಕೆಂದು ಯೋಚನೆ ಮಾಡಬೇಕು ನಮ್ಮ ದೇಶದಲ್ಲಿರತಕ್ಕ ತಳಿಯ ಬಗ್ಗೆ, ಶ್ರೇಷ್ಠ ಮಟ್ಟದ ಗೂಡಿನ ಬಗ್ಗೆ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸಾಧಿಸಬೇಕಾದುದು ಬಹಳ ಇದೆ. ಜಪಾನ್‌ನಲ್ಲಿ ೫. ಕೆ. ಜಿ. ಗೂಡಿಗೆ ಒಂದು ಕೆ. ಜಿ. ರೇಷ್ಮೆ ಬರುತ್ತದೆ. ನಮ್ಮಲ್ಲಿ ಈಗ ಅಂದರೆ ೧೯೮೦–೮೧ ರಲ್ಲಿ ೧೫ ಕೆ. ಜಿ. ಗೂಡಿಗೆ ಒಂದು ಕೆ. ಜಿ. ರೇಷ್ಮೆ ಬರುತ್ತಿತ್ತು. ಈಗ ೯ ರಿಂದ ೧೦ ಕೆ. ಜಿ ಗೂಡಿಗೆ ಒಂದು ಕೆ. ಜಿ. ರೇಷ್ಮೆ ಬರುತ್ತದೆ, ಜಪಾನ್‌ನಲ್ಲಿ ಒಂದು ಗೂಡು ೧೬೦೦–೧೮೦೦ ಮೀಟರ್ ಉದ್ದದ ಎಳೆ ಕೊಟ್ಟರೆ ನಮ್ಮ ದೇಶದಲ್ಲಿ ೭೦೦–೮೦೦ ಮೀಟರ್ ಮಾತ್ರ ಕೊಡುತ್ತದೆ. ಜಪಾನ್‌ನಲ್ಲಿ ಇರತಕ್ಕ ಗೂಡು ಅದು ಚಿಟ್ಟೆಯಾಗಿ ಹೊರಗೆ ಬರಬೇಕಾದರೆ ನಾವು ಯಾವರೀತಿ ಎಳನೀರನ್ನು ಕೊಚ್ಚುತ್ತೀವೋ ಮುಂದೆ ಆರೀತಿ ಮುಂದಿನ ತುದಿಯನ್ನು ಕೊಚ್ಚಿದಾಗ ಮಾತ್ರ ಹುಳು ಹೊರಗೆ ಬರುವುದಕ್ಕೆ ಸಾಧ್ಯವಾಗುತ್ತದೆ ಅದರೆ ನಮ್ಮ ಗೂಡು ಕೈಯಲ್ಲಿ ಇಟ್ಟುಕೊಂಡಾಗ ಉಳಿದ ಅಂಗಾಂಗಗಳು ನಮಗೆ ಕಾಣಿಸುತ್ತವೆ ಅಂದರೆ ಅಲ್ಲಿಗೂ ಇಲ್ಲಿಗೂ ಎಷ್ಟು ಅಜಗಜಾಂತರ ವ್ಯತ್ಯಾಸವಿದೆ ಎಂಬುದನ್ನು ದಯಮಾಡಿ ನೋಡಬೇಕು

ಆ ಮಟ್ಟಕ್ಕೆ ನಮ್ಮದೂ ತರಬೇಕು. ರೇಷ್ಮೆ ಗೂಡು ಮೂರು ಪದರದಿಂದ ಕೂಡಿದೆ ಮೊದಲನೆಯ ಪದರಕ್ಕೆ ಜೂಟು ಅಥವಾ ನಟಿಕೆ ಎಂದು ಹೇಳುತ್ತಾರೆ, ಮಧ್ಯದಲ್ಲಿ ಇರತಕ್ಕ ಪದರ ಅಪ್ಪಟವಾಗಿರತಕ್ಕ ರೇಷ್ಮೆ, ಮೂರನೆಯದು ಬ್ರೂಫನ್ ಸಿಲ್ಕ್ ಎಂದು ಹೇಳುತ್ತಾರೆ. ಮೊದಲನೇ ಅಂಶ ಮತ್ತು ಕೊನೆಯ ಅಂಶ ಕಡಿಮೆ ಮಾಡಿ ಮಧ್ಯದಲ್ಲಿ ಇರತಕ್ಕ ಅಪ್ಪಟ ರೇಷ್ಮೆ ಅಂಶವನ್ನು ಜಾಸ್ತಿ ಮಾಡುವುದಕ್ಕೆ ತಾವು ಏನು ಕ್ರಮ ಕೈಗೊಂಡಿದ್ದೀರಿ ? ೧೦೦ ಕೆ. ಜಿ. ಗೂಡು ಇರತಕ್ಕ ಪ್ಯೂಪಾ ಸುಮಾರು ೮೦ ಕೆ. ಜಿ. ಇರುತ್ತದೆ. ಉಳಿದಿರತಕ್ಕ ೨೦ ಕೆ.ಜಿ. ಗೂಡಿನಲ್ಲಿ ೧೦ಕೆ.ಜಿ. ಗೆ ಒಂದು ಕೆ. ಜಿ. ರೇಷ್ಮೆ ಎಂದಾಗ ೨೦ ಕೆ.ಜಿ. ಗೂಡಿನಲ್ಲಿ ೨ ಕೆ. ಜಿ. ರೇಷ್ಮೆ ಆಗುತ್ತದೆ. ಇನ್ನು ೮ ಕೆ.ಜಿ. ಯಾವುದು? ಮೇಲಿರತಕ್ಕ ಜಲ್ಲಿ ರೇಷ್ಮೆ ಒಂದು ಕೆ. ಜಿ ಗೆ ೨೫೦ರಿಂದ ೩೦೦ ಗ್ರಾಂ ಬರುತ್ತದೆ. ಅದನ್ನು ಕಳೆದಾಗ ಉಳಿದಿರತಕ್ಕ ಅಂಶ ಕೊನೆಯಲ್ಲಿ ಇರತಕ್ಕದು ಗೂಡನ್ನು ಬೇಸಿನ್‌ನಲ್ಲಿ ಹಾಕಿ ರೇಷ್ಮೆ ಆಗುತ್ತಾ ಆಗುತ್ತಾ ಕೆಲವು ಪದರ ಬಿಟ್ಟು ಹೋಗುತ್ತದೆ. ಅದನ್ನು ಕಡಿಮೆ ಮಾಡಿದಾಗ ರೇಷ್ಮೆ ಅಂಶ ಜಾಸ್ತಿ ಮಾಡಿದ ಹಾಗೆ ಆಗುತ್ತದೆ. ದಯ ಮಾಡಿ ಈ ಕೆಲಸ ಮಾಡಬೇಕು. ಏನು ಜಪಾನ್‌ನಲ್ಲಿ ೫ಕೆ. ಜಿ. ಗೂಡಿಗೆ ಒಂದು ಕೆ. ಜಿ. ರೇಷ್ಮೆ ಯಾವ ರೀತಿ ತೆಗೆಯುತ್ತಾರೋ ಅದೇ ರೀತಿ ಇಲ್ಲೂ ಮಾಡಬೇಕು. ನೀವು ಅನೇಕ ಅಧಿಕಾರಿಗಳನ್ನು ತರಬೇತಿಗಾಗಿ ಜಪಾನ್‌ಗೆ ಕಳುಹಿಸುತ್ತೀರಿ. ಅದಕ್ಕೆ ರಾಜ್ಯದ ಬೊಕ್ಕಸದಿಂದ ಹಣ ವೆಚ್ಚ ಮಾಡುತ್ತೀರಿ. ಅಲ್ಲಿಂದ ಕಲಿತು ಬಂದವರು ರಿಟೈರ್ಡ್ ಆಗಿ ಹೋಗುತ್ತಾರೋ ಅಥವಾ ಈ ಇಲಾಖೆಯಲ್ಲಿ ಇರುತ್ತಾರೋ ಗೊತ್ತಿಲ್ಲ. ಅದಕ್ಕೋಸ್ಕರ ನಿಮ್ಮಂಥ ಚಿಕ್ಕ ವಯಸ್ಸಿನ ಪ್ರಾಯದವರನ್ನು ಕಳುಹಿಸಿದಾಗ ಒಳ್ಳೆಯದಾಗುತ್ತದೆ. ಮತ್ತು ಅವರು ಕೆಲಸ ಮಾಡವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳಬಯಸುತ್ತೇನೆ ಗ್ರಾಮಾಂತರ ಪ್ರದೇಶದ ರೈತರಿಗೆ ಆಗಿರತಕ್ಕ ತೊಂದರೆ ಏನು ಎಂದರೆ ಮಳೆಗಾಲದಲ್ಲಿ ಅಥವಾ ಮೋಡ ಮೇಲೆ ಬಂದಾಗ ರೇಷ್ಮೆ ಹುಳುವನ್ನು ಚಂದ್ರಿಕೆ ಮೇಲೆ ಬಿಟ್ಟಾಗ ಆ ಹುಳು ಕೋಶಾವಸ್ಥೆಯಲ್ಲಿರುವಾಗ ಮೂತ್ರ ವಿಸರ್ಜನೆ ಮಾಡಿ ಗೂಡು ರಟ್ಟು ಕಟ್ಟು ಕೊಳ್ಳುತ್ತದೆ. ರಟ್ಟು ಕಟ್ಟಿಕೊಂಡಾಗ ದಾರ ಸರಿಯಾಗಿ ಬರುವುದಿಲ್ಲ. ಯಾವ ರೈತ ಮಳೆಗಾಲದಲ್ಲಿ ಗೂಡು ಬೆಳೆಯುತ್ತಾನೆ ಆ ರೈತನಿಗೆ ಇದರಿಂದ ತುಂಬಲಾರದ ನಷ್ಟವಾಗುತ್ತದೆ. ಈ ನಷ್ಟವನ್ನು ತಪ್ಪಿಸುವುದಕ್ಕೆ ಕಾರ್ಯಕ್ರಮ ಹಾಕಬೇಕು. ಮೂತ್ರ ವಿಸರ್ಜನೆ ಮಾಡಿದರೂ ರೇಷ್ಮೆ ಗೂಡಿನ ಪದರಕ್ಕೆ ತಗುಲದೆ ಎಷ್ಟು ರೇಷ್ಮೆ ಅಂಶ ಇದೆಯೋ ಅಷ್ಟು ಅಂಶ ಪೂರ್ಣವಾಗಿ ದಾರ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡಬೇಕು. ಹಾಗೆ ಮಾಡದಿದ್ದರೆ ಮಳೆಗಾಲದಲ್ಲಿ ರೈತನಿಗೆ ಬಹಳ ತೊಂದರೆಯಾಗುತ್ತದೆ. ಹೆಚ್ಚಿನ ರೇಷ್ಮೆ ಬೆಳೆಸುವುದಕ್ಕೆ ಆಗುವುದಿಲ್ಲ. ಇದರಿಂದ ಅವನು ಏನು ಖರ್ಚು ಮಾಡಿರುತ್ತಾನೆ ಅದೂ ಕೂಡ ಸಿಗುವುದಿಲ್ಲ ಇದೆಲ್ಲಾ ಟೆಕ್ನಿಕಲ್ ಪಾಯಿಂಟ್‌ಗಳು ಮಳೆ ಆಧಾರದ ಮೇಲೆ ಬೆಳೆಯುವ ಹಿಪ್ಪುನೇರಳೆಸೊಪ್ಪನ್ನು ನೀರಾವರಿಗೆ ಒಳಪಡಿಸತಕ್ಕದ್ದು ಒಳ್ಳೆಯದು. ಮತ್ತು ಒಳ್ಳೆಯ ಬಿತ್ತನೆ ಬೀಜ ಕಂಡುಹಿಡಿಯತಕ್ಕದ್ದು ಮಾಡಬೇಕು. ಮೂರನೆಯದಾಗಿ ೫ ಕೆ. ಜಿ. ಗೆ ಒಂದು ಕೆ. ಜಿ ರೇಷ್ಮೆ ಬರುವಂತೆ ಮಾಡಬೇಕು. ನಾಲ್ಕನೆಯದಾಗಿ ಮೂತ್ರ ವಿಸರ್ಜನೆಯಿಂದ ಮಳೆಗಾಲದಲ್ಲಿ ಗೂಡು ಏನು ಹಾಳಾಗುತದೆ ಅದನ್ನು ತಪ್ಪಿಸಬೇಕು ಎಂದು ಹೇಳ ಬಯಸುತ್ತೇನೆ. ಇವತ್ತು ರೇಷ್ಮೆ ಚರಿತ್ರೆಯಲ್ಲಿ ಎರಡು ಕರಾಳ ದಿವಸಗಳನ್ನು ನಾವು ಕಾಣುತ್ತಿದ್ದೇವೆ ಒಂದನೆಯದು, ಸಕಾಲದಲ್ಲಿ ರೇಷ್ಮೆ ಬಿತ್ತನೆ ಮೊಟ್ಟೆ ಸರಬರಾಜು ಮಾಡದೆ ಅನೇಕ ಕೋಟಿ ರೂಪಾಯಿಗಳನ್ನು ನಷ್ಟ ಮಾಡಿರತಕ್ಕದ್ದು. ಏತಕ್ಕೆ ಹೀಗಾಯಿತು ಎಂಬುದನ್ನು ಯೋಚನೆ ಮಾಡಿದಾಗ ನಮ್ಮ ಪಕ್ಕದ ರಾಜ್ಯಗಳಾದ ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ಇತ್ತೀಚೆಗೆ ಗೂಡು ಬೆಳೆಯುವ ಪದ್ಧತಿ ಬಂದಿದ್ದು ಮೊಟ್ಟೆ ಅಲ್ಲಿ ಸಿಗದೇ ಇರುವುದರಿಂದ ನಮ್ಮ ರಾಜ್ಯದಲ್ಲಿ ಬಂದು ಅವರು ಮೊಟ್ಟೆ ತೆಗೆದುಕೊಂಡು ಹೋಗುತ್ತಿದ್ದಾರೆ. ಮತ್ತು ಕಾಳಸಂತೆಯಲ್ಲಿ ಮೊಟ್ಟೆಗಳನ್ನು ಮಾರಾಟ ಮಾಡುತ್ತಿದ್ದಾರೆ. ಎರಡನೆಯದು ತಾವು ಕೊಡತಕ್ಕ ಕಾರಣ ಬಿತ್ತನೆ ಪ್ರದೇಶದಲ್ಲಿ ಮಳೆ ಬರಲಿಲ್ಲ ಆದ್ದರಿಂದ ಬೆಳೆ ಬೆಳೆಯುವುದಕ್ಕೆ ಆಗಲಿಲ್ಲ ಎಂದು ಏನೇ ಆದರೂ ಕೂಡ ಆಂಧ್ರ ಮತ್ತು ತಮಿಳುನಾಡಿನಿಂದ ನಮ್ಮ ಗೂಡಿನ ಮಾರುಕಟ್ಟೆಗಳಿಗೆ ಹೆಚ್ಚು ಗೂಡು ಬರುವುದರಿಂದ ಬಹುಶಃ ಆ ಗೂಡನ್ನು ಮಾಡಿದ ಬಿತ್ತನೆ ಬೀಜ ನಮ್ಮದೇ ಆಗಿರುವುದರಿಂದ ನಮ್ಮದು ಅಲ್ಲಿಗೂ ಹೋಗಿದೆ ಎಂಬುದನ್ನು ಪತ್ತೆ ಹಚ್ಚುವುದು ಸಾಧ್ಯವಿದೆ. ತಾವು ಈಗ ವರ್ಷದಲ್ಲಿ ೨೨ ಕೋಟಿಯಿಂದ ೨೩ ಕೋಟಿ ಮೊಟ್ಟೆಗಳನ್ನು ತಯಾರು ಮಾಡುತ್ತಿದ್ದೀರಿ ಅದು ಸಾಲುವುದಿಲ್ಲವೆಂದು ನನಗಾದರೂ ಅನಿಸುತ್ತದೆ.

ತಾವು ಈಗಾಗಲೇ ೧೩ ಶೈತ್ಯಾಗಾರಗಳನ್ನು ತೆರೆದಿದ್ದೀರಿ. ಆದುದರಿಂದ ತಾವು ಇವತ್ತು ವ್ಯಾಪಾರಿ ದೃಷ್ಟಿಯಿಂದ ನೋಡಬಾರದು. ಸೇವಾ ಮನೋಭಾವದಿಂದ ಒಂದು ಲಾಟ್ ಅಥವಾ ಎರಡು ಲಾಟ್ ಮೊಟ್ಟೆ ಹೋದರೂ ಚಿಂತೆ ಇಲ್ಲ. ಹೆಚ್ಚಿನ ಮೊಟ್ಟೆಯನ್ನು ಶೇಖರಣೆ ಮಾಡುವುದಕ್ಕೆ ತಾವು ಪ್ರಯತ್ನ ಪಡಬೇಕು. ಅಷ್ಟೊ ಮೊಟ್ಟೆ ದಾಸ್ತಾನು ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ಏಕೆಂದರೆ ೬೦ ಕೋಟಿ ನಮ್ಮ ರೈತರಿಗೆ ನಷ್ಟ ಆಗಿದೆ, ಅಷ್ಟೇ ಅಲ್ಲ. ಇವತ್ತು ತೋಟದಲ್ಲಿ ಸೊಪ್ಪು ಬೆಳೆದು

ಬಲಿತಿದೆ. ಅದು ಉದುರಿ ಹೋಗುತ್ತಿದೆ. ಮುಂದೆ ಬರುವ ಮೊಟ್ಟೆಗೂ ಈ ಸೊಪ್ಪು ಆಗುವುದಿಲ್ಲ. ಮೊಟ್ಟೆ ಸಿಕ್ಕಿದಾಗ ಸೊಪ್ಪು ಇರುವುದಿಲ್ಲ, ಸೊಪ್ಪು ಬಂದಾಗ ಮೊಟ್ಟೆ ಸಿಗುವುದಿಲ್ಲ. ಇವತ್ತು ಒಂದಕ್ಕೊಂದಕ್ಕೆ ಹೊಂದಾಣಿಕೆ ಇಲ್ಲದೇ ನಷ್ಟವಾಗಿದೆ. ೧ ಕೋಟಿ ಮೊಟ್ಟೆ ಇಲ್ಲ ಎಂದು ಹೇಳುತ್ತೀರಿ. ಇಡೀ ವರ್ಷದ ಸರಣಿಯಲ್ಲಿ ಅವ್ಯಾಹತವಾಗಿ ನಷ್ಟ ಅನುಭವಿಸಬೇಕಾಗುತ್ತದೆ. ನಿಮ್ಮ ಒಂದು ಸಣ್ಣ ತಪ್ಪಿನಿಂದ, ನಿಮ್ಮ ಇಲಾಖೆಯವರ ಮುಂಜಾಗ್ರತೆಯ ಅಭಾವದಿಂದ ಕೃತಕವಾಗಿರತಕ್ಕ ಅಭಾವ ನಿರ್ಮಾಣ ಮಾಡಿದ್ದರ ಫಲವಾಗಿ ಬಹಳ ತಪ್ಪಾಗಿದೆ. ಇವತ್ತು ಇಲಾಖೆ ಮತ್ತು ಉದ್ಯಮಕ್ಕೆ ಹೊರಗಡೆಯಿಂದ ಬರುವ ಅಡ್ಡಿ ಆತಂಕಗಳು ಸಹಜ ಇರಬಹುದು ಅಥವಾ ಅಸಹಜ ಇರಬಹುದು.

ಈ ಸಹಜ ಹಾಗೂ ಅಸಹಜ ಕಾರಣಗಳ ನಿವಾರಣೆ ಮಾಡಿ ಈ ಶಕ್ತಿಯನ್ನು ಬೆಳೆಸಬೇಕೆಂದು ನಾನು ಹೇಳುತ್ತೇನೆ. ಇದು ಸಹಜವಾದುದು. ಸಕಾಲದಲ್ಲಿ ಮಳೆ ಆಗಿಲ್ಲ ಎಂದು ನಿಮ್ಮ ಅಭಿಪ್ರಾಯ, ಅದು ಏನೇ ಇರಲಿ, ಪ್ರೈಸ್ ಸ್ಟೆಬಿಲೈಸ್ ಫಂಡ್ ಏನಿದೆ ಅದರಲ್ಲಿ ಹತ್ತಾರು ಕೊಳವೆ ಬಾವಿ ಹಾಕಿಸಿ ನೀರನ್ನು ಮುಫತ್ತಾಗಿ ಕೊಡುವ ಬಗ್ಗೆ ಕಾರ್ಯೋನ್ಮುಖರಾಗಬೇಕು. ಮಳೆ ಇಲ್ಲದ್ದರಿಂದ ಇಂತಹದ್ದು ಆಯಿತು ಎಂದು ಹೇಳುವ ಸ್ಥಿತಿಗೆ ತಾವು ಬರಬಾರದು. ಈ ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ. ನಿಮ್ಮ ಒಂದು ತಪ್ಪಿನ ಛಾಯೆಯಿಂದ ಈ ವರ್ಷ ಪೂರ್ತಿ ೧೨ ತಿಂಗಳೂ ಇದನ್ನು ಅನುಭವಿಸಬೇಕಾಗುತ್ತದೆಂದು ಹೇಳುತ್ತೇನೆ. ನನ್ನ ಮಾತನ್ನು ತಾವು ಪರೀಕ್ಷೆ ಮಾಡಿನೋಡಬಹುದು. ಮತ್ತೆ ತಮ್ಮ ಒಂದು ತೆರಿಗೆ ನೀತಿಯಿಂದ ಆಗಿರತಕ್ಕ ತೊಂದರೆ. ತಮ್ಮ ತೆರಿಗೆ ನೀತಿಯಲ್ಲಿ ಬದಲಾವಣೆ ಆಗಬೇಕು. ರೇಷ್ಮೆಯಿಂದ ಬರತಕ್ಕ ರೇಷ್ಮೆಗೆ ತಾವು ಏನು ಮಾರ್ಕೆಟ್ ಫೀಸ್ ವಸೂಲಿ ಮಾಡುತ್ತಿದ್ದೀರೋ, ಅದನ್ನು ದುಗುಣ ಮಾಡಿದರು. ಟರ್ನ್ ಓವರ್ ಟ್ಯಾಕ್ಸ್ ಎಂದು ಎರಡೂವರೆ ಪರ್ಸೆಂಟ್ ಹಾಕುತ್ತೀರಿ. ಇವತ್ತು ರೇಷ್ಮೆ ಲಾಬಿ ಎಕ್ಸೈಸ್ ಮತ್ತು ಸಿಮೆಂಟ್ ಲಾಬಿಗಿಂತಾ ದೊಡ್ಡದು ಇದೆ. ಅವರು ಇವತ್ತು ಏನು ಮಾಡಿದರು ಎಂದರೆ ನಿಮ್ಮ ರೇಷ್ಮೆ ವಿನಿಮಯ ಕೇಂದ್ರದ ಅಸ್ತಿತ್ವಕ್ಕೇ ಕೊಡಲಿ ಪೆಟ್ಟು ಕೊಡಬೇಕೆಂದು ಮೂರು ಉದ್ದೇಶಗಳನ್ನು ಇಟ್ಟುಕೊಂಡರು. ರೇಷ್ಮೆ ಉತ್ಪಾದನೆ ಮಾಡುವ ಡೀಲರ್ಸ್‌ನ್ನು ತಮ್ಮ ವಶಕ್ಕೆ ತೆಗೆದುಕೊಂಡು ರೇಷ್ಮೆಯನ್ನು ನಿಮ್ಮ ವಿನಿಮಯ ಕೇಂದ್ರಕ್ಕೆ ಕಳುಹಿಸುತ್ತಾ ಇಲ್ಲ. ಇವತ್ತು ತಾವು ೧೯೮೯-೯೦ ಹಾಗೂ ೧೯೯೦-೯೧ರ ಮೊದಲ ಮೂರು ತಿಂಗಳ ಒಂದುಲೆಕ್ಕವನ್ನು ನೋಡಿದರೆ ತಮಗೆ ಇದು ಮನದಟ್ಟಾಗುತ್ತದೆ. ಏಪ್ರಿಲ್ ಮೇ ತಿಂಗಳುಗಳಲ್ಲಿ ಎರಡೂ ಸಾಲಿನಲ್ಲಿ ಎಷ್ಟು ರೇಷ್ಮೆ ವಿನಿಮಯ ಕೇಂದ್ರಕ್ಕೆ ಬಂದಿವೆ ಎಂಬುದರ ಅಂಕಿಅಂಶ ನೋಡಿ. ನನ್ನಲ್ಲಿರುವ ಅಂಕಿ ಅಂಶವನ್ನು ತಮ್ಮ ಗಮನಕ್ಕೆ ತರುತ್ತೇನೆ. ಏಪ್ರಿಲ್ ೯೦ರಲ್ಲಿ ೧೯೮.೧೪ ಟನ್ ರೇಷ್ಮೆ ಬಂದಿದ್ದರೆ ೧೯೮೯ರ ಏಪ್ರಿಲ್‌ನಲ್ಲಿ ೨೮೫.೫೩೮ ಟನ್ ರೇಷ್ಮೆ ಬಂದಿತ್ತು, ಅದೇ ೧೯೯೦ರ ಮೇ ತಿಂಗಳಲ್ಲಿ ೨೧೬ ಟನ್ ಬಂದಿದ್ದರೆ ೧೯೮೯ರಲ್ಲಿ ೨೧೦ ಟನ್ ಬಂದಿತ್ತು. ಅದೇ ಜೂನ್ ೩ನೇ ವಾರದವರೆಗೆ ಈಗ ೧೯೯ ಟನ್ ಬಂದಿದ್ದರೆ ೧೯೮೯ರಲ್ಲಿ ಜೂನ್ ೨೧೯ ಟನ್ ಬಂದಿತ್ತು. ಇವತ್ತು ೨೩೪ ಟನ್ ರೇಷ್ಮೆ ಕಾಳಸಂತೆಯಲ್ಲಿ ವ್ಯಾಪಾರವಾಗಿದೆ. ನಿಮ್ಮ ರೇಷ್ಮೆ ವಿನಿಮಯ ಕೇಂದ್ರಕ್ಕೆ ಅದು ಬರಲಿಲ್ಲ. ಇದರಿಂದಾಗಿ ೧೫ ಲಕ್ಷ ರೂಪಾಯಿ ಮಾರ್ಕೆಟ್ ಫೀಸನ್ನು ನೀವು ಕಳೆದುಕೊಂಡಿದ್ದೀರಿ, ಇವತ್ತು ತಮ್ಮ ಎನ್‌ಫೋರ್ಸ್‌ಮೆಂಟ್ ಜನ ಏನಿದ್ದಾರೆ, ಅವರ ಕೈ ಬೆಚ್ಚಗಾಗಿದೆ. ಅವರು ತಮ್ಮ ಕೆಲಸವನ್ನು ಸರಿಯಾಗಿ ನಿರ್ವಹಿಸುತ್ತಾ ಇಲ್ಲ. ಇದೇ ರೀತಿಯಾಗಿ ಇನ್ನು ಆರು ತಿಂಗಳು ಹೋದರೆ ಯಾವ ಉದ್ದೇಶದಿಂದ ಸರ್ಕಾರ ೧ ಪರ್ಸೆಂಟ್ ಮಾರ್ಕೆಟ್ ಫೀ ಜಾಸ್ತಿ ಹಾಗೂ ಎರಡೂವರೆ ಪರ್ಸೆಂಟ್ ಟರ್ನ್ ಓವರ್ ಟ್ಯಾಕ್ಸ್ ಹಾಕಿದೆ ಅದರಿಂದ ಎಷ್ಟು ಸರ್ಕಾರಕ್ಕೆ ಉತ್ಪತ್ತಿ ಬರುತ್ತಿತ್ತೋ ಅದಕ್ಕಿಂತಲೂ ನಾಲ್ಕು ಪಟ್ಟು ಜಾಸ್ತಿ ಹಣ ಇದರಲ್ಲಿ ಹೋಗುತ್ತದೆ, ತಮ್ಮ ಮುಖಾಂತರ ನಾನು ಮಾನ್ಯ ಆರ್ಥಿಕ ಮಂತ್ರಿಗಳಲ್ಲಿ ಕೈಮುಗಿದು ಕೇಳುವುದು ಇಷ್ಟೇ; ಈ ಉದ್ಯಮ ಉಳಿಯಬೇಕೆಂದಿದ್ದರೆ, ಇದನ್ನು ನಂಬಿಕೊಂಡಿರತಕ್ಕ ಕೋಟ್ಯಾಂತರ ಜನ ಉಳಿಯಬೇಕೆಂದಿದ್ದರೆ ದಯಮಾಡಿ ಟರ್ನ್ ಓವರ್ ಟ್ಯಾಕ್ಸ್‌ನ್ನು ತಿದ್ದುಪಡಿ ಮಾಡಬೇಕು. ನಮ್ಮ ರೇಷ್ಮೆ ಮಂತ್ರಿಗಳೂ ಕೂಡಾ ಇದರ ಬಗ್ಗೆ ತಮ್ಮ ಪ್ರಭಾವ ಬೀರಿ ಅವರಿಗೆ ಕನ್ವಿನ್ಸ್ ಮಾಡಬೇಕಾಗುತ್ತದೆ. ಇವತ್ತು ಮಾರ್ಕೆಟ್ ಫೀಸನ್ನು ೧ ರಿಂದ ಒಂದೂವರೆ ಮಾಡಿ ಅಥವಾ ಎರಡು ಪರ್ಸೆಂಟ್ ಮಾಡಿ ಆದರೆ ಟರ್ನ್ ಓವರ್ ಟ್ಯಾಕ್ಸ್‌ನ್ನು ಕೈಬಿಡಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ರೇಷ್ಮೆ ವಿನಿಮಯ ಕೇಂದ್ರಕ್ಕೆ ಇನ್ನು ೩ ತಿಂಗಳಾದಮೇಲೆ ೧ ಕೇಜಿ ರೇಷ್ಮೆ ಕೂಡಾ ಬರುವುದಿಲ್ಲವೆಂದು ಧೈರ್ಯವಾಗಿ ಹೇಳುತ್ತಿದ್ದೇನೆ, ದಯಮಾಡಿ ಈ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ಹೇಳುತ್ತೇನೆ. ಈ ಉದ್ಯಮಕ್ಕೆ ತಾವು ಪುರಸ್ಕಾರವನ್ನು ಕೊಡಬೇಕು. ಯಾವ್ಯಾವ ಹಂತದಲ್ಲಿ ಏನೇನು ಪ್ರೋತ್ಸಾಹ ಕೊಡಬೇಕು ಅದನ್ನು ಕೊಡಬೇಕು. ಮೊದಲು ಟರ್ನ್‌ಓವರ್ ಟ್ಯಾಕ್ಸನ್ನು ತೆಗೆಸಬೇಕೆಂದು ಹೇಳುತ್ತಿದ್ದೇನೆ. ಗೂಡು ಮಾರ್ಕೆಟ್‌ನಿಂದ ಮತ್ತು ರೇಷ್ಮೆ ವಿನಿಮಯಕೇಂದ್ರದಿಂದ ಬೆಲೆ ನಿಗದೀಕರಣ ನಿಧಿಗೆ ಸುಮಾರು ೬೦ ಕೋಟಿ ರೂಪಾಯಿ ಸಂದಾಯವಾಗಿದೆ. ಅದರಲ್ಲಿ ನೇರವಾಗಿ ರೈತರಿಗೆ ಒಂದು

ರೂಪಾಯಿ ಸಹ ಖರ್ಚು ಮಾಡಿಲ್ಲ. ನಾವು ಕೇಳಿದರೆ ರೇಷ್ಮೆ ಗೋಡೌನ್‌ಗಳನ್ನು ಕಟ್ಟಿಸುತ್ತಿದ್ದೇವೆ, ರೈತಭವನಗಳನ್ನು ಕಟ್ಟಿಸಿದ್ದೇವೆಂದು ಹೇಳುತ್ತೀರಿ ನಮಗೆ ಬೇಕಾಗಿರುವುದು ಅವಲ್ಲ. ನೇರವಾಗಿ ರೈತನಿಗೆ ಪ್ರತ್ಯಕ್ಷವಾಗಿ ಸಹಾಯವಾಗುವಂತಹ ನೀತಿಯನ್ನು ತಾವು ಅಳವಡಿಸಿಕೊಳ್ಳಬೇಕು. ೬೦ ಕೋಟಿ ರೂಪಾಯಿಗಳನ್ನು ಈಗ ಏನು ಗಳಿಸಿದ್ದೀರಿ ; ಇದನ್ನು ಕೃಷಿ ರೇಷ್ಮೆ ಉದ್ಯಮದಲ್ಲಿ ಯಾರು ನಿರತರಾಗಿದ್ದಾರೆ ಅವರ ಶ್ರೇಯೋಭಿವೃದ್ಧಿಗಾಗಿ ವೆಚ್ಚ ಮಾಡುತ್ತೇವೆ ಎನ್ನುವ ಮಾತನ್ನು ಕೊಟ್ಟಿದ್ದೀರಿ. ಆದರೆ ಮಾಡುವ ಕೆಲಸದಲ್ಲಿ ತಪ್ಪಿದ್ದೀರಿ ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಸಿಕ್ ಇಂಡಸ್ಟ್ರೀಸ್ ಎಂದು ಹೇಳಿ ಅದಕ್ಕೆ ಮೂರ್‍ನಾಲ್ಕು ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದೀರಿ. ಅದನ್ನು ವಾಪಸ್ ಪಡೆದು ನಮ್ಮ ರೇಷ್ಮೆ ಕೃಷಿಗೆ ಸೌಲಭ್ಯಗಳು ಸಿಗುವ ರೀತಿಯಲ್ಲಿ ನೀವು ಆ ಹಣವನ್ನು ವೆಚ್ಚ ಮಾಡಬೇಕು. ಅದನ್ನು ಮಾಡದಿದ್ದರೆ ನಾವು ರೈತರೆಲ್ಲ ಒಗ್ಗಟ್ಟಾಗಿ ರೇಷ್ಮೆಗೂಡನ್ನು ಮಾರ್ಕೆಟ್‌ಗೆ ತರುವುದಿಲ್ಲ. ಮಹದೇಶ್ವರ ಬೆಟ್ಟದಲ್ಲಿ ೧ ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ನಿಮ್ಮ ಅಧಿಕಾರಿಗಳಿಗೆ ಸಂಬಳ ಕೊಟ್ಟಿದ್ದೀರಿ, ಇಲ್ಲಿರತಕ್ಕದು ನಮ್ಮ ದುಡ್ಡು ಅದನ್ನು ನಮಗೆ ಖರ್ಚುಮಾಡಬೇಕು. ಧನ ಸ್ಥಿರೀಕರಣ ಯೋಜನೆಯಡಿಯಲ್ಲಿರುವ ಹಣವನ್ನು ವೆಚ್ಚ ಮಾಡತಕ್ಕ ವಿಷಯದಲ್ಲಿ ಒಂದು ಸದನದ ಸಮಿತಿಯನ್ನು ಮಾಡಿ. ಆ ಸಮಿತಿಯಲ್ಲಿ ರಾಜ್ಯದಲ್ಲಿ ಗೂಡು ಬೆಳೆಯತಕ್ಕವರ ಒಬ್ಬ ಪ್ರತಿನಿಧಿ, ರೇಷ್ಮೆಗೂಡು ಬಿಚ್ಚತಕ್ಕವರ ಒಬ್ಬ ಪ್ರತಿನಿಧಿ, ಎಲ್ಲಾ ಪ್ರತಿನಿಧಿಗಳನ್ನೊಳಗೊಂಡ ಒಂದು ಸಮಿತಿಯನ್ನು ಮಾಡಿ. ಆ ಸಮಿತಿಗೆ ಇಷ್ಟು ಹಣ ಇದೆ, ಇಂಥಿಂಥ ಬಾಬಿಗೆ ವೆಚ್ಚ ಮಾಡುತ್ತಿದ್ದೇವೆ, ಇಂಥಿಂಥದಕ್ಕೆ ಖರ್ಚು ಮಾಡುವುದಕ್ಕೆ ತಮ್ಮ ಅನುಮತಿಯನ್ನು ಅಥವಾ ಮಂಜೂರಾತಿಯನ್ನು ಕೊಡಬೇಕೆಂದು ಕೇಳಿ ಹಣ ಪಡೆದು ನಂತರ ಹಣವನ್ನು ವೆಚ್ಚ ಮಾಡಬೇಕೆಂದು ಹೇಳುತ್ತೇನೆ. ತಮ್ಮ ಕಾಲದಲ್ಲಿ ಅಂತಹ ಒಂದು ಸಮಿತಿಯನ್ನು ಮಾಡಿ. ಅವರಿಗೆ ಸೂಕ್ತವಾದ ಪ್ರಾತಿನಿಧ್ಯವನ್ನು ಕೊಡುವ ಮೂಲಕ ಅವರ ಸಲಹೆ ಪಡೆದುಕೊಂಡು ಹಣವನ್ನು ಖರ್ಚು ಮಾಡಿಯೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್ ಎಂದು ಅಸ್ತಿತ್ವಕ್ಕೆ ಬಂದಿದೆ. ಅದಕ್ಕೆ ೨.೯ ಕೋಟಿ ರೂಪಾಯಿಗಳ ಬಂಡವಾಳ ಕೊಟ್ಟಿದ್ದಾರೆ. ಅವರು ಪರೋಕ್ಷವಾಗಿ ಪ್ರತ್ಯಕ್ಷವಾಗಿ ಶೇಕಡ ೧೧ರಷ್ಟು ಮಾತ್ರ ರೇಷ್ಮೆಯನ್ನು ಕೊಂಡುಕೊಂಡಿದ್ದಾರೆ. ಇದರಿಂದಾಗಿ ಆ ಬೋರ್ಡನ್ನು ಮಾಡಿದ ಉದ್ದೇಶ ನೆರವೇರಲಿಲ್ಲ. ಶೇಕಡ ೨೫ರಷ್ಟನ್ನಾದರೂ ತೆಗೆದುಕೊಳ್ಳಬೇಕಾಗಿತ್ತು, ರೇಷ್ಮೆಬೆಲೆಯನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕಾಗಿತ್ತು. ಬೆಲೆ ಗರಿಷ್ಟ ಬೆಲೆಯ ಮೇಲೆ ಹೋಗಬಾರದು, ಕನಿಷ್ಟ ದರಕ್ಕಿಂತ ಕಡಿಮೆಯಾಗಬಾರದು ಎನ್ನುವ ಉದ್ದೇಶದಿಂದ ಸಿಲ್ಕ್ ಮಾರ್ಕೆಟ್ ಬೋರ್ಡ್ ಸ್ಥಾಪನೆ ಮಾಡಲಾಯಿತು. ಆದರೆ ಆ ಉದ್ದೇಶ ನೆರವೇರಲಿಲ್ಲ. ಬೆಲೆ ಸ್ಥಿರೀಕರಣ ಯೋಜನೆಯ ಪ್ರಕಾರ ಇವರು ಕೆಲಸ ಮಾಡುತ್ತಿಲ್ಲ. ಕೆಲಸ ಮಾಡುವುದಕ್ಕೆ ಹಣವನ್ನು ಕೊಡಲಿಲ್ಲ. ಬೆಲೆ ನಿಯಂತ್ರಣ ಮಾಡಲಿಲ್ಲ. ಕರ್ನಾಟಕ ಸಿಲ್ಕ್ ಬೋರ್ಡ್‌ನವರು ಮಾಡಬಾರದ ಕೆಲಸವನ್ನು ಮಾಡಿದ್ದಾರೆ. ಫೆಬ್ರಿಕ್ ಮಾಡುವ ಉದ್ದೇಶದಿಂದ ಸಿಲ್ಕ್ ಮಾರ್ಕೆಟನ್ನು ಮಾಡಿರಲಿಲ್ಲ. ಅವನ್ನು ಅವರು ಏತಕ್ಕೆ ಮಾಡಿದರು ? ೨೫ ಲಕ್ಷ ರೂ.ಗಳ ಬಂಡವಾಳ ಹಾಕಿದ್ದಾರೆ. ಹೊರ ರಾಜ್ಯಕ್ಕೆ ಹೋಗಿ ಒಂದು ಮೀಟರ್‌ಗೆ ೭ ರೂಪಾಯಿನಂತೆ ಕೊಟ್ಟು ನೇಯಿಸಿ ದಾಸ್ತಾನು ಮಾಡಿಸಿದರು. ಅದಕ್ಕೆ ಸರಿಯಾದ ಬೆಲೆ ಸಿಗಲಿಲ್ಲ. ಸರ್ಕಾರ ಅದನ್ನು ಏತಕ್ಕೆ ಮಾಡಿದರು? ನಮ್ಮಲ್ಲಿಯೇ ಬೇಕಾದಷ್ಟು ಗೋಡೌನ್‌ಗಳಿವೆ. ಒಂದು ತಿಂಗಳಿಗೆ ಐದಾರು ಸಾವಿರ ರೂಪಾಯಿಗಳ ಬಾಡಿಗೆಯನ್ನು ಕೊಟ್ಟು ಗೋಡೌನ್‌ಗಳನ್ನು ಮಾಡಿದ್ದಾರೆ. ಅದನ್ನು ಯಾರ ಮುಲಾಜಿಗೆ ಮಾಡಿದ್ದಾರೆ ? ಯಾರನ್ನು ತೃಪ್ತಿಪಡಿಸುವುದಕ್ಕೆ ಅಷ್ಟೊಂದು ಬಾಡಿಗೆ ಕೊಡುತ್ತಿದ್ದಾರೆ ? ಬೆಂಗಳೂರು ನಗರದ ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿ ೪ ಲಕ್ಷ ರೂಪಾಯಿ ಮುಂಗಡ ಕೊಟ್ಟು ಬಾಡಿಗೆಗೆ ತೆಗೆದುಕೊಂಡಿದ್ದಾರೆ, ಇಲ್ಲಿ ಕೆಲವರ ಹೆಸರುಗಳನ್ನು ಹೇಳುವುದು ಸೂಕ್ತವಲ್ಲ. ತಾವು ರೇಷ್ಮೆ ಮಂತ್ರಿಗಳು ಹೊಸದಾಗಿ ಬಂದಿದ್ದೀರಿ. ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಎಂದು ಒಂದು ಇಲಾಖೆಯನ್ನು ಮಾಡಿದ್ದಾರೆ. ಇದು ನಾನು ಮೊದಲೇ ಹೇಳಿದ ಹಾಗೆ ಈ ರೇಷ್ಮೆ ಪ್ರಪಂಚದಲ್ಲಿ ಈ ಗೂಡು ಮಾರುಕಟ್ಟೆ, ರೇಷ್ಮೆ ವಿನಿಮಯಕೇಂದ್ರ ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್‌ಗಳೇನು ಇವೆ, ಇವು ದೊಡ್ಡ ಧೂಮಕೇತು.

ಯಾರನ್ನು ತೃಪ್ತಿ ಮಾಡುವುದಕ್ಕೆ ಇವರು ಪರದೇಶಗಳಿಗೆ ಕಳಿಸಿದರೋ ಎಂದು ಗೊತ್ತಿಲ್ಲ, ಹತ್ತು ಸಾವಿರ ಟನ್ ಬೈವೋಲ್ಟಿನ್ ತಳಿ ಉತ್ಪಾದನೆಯಾಗಬೇಕೆಂಬ ಉದ್ದೇಶದಿಂದ ತಂದರೂ ಸಹ ಇವತ್ತಿಗೂ ಸಹ ೧೫೦ ಟನ್ ಕೂಡ ಗುರಿ ಮುಟ್ಟಿಲ್ಲ. ಯಾವ ಉದ್ದೇಶಕ್ಕಾಗಿ ತರಿಸಿದರೋ ಗೊತ್ತಾಗುತ್ತಿಲ್ಲ. ಅದಕ್ಕೆ ಆಗಿರುವಂಥಾದ್ದು ಖರ್ಚು ೨೪–೨೫ ಕೋಟಿ ಮತ್ತು ಈಗ ನಷ್ಟ ಆಗಿರುವಂಥಾದ್ದು ೨೨ ಕೋಟಿ ಎಂದರೆ, ಒಟ್ಟು ೪೫–೫೦ ಕೋಟಿ ನಷ್ಟ ಆಯಿತು. ಯಾರ ಉದ್ಧಾರಕ್ಕೋಸ್ಕರ ಸ್ವಾಮಿ ಈ ಕೆಲಸ ಮಾಡಿರುವುದು ? ನಾನು ಚಾಲೆಂಜ್ ಮಾಡಿ ಹೇಳುತ್ತೇನೆ, ಇದು ಇನ್ನು

ಮೂರು ವರ್ಷವಾದರೂ ಲಾಭ ಸಂಪಾದನೆ ಮಾಡುವುದಕ್ಕೆ ಆಗುವುದಿಲ್ಲ, ಲಾಭ ಬೇಡ ನಷ್ಟವಾದರೂ ಸರಿದೂಗಿಸುವುದಕ್ಕೆ ಆಗುತ್ತದೆಯೆ ? ಬೇಕಾದಷ್ಟು ವರ್ಕರ್ಸ್ ನೀವು ಇಟ್ಟುಕೊಂಡಿದ್ದೀರಿ, ನಷ್ಟ ಬೇರೆ ಆಗುತ್ತಿದೆ. ಸಿಲ್ಕ್ ಸೀರೆಗಳನ್ನು ನೀವೇನು ನೇಯುತ್ತೀರಿ, ಇದರಿಂದ ಏನೂ ಪ್ರಯೋಜನ ಆಗುವುದಿಲ್ಲ ದಯವಿಟ್ಟು ಒಂದು ಸಮಿತಿಯನ್ನು ಮಾಡಿ, ಅದರ ಸಲಹೆಗಳನ್ನು ತೆಗೆದುಕೊಂಡು ಅದರ ಮೇರೆಗೆ ನೀವು ಕಾರ್ಯ ಮಾಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಲ್ಲದಿದ್ದರೆ ಇದರಿಂದ ಏನೂ ಪ್ರಯೋಜನ ಆಗುವುದಿಲ್ಲ. ಏಕೆಂದರೆ, ಇದೇ ರೀತಿ ಮುಂದುವರೆದರೆ ನಷ್ಟ ಜಾಸ್ತಿಯಾಗುತ್ತದೆ. ಆದ್ದರಿಂದ ದಯವಿಟ್ಟು ಆ ಕೆಲಸವನ್ನು ಆದಷ್ಟು ಬೇಗ ಮುಗಿಸಬೇಕೆಂದು ಹೇಳಿ, ಇನ್ನು ರೇಷ್ಮೆ ಕಾರ್ಖಾನೆಗಳ ಬಗ್ಗೆ ಬರುತ್ತಿದ್ದೇನೆ. ಬಹುಶಃ ಈ ನಾಲ್ಕು ವರ್ಷಗಳಲ್ಲಿ ಸುಮಾರು ಎಷ್ಟು ನಷ್ಟವಾಗಿದೆ ಎಂದರೆ ೬೨೧.೮೪ ಕೋಟಿಯಷ್ಟು ನಷ್ಟವಾಗಿದೆ ಅಂದರೆ ೬ ಕೋಟಿ ೨೧ ಲಕ್ಷದ ೪ ಸಾವಿರ ರೂಪಾಯಿಗಳನ್ನು ಕೊಳ್ಳೆಗಾಲ, ಮಾಂಬಳ್ಳಿ, ಮುಡಗೊಂಡ, ಸಂತೆಬರನಹಳ್ಳಿ, ಚಾಮರಾಜನಗರ ಇಲ್ಲಿ ಈ ಕೇಂದ್ರಗಳಲ್ಲಿ ಕೆ. ಎಸ್ ಐ. ಸಿ. ಅಲ್ಲದೆ ಇಷ್ಟು ನಷ್ಟವಾಗಿದೆಯೆಂದು ವರದಿಯಲ್ಲಿ ಕೊಟ್ಟಿದ್ದಾರೆ. ಇದರ ಲಾಭ ಎಷ್ಟು ಕೆ. ಜಿ. ಉತ್ಪಾದನೆ ಆಯಿತು ಎಷ್ಟು ಟನ್ ಗೂಡನ್ನು ಇಲ್ಲಿ ಮಾರಿದೆವು ಎಂಬುದನ್ನು ಏಕೆ ನಮೂದಿಸಲಿಲ್ಲ? ಹಾಗೆ ಮಾಡಿದ್ದರೆ ಪ್ರತಿವರ್ಷ ಇಂಪ್ರೂವ್ ಮಾಡುತ್ತಿದ್ದೇವೆಯೋ ಇಲ್ಲವೇ ಎಂದು ಗೊತ್ತಾಗುತ್ತಿತ್ತು. ಇಷ್ಟು ಟನ್ ಗೂಡುಗಳನ್ನು ಇಲ್ಲಿ ಟ್ರಾನ್ಸಾಕ್ಟ್ ಮಾಡಲಾಗಿದೆ, ಇಷ್ಟು ಹಣ ಉಪಯೋಗಿಸಲಾಗಿದೆ ಎಂಬುದನ್ನು ನೀವು ಮಾಡಿಲ್ಲ. ಹಾಗೆ ಮಾಡಿದ್ದರೆ ನಿಮ್ಮ ಕಾರ್ಯವೈಖರಿ ಎಫಿಶಿಯನ್ಸಿ ಗೊತ್ತಾಗುತ್ತಿತ್ತು. ಈ ಕೆಲಸವನ್ನು ತಾವು ಮಾಡಿಲ್ಲ. ದಯವಿಟ್ಟು ಮುಂದೆ ವರದಿ ಕೊಡುವಾಗ ಇವೆಲ್ಲದರ ಬಗ್ಗೆ ಸವಿಸ್ತಾರವಾದ ವಿವರಗಳನ್ನು ಕೊಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸ್ವಾಮಿ, ಇವೊತ್ತು ಕೂಡ ನಾನು ಓದಿದೆ, ಏಕೆಂದರೆ ಕೆ. ಆರ್. ಪೇಟೆ ತಾಲ್ಲೂಕಿನಲ್ಲ ಗೂಡಿನ ಅಭಾವ ಜಾಸ್ತಿ ಇದೆ ಎಂದು ಅಲ್ಲಿ ಸಹಸ್ರಾರು ಎಕರೆಗಳಲ್ಲಿ ರೇಷ್ಮೆ ಕಡ್ಡಿಗಳಿವೆ, ಆಗಿರುವುದು ಕೇವಲ ಐದು ಸಾವಿರ ಮೊಟ್ಟೆಗಳು ಮಾತ್ರ ಪ್ರತಿ ವರ್ಷ ೩೦ ಸಾವಿರ ಮೊಟ್ಟೆ ಬೇಕಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ ನಾನು ಒಂದೇ ಒಂದು ಸಲಹೆಯನ್ನು ಕೊಡುತ್ತೇನೆ. ಪ್ರತಿಯೊಬ್ಬರಿಗೂ ಒಂದು ಕಾರ್ಡು ಕೊಟ್ಟು ಮೊಟ್ಟೆ ಬೇಕೆನ್ನುವವರು ಏನು ಮಾರು ಕಟ್ಟೆಗೆ ಬರುತ್ತಾರೆ, ಅವರು ಮುಂದಿನ ಸಾರಿ ಎಷ್ಟು ಮೊಟ್ಟೆ ಬೇಕೆಂದು ಹೇಳುತ್ತಾರೆ, ಅದನ್ನು ಅವರಿಂದ ಬರೆಯಿಸಿಕೊಂಡು ಪ್ರತಿ ಏಪ್ರಿಲ್, ಮೇನಲ್ಲಿ ಮೊಟ್ಟೆ ಸರಬರಾಜು ಮಾಡುವ ಒಂದು ವ್ಯವಸ್ಥೆಯನ್ನು ತಾವು ತೆಗೆದುಕೊಂಡು ಬರಬೇಕು. ಇದರಿಂದ ಎಷ್ಟು ಮೊಟ್ಟೆ ನಮಗೆ ಬೇಕಾಗುತ್ತದೆ ಎನ್ನುತಕ್ಕಂಥ ನಿರೀಕ್ಷಣೆ ಮಾಡಬಹುದು ಮತ್ತು ಅಷ್ಟು ಮೊಟ್ಟೆಗಳನ್ನು ಉತ್ಪಾದನೆ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಉಪಾಧ್ಯಕ್ಷರು.—ಶ್ರೀ ರಾಜುಗೌಡರೇ, ನೀವು ದಯವಿಟ್ಟು ಸಹಕಾರ ಕೊಡಬೇಕು ನೀವು ಪ್ರಾರಂಭ ಮಾಡಿ ಅರ್ಧಗಂಟೆ ಮೇಲಾಯಿತು. ಇನ್ನೂ ಮಾತನಾಡುವವರು ಬಹಳ ಇದ್ದಾರೆ. ಆರು ಗಂಟೆಗೆ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಜಿ. ರಾಜುಗೌಡ.—ಮಾನ್ಯ ಉಪಾಧ್ಯಕ್ಷರೇ, ಕಾಲದ ಅಭಾವ ಇರುವುದರಿಂದ ಈ ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಬಗ್ಗೆ ಒಂದೇ ಒಂದು ಮಾತು ಹೇಳಿ ಮುಗಿಸುತ್ತೇನೆ. ದಯವಿಟ್ಟು ಈ ಕಾರ್ಪೊರೇಷನ್ ಏನಿದೆ, ಇದರ ಕಾರ್ಯದಕ್ಷತೆ ಮತ್ತು ಕಾರ್ಯವೈಖರಿಯನ್ನು ನೋಡಿದರೆ ಇದು ಮತ್ತಷ್ಟು ಪಾತಾಳಕ್ಕೆ ನಮ್ಮನ್ನು ತಳ್ಳುತ್ತದೆ ಎಂದು ಮನದಟ್ಟಿಕೆಯಾಗುತ್ತದೆ. ದಯವಿಟ್ಟು ಇದನ್ನು ಇಂಪ್ರೂವ್ ಮಾಡಲಿಕ್ಕೆ ಯಾವರೀತಿ ಮಾಡಬೇಕೆಂಬುದರ ಬಗ್ಗೆ ನಾನು ಕೆಲವು ಸಲಹೆಗಳನ್ನು ಕೊಡಬೇಕು ತಾವು ಸದನದ ಒಂದು ಸಮಿತಿ ಮಾಡಿದಾಗ ಆ ಸಲಹೆಗಳನ್ನು ಕೊಡುತ್ತೇನೆ. ಈ ಸಿಲ್ಕ್ ಫಿಲೇಚರ್ ಬಗ್ಗೆ ಕೂಡ ಅಷ್ಟೆ. ಅವುಗಳ ಸಂಖ್ಯೆ ಬಹಳ ಜಾಸ್ತಿ ಇದೆ. ಸಿಲ್ಕ್ ಫಿಲೇಚರ್‌ಗಳನ್ನು ಮುಚ್ಚಿ ಅಲ್ಲಿರತಕ್ಕಂಥ ಕಾರ್ಮಿಕರಿಗೆ ವರ್ಷಪೂರ್ತಿ ಸಂಬಳ ಕೊಟ್ಟರೆ ನಷ್ಟವಾಗುತ್ತದೆ. ಸಧ್ಯದ ಪರಿಸ್ಥಿತಿಯಲ್ಲಿ ಎಫಿಶಿಯನ್ಸಿ ಜಾಸ್ತಿ ಮಾಡಿದರೂ ಕೂಡ ಈ ನಷ್ಟವನ್ನು ತುಂಬಲಿಕ್ಕೆ ಬಹಳ ದೂರದಲ್ಲಿದ್ದೇವೆ. ಈ ನಷ್ಟ ತಗ್ಗಿಸಲಿಕ್ಕೆ ವ್ಯವಸ್ಥೆ ಮಾಡಬೇಕು ಮತ್ತು ದಯವಿಟ್ಟು ಈ ಟ್ರಾಕ್ ತಪ್ಪಿಸಿದರೆ ಮಾತ್ರ ಈ ಉದ್ಯಮದ ರಕ್ಷಣೆಯಾಗುತ್ತದೆ. ಆದ್ದರಿಂದ ನಾನು ಈಗ ತಾನೆ ಹೇಳಿರುವಂತೆ ಮುಖ್ಯವಾಗಿ ಮೊಟ್ಟೆಯ ಒಳ್ಳೆಯ ತಳಿಯನ್ನು ಸಕಾಲದಲ್ಲಿ ಸರಬರಾಜು ಮಾಡುವುದು ಮತ್ತು ಆಗ ಈ ಉದ್ಯಮದಿಂದ ಹೆಚ್ಚು ವಿದೇಶಿ ವಿನಿಮಯ ಗಳಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿ ಇನ್ನೂ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗಿದ್ದರೂ ಕಾಲಾವಕಾಶದ ಅಭಾವದಿಂದ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

೪.೧೫ ಪಿ. ಎಂ

† ಶ್ರೀ ಪಿ ಜಿ.ಆರ್. ಸಿಂಧ್ಯ (ವಿರೋಧ ಪಕ್ಷದ ಉಪನಾಯಕರು).—ಸನ್ಮಾನ್ಯ ಉಪಸಭಾಧ್ಯಕ್ಷಿಣಿಯವರೆ, ಈ ದಿವಸ ಮಾನ್ಯ ಕೈಗಾರಿಕೆ ಮತ್ತು ಇಂಧನ ಸಚಿವರು ಹಾಗೂ ರೇಷ್ಮೆ ಇಲಾಖಾ ಸಚಿವರು ಮಂಡಿಸಿರತಕ್ಕ ಬೇಡಿಕೆಗಳ ಬಗ್ಗೆ ನನ್ನ ಅನುಭವದ ಆಧಾರದ ಮೇಲೆ ಒಂದೆರಡು ಸಲಹೆಗಳನ್ನು ಇಲಾಖೆಗಳ ಮಂತ್ರಿಗಳ ಗಮನಕ್ಕೆ ತಂದು ನಾನು ಹೇಳತಕ್ಕ ಸಲಹೆಗಳನ್ನು ಮಾನ್ಯ ಇಬ್ಬರು ಮಂತ್ರಿಗಳೂ ಕಾರ್ಯಾಚರಣೆ ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಾರೆಂದು ನಾನಾದರೂ ನಂಬಿದ್ದೇನೆ. ಮುಖ್ಯವಾಗಿ ರೇಷ್ಮೆ ಗೂಡಿನ ಬೆಳೆಗಾರರಿಗೆ ಇರತಕ್ಕ ಸಮಸ್ಯೆಗಳ ಬಗ್ಗೆ ಹೆಚ್ಚಿನ ವಿಚಾರಗಳನ್ನು ಹಾಗೂ ಸಲಹೆಗಳನ್ನು ಮಾನ್ಯ ರೇಷ್ಮೆ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳಿಗೆ ಮಾತ್ರ ಹೇಳುವುದಕ್ಕೆ ಸೀಮಿತ ಮಾಡುವವನಿದ್ದೇನೆ. ಅತ್ಯಂತ ಸಂತೋಷದ ವಿಚಾರ ಎಂದರೆ, ಮಾನ್ಯ ಮುಖ್ಯಮಂತ್ರಿಗಳು, ನಿಜವಾಗಿಯೂ ವ್ಯವಸಾಯದ ಬಗ್ಗೆ ಅನುಕಂಪ ಇರತಕ್ಕ, ರೇಷ್ಮೆ ವ್ಯವಸಾಯಕ್ಕಿಂತ ಹೆಚ್ಚಿಗೆ ವ್ಯವಸಾಯದ ಬಗ್ಗೆ ತಿಳುವಳಿಕೆ ಹೊಂದಿರತಕ್ಕ ಶಾಸಕರನ್ನು ಮಂತ್ರಿಗಳನ್ನಾಗಿ ಮಾಡಿದ್ದಾರೆ. ಜೊತೆಗೆ ಹಳೆಯ ಮೈಸೂರಿನಲ್ಲಿರತಕ್ಕ ರೈತರ ಸಮಸ್ಯೆಗಳನ್ನು ಸಾಕಷ್ಟು ಅರ್ಥಮಾಡಿಕೊಂಡಿದ್ದಾರೆ. ಅವರಿಗೆ ಸಿಕ್ಕಿರತಕ್ಕ ಅವಕಾಶದಲ್ಲಿ, ರಾಜ್ಯದ ರೇಷ್ಮೆ ಬೆಳೆಗಾರರಿಗೆ ಸಾಕಷ್ಟು ಅನುಕೂಲ ಮಾಡುತ್ತಾರೆಂದು ನಾನಾದರೂ ನಂಬಿದ್ದೇನೆ. ನಮ್ಮ ರಾಜ್ಯದಲ್ಲಿ ಅದರಲ್ಲೂ ವಿಶೇಷವಾಗಿ ತಮಗೆ ಗೊತ್ತಿರುವ ಹಾಗೆ, ಮೈಸೂರು, ಬೆಂಗಳೂರು, ತುಮಕೂರು, ಕೋಲಾರ, ಭಾಗಶಃ ಮಂಡ್ಯ, ಭಾಗಶಃ ಚಿತ್ರದುರ್ಗ ಈ ೫-೬ ಜಿಲ್ಲೆಗಳಲ್ಲಿ ರೈತರಿಗೆ ಒಂದು ವರದಾನವಾಗಿರತಕ್ಕ, ಸುಮಾರು ವರ್ಷಗಳಿಂದ ಒಂದು ರೀತಿಯ ದೇವರಿಂದ ಬರತಕ್ಕ ವರ ಎನ್ನತಕ್ಕ ರೀತಿಯಲ್ಲಿ ನಮಗೆ ಸಹಾಯ ಮಾಡಿರತಕ್ಕ ವ್ಯವಸಾಯವೆಂದರೆ ರೇಷ್ಮೆ ವ್ಯವಸಾಯವಾಗಿದೆ. ತಮಗೆ ಗೊತ್ತಿದೆ, ಒಂದು ಎಕರೆ ಜಮೀನಿನಲ್ಲಿ ರೇಷ್ಮೆ ಸೊಪ್ಪನ್ನು ಹಾಕಿ ಬೆಳೆದು, ಇದನ್ನು ಒಂದು ನೂರರಿಂದ, ನಾನೂರು ಮೊಟ್ಟೆಗೆ ಉಪಯೋಗ ಮಾಡಬಹುದು. ವರ್ಷದಲ್ಲಿ ೫ ಬೆಳೆ ಬೆಳೆಯದೇ ಹೋದರೂ, ನಾಲ್ಕು ಬೆಳೆಯಾದರೂ ಕೂಡ ರೈತನಿಗೆ ೨೫-೩೦ ಸಾವಿರ ರೂಪಾಯಿಗಳು ಸಿಗುತ್ತವೆ. ಎಲ್ಲಾ ಖರ್ಚುಗಳನ್ನು ಬಿಟ್ಟು, ಒಂದು ವರ್ಷಕ್ಕೆ ಒಬ್ಬ ರೈತನ ಕುಟುಂಬ ೨೫-೩೦ ಸಾವಿರ ದುಡಿಯಬಹುದು. ಬಾಕಿ ಯಾವ ವ್ಯವಸಾಯದಲ್ಲೂ ರೈತರು ಇಷ್ಟೊಂದು ಹಣವನ್ನು ಕೂಡಿಸುವುದಕ್ಕೆ ಸಾಧ್ಯವಿಲ್ಲವೆಂದು ತಿಳಿದುಕೊಂಡಿದ್ದೇನೆ. ಯಾವುದೇ ಬಂಡವಾಳ ಇಲ್ಲದೇ ಒಂದು ಎಕರೆಯಲ್ಲಿ ರೇಷ್ಮೆ ಬೆಳೆದು, ೧೬ ಜನರಿಗೆ ಉದ್ಯೋಗ ಕೊಡಬಹುದು ಸನ್ಮಾನ್ಯ ಬಾಲಸುಬ್ರಹ್ಮಣ್ಯಂ ಎಂಬ ಐ. ಎ. ಎಸ್. ಅಧಿಕಾರಿಗಳು, ಉತ್ತಮ ಕೆಲಸಗಾರರು ಹಾಗೂ ದಕ್ಷ ಕೆಲಸಗಾರರು ಇದ್ದರು, ಇವತ್ತಿಗೂ ರೈತರು ಅವರನ್ನು ನೆನಸಿಕೊಳ್ಳುತ್ತಾರೆ. ಹಳೆಯ ಮೈಸೂರಿನ ರೈತರು, ಒಂದು ಎಕರೆ ೨೦ ಗುಂಟೆ ಜಮೀನಿನಲ್ಲಿ ಬೆಳೆಯುತಕ್ಕ ರೈತರೂ ಸಹ ಬಾಲಸುಬ್ರಹ್ಮಣ್ಯ ಅವರನ್ನು ನೆನಸಿಕೊಳ್ಳುತ್ತಾರೆ.

ಏಕೆಂದರೆ ಅವರ ಕಾಲದಲ್ಲಿ ನಿಜವಾಗಿಯೂ ರೈತರಿಗೆ ಈ ಇಲಾಖೆಯಿಂದ ಅನುಕೂಲವಾಯಿತು. ಆದರೆ, ನನಗೆ ಬಹಳ ದುಃಖವಾಗುತ್ತಿದೆ ಏಕೆಂದರೆ ಇತ್ತೀಚಿನ ದಿವಸಗಳಲ್ಲಿ ಈ ರೇಷ್ಮೆ ಇಲಾಖೆಯ ಬಗ್ಗೆ ಕೆಳಮಟ್ಟದ ಅಧಿಕಾರಿಗಳ ಧೋರಣೆಯನ್ನು ನೋಡಿದಾಗ, ಅಲ್ಲಿಯ ಚಟುವಟಿಕೆಗಳನ್ನು ನೋಡಿದಾಗ, ಇಲ್ಲಿ ಗೂಡನ್ನು ಬೆಳೆದು, ಮಾರುಕಟ್ಟೆಗೆ ತೆಗೆದುಕೊಂಡು ಹೋಗತಕ್ಕ ಸಂದರ್ಭದಲ್ಲಿ ರೈತರಿಗೆ ಆಗತಕ್ಕ ಅನ್ಯಾಯ, ಮತ್ತು ಮೋಸವನ್ನು ನೋಡಿದಾಗ ಬಹಳ ದುಃಖವಾಗುತ್ತದೆ. ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ರೈತನಿಗೆ ಯಾವುದೇ ಸಾಲ ಮನ್ನಾ ಬೇಕಾಗಿಲ್ಲ, ಹಾಗೂ ಸಾಲವೂ ಬೇಕಾಗಿಲ್ಲ. ಕರ್ನಾಟಕದ ರೇಷ್ಮೆಗೆ ಇಡೀ ರಾಷ್ಟ್ರದಲ್ಲಿಯೇ, ಅಷ್ಟೇ ಅಲ್ಲ ವಿಶ್ವದಲ್ಲೇ ವಿಶೇಷವಾದ ಸ್ಥಾನಮಾನ ಇದೆ. ಕರ್ನಾಟಕದ ರೇಷ್ಮೆ, ಜಪಾನ್, ಕೊರಿಯಾ, ಚೈನಾ ರೇಷ್ಮೆಗಿಂತ ಯಾವುದೇ ರೀತಿಯಲ್ಲಿಯೂ ಕಡಿಮೆ ಇಲ್ಲ. ನಮ್ಮ ರೈತರು ರೇಷ್ಮೆಯನ್ನು ಬೆಳೆದು, ರೇಷ್ಮೆ ಬಟ್ಟೆಯನ್ನು ಹಾಕಿಕೊಳ್ಳುವುದನ್ನು ಬಿಟ್ಟು, ಹರಕಲು ಚಡ್ಡಿ ಹಾಕಿಕೊಳ್ಳುತ್ತಾರೆ. ಒಂದು ನೂರು ಮೊಟ್ಟೆಗೆ, ೨೫೦ ರೂಪಾಯಿ ಕೊಟ್ಟು ಕೊಳೆತ ಮೊಟ್ಟೆಯನ್ನು ತೆಗೆದುಕೊಂಡು ಹೋಗಿ ಇವತ್ತು ೫ ರೂಪಾಯಿ ಕೂಡ ವಾಪಸ್ ಬರದೇ ಇರತಕ್ಕ ಪರಿಸ್ಥಿತಿ ಆಗಿದೆ ರೇಷ್ಮೆ ಬೆಳೆಗಾರರಿಗೆ ಒಂದು ರೀತಿಯಲ್ಲಿ ವಿಷ ಕುಡಿಯತಕ್ಕ ಪರಿಸ್ಥಿತಿ ಬಂದಿದೆ. ತಾವು ತಮ್ಮ ವರದಿಯಲ್ಲಿ ಹೇಳಿದ್ದೀರಿ, ಈ ವರದಿಯನ್ನು ಹಾಗೂ ೧೯೮೫ನೇ ಇಸವಿಯಿಂದ ಇರತಕ್ಕ ವರದಿಗಳನ್ನೂ ತಾವು ತರಿಸಿ ನೋಡಿ. ಅಧಿಕಾರಿಗಳು ಏನು ಮಾಡುತ್ತಾರೆಂದು ಹೇಳಿದರೆ, ಅಬ್ಜೆಕ್ಟ್, ಆರ್ ಪ್ರಾಜೆಕ್ಟ್ ಟ್ರೈಬಲ್ ಸಬ್ ಪ್ಲಾನ್, ಬೈವೋಲ್ಟೀನ್, ಮಾರ್ಕೆಟಿಂಗ್ ಈ ರೀತಿ ಹೆಡ್‌ಲೈನ್ಸ್ ಹಾಗೆಯೇ ಇರುತ್ತವೆ.

ಒಳಗೆ ಒಂದೆರಡು ಅಂಕಿಅಂಶಗಳನ್ನು ಬದಲಾವಣೆ ಮಾಡುತ್ತಾರೆಯೇ ಹೊರತು ಯಾವುದೂ ಸಹ ರೈತರಿಗೆ ಅನುಕೂಲ ಆಗತಕ್ಕಂಥ ಒಂದು ಕಾರ್ಯಕ್ರಮಗಳು ಐದು ವರ್ಷದ ಹಿಂದಿನಿಂದಲೂ ತಿಳಿಸಿಲ್ಲ. ಇವತ್ತಿಗೂ ತಿಳಿಸಿಲ್ಲ ಅದನ್ನು ಮಾಡಬೇಕೆಂಬ ಒಂದು ಮನೋಧರ್ಮ ಅವರಲ್ಲಿ ಇಲ್ಲ ಎಂದು ಹೇಳಬೇಕಾಗುತ್ತದೆ. ಇವತ್ತು ಕಬ್ಬಿಗೆ ಮತ್ತು ಭತ್ತಕ್ಕೆ ಬೇಕಾಗುವಷ್ಟು ನೀರು ರೇಷ್ಮೆಗೆ ಬೇಕಾಗಿಲ್ಲ. ಭತ್ತಕ್ಕೆ ಕಬ್ಬಿಗೆ

ಬೇಕಾಗತಕ್ಕಂಥ ಕಾಲು ಭಾಗ ನೀರಿನಲ್ಲಿ ರೇಷ್ಮೆ ಬೆಳೆಯಬಹುದು. ನೀವು ಕೊಡತಕ್ಕಂಥ ಗೂಡುಗಳ ಬಗ್ಗೆ ದಯವಿಟ್ಟು ತಾವು ಗಮನಿಸಬೇಕು. ಮಾನ್ಯ ರಾಜೂಗೌಡರು ಈ ವ್ಯವಸಾಯದ ಬಗ್ಗೆ, ಇದರ ವ್ಯಾಪಾರದ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದಾರೆ. ಅವರು ಕೆಲವು ವಿಚಾರಗಳನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ನಾನು ಅದನ್ನು ಪುನರಾವರ್ತನೆ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ರೈತರಿಗೆ ಕೊಡತಕ್ಕ ರೇಷ್ಮೆ ಗೂಡಿನ ಬೆಲೆಯನ್ನು ಜಾಸ್ತಿ ಮಾಡಿರುತ್ತೀರಿ. ಒಂದು ವರ್ಷದ ಹಿಂದೆ ೧೫೦–೧೭೫ ಇದ್ದುದು ಇವತ್ತು ಪ್ರೈವೇಟ್ ಗ್ರೈನೇಜ್‌ಗಳಲ್ಲಿ ೨೫೦ ಆಗಿದೆ. ಪ್ರೈವೇಟ್ ಗ್ರೈನೇಜ್‌ಗಳಲ್ಲಿ ಬೆಲೆ ನಿಗದಿ ಮಾಡಿಲ್ಲ. ಅವರು ಎಕ್ಸ್‌ಪ್ಲಾಯಿಟ್ ಮಾಡುತ್ತಿದ್ದಾರೆ. ನೂರು ಮೊಟ್ಟೆಗೆ ೨೫೦–೨೭೫ ರೂ. ತೆಗೆದುಕೊಳ್ಳುತ್ತಿದ್ದಾರೆ. ನೂರು ಮೊಟ್ಟೆ ಮಾಡುವುದಕ್ಕೆ ಅವರಿಗೆ ೪೦–೫೦ ರೂಪಾಯಿ ಆಗುತ್ತದೆ. ೪೦–೫೦ ರೂಪಾಯಿ ಖರ್ಚು ಮಾಡಿ ೨೫೦–೨೭೫ಕ್ಕೆ ಮಾರಾಟ ಮಾಡುತ್ತಿದ್ದಾರೆ. ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ. ಸೀಡ್ ಏರಿಯಾ ಸಹಿತ ಸರಿಯಾಗಿಲ್ಲ. ಅನೇಕ ರೈತರು ಸೀಡ್ಸ್ ಬೆಳೆಯುವುದಕ್ಕೆ ಮುಂದೆ ಬರುತ್ತಿಲ್ಲ. ಏತಕ್ಕೆ ಬರುತ್ತಿಲ್ಲ ಎಂದು ತಾವು ಯೋಚನೆ ಮಾಡಬೇಕು. ನನಗೆ ತಿಳಿದುಬಂದ ಹಾಗೆ ಸೆಂಟ್ರಲ್ ಸಿಲ್ಕ್ ಬೋರ್ಡ್‌ನವರು ಸಹಿತ ಸೀಡ್ ಏರಿಯಾದಲ್ಲಿ ಕ್ರಾಪ್ ಇನ್‌ಷ್ಯೂರೆನ್ಸ್ ಸ್ಕೀಮ್ ಜಾರಿಗೆ ತೆಗೆದುಕೊಂಡು ಬರಬೇಕೆಂದು ಯೋಚನೆ ಮಾಡಿದ್ದಾರೆ. ಹೆಚ್ಚಿನ ಸಬ್ಸಿಡಿ ಕೊಡಬೇಕು. ಆಂಧ್ರ ಮತ್ತು ತಮಿಳುನಾಡಿನ ರೈತರು ಮೊಟ್ಟೆಗೋಸ್ಕರ ನಮ್ಮ ರಾಜ್ಯಕ್ಕೆ ಬಂದು ನಮ್ಮ ರೈತರಿಗೆ ಮೊಟ್ಟೆ ಸಿಗುತ್ತಿಲ್ಲ. ಬೆಂಗಳೂರಿಗೆ ಬಂದು ಒಂದು ವಾರಗಟ್ಟಲೆ ಕಾಯತಕ್ಕಂಥ ಕಾಲ ಬಂದಿದೆ. ರೇಷ್ಮೆ ಬಿತ್ತನೆ ಗೂಡು ಬೆಳೆಯುತಕ್ಕಂಥ ಕುಣಿಗಲ್, ಆನೇಕಲ್ ಮುಂತಾದ ೪–೫ ತಾಲ್ಲೂಕುಗಳ ರೈತರಿಗೆ ತಾವು ಪ್ರೊಟೆಕ್ಷನ್ ಕೊಡಬೇಕು. ಇಂತಹ ಕಾರ್ಯಕ್ರಮದ ಬಗ್ಗೆ ತಾವು ಯೋಚನೆ ಮಾಡಬೇಕು. ಸೀಡ್ ಏರಿಯಾದಲ್ಲಿ ಇನ್‌ಷ್ಯೂರೆನ್ಸ್ ಸ್ಕೀಮ್ ತಾವು ತೆಗೆದುಕೊಂಡು ಬರಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇವತ್ತು ಸರಕಾರಿ ಗ್ರೈನೇಜ್‌ಗಳಲ್ಲಿ ಕೊಡತಕ್ಕಂಥ ಮೊಟ್ಟೆ ಸಹಿತ ಒಳ್ಳೆಯ ಗುಣಮಟ್ಟದಲ್ಲಿದೆ ಎಂದು ನಾನು ತಿಳಿದುಕೊಂಡಿಲ್ಲ. ನಮ್ಮ ಸೆಂಟ್ರಲ್ ಸಿಲ್ಕ್ ಬೋರ್ಡ್ ಮತ್ತು ನಮ್ಮ ಎಂ. ವಿ. ರಾಜಶೇಖರನ್‌ರವರು ಇರತಕ್ಕಂಥ ಏಷಿಯನ್ ಇನ್‌ಸ್ಟಿಟ್ಯೂಟ್ ಆಫ್ ಸಿರಿಕಲ್ಚರ್‌ನವರು ಕೊಡತಕ್ಕಂಥ ಮೊಟ್ಟೆಗಳು ಒಳ್ಳೆಯ ಗುಣಮಟ್ಟದಲ್ಲಿರುತ್ತವೆ. ಉತ್ತಮವಾದಂಥ ಮೊಟ್ಟೆಗಳನ್ನು ಕೊಡುತ್ತಿದ್ದಾರೆ. ಫೈಲ್ಯೂರ್ ಆಗತಕ್ಕಂಥಾದ್ದು ಇಲ್ಲ. ನಮ್ಮ ಸರಕಾರಿ ಗ್ರೈನೇಜ್‌ಗಳಲ್ಲಿ ಏತಕ್ಕೆ ಇದು ಆಗುತ್ತಿಲ್ಲ. ದಯವಿಟ್ಟು ಇದನ್ನು ತಾವು ಯೋಚನೆ ಮಾಡಬೇಕು. ತಮ್ಮ ಇಲಾಖೆಯವರು ತಮ್ಮ ಬಾಯಲ್ಲಿ ಎರಡು ಸಾವಿರ ಚಾಕಿ ಕೇಂದ್ರಗಳು ಕೆಲಸ ಮಾಡುತ್ತಿವೆ ಎಂದು ಹೇಳಿಸಿದ್ದಾರೆ. ಈ ಬೇಡಿಕೆ ಪಾಸ್ ಆದ ಮೇಲೆ ತಾವು ೧೫೦೦ ಚಾಕಿ ಕೇಂದ್ರಗಳ ಪೈಕಿ ೫ಕ್ಕೆ ಹೋಗಿ ನೋಡಿ. ಅಲ್ಲೊಬ್ಬ ಡೆಮಾನ್‌ಸ್ಟ್ರೇಟರ್, ಇಬ್ಬರು ಅಟೆಂಡರ್ ಇರುವುದೇ ಇಲ್ಲ. ಅವರು ಹೋಗಿ ತಿಂಗಳುಗಟ್ಟಲೆ ಆಗಿರುತ್ತದೆ. ರೈತ ಮೊಟ್ಟೆಯನ್ನು ಗೌರ್ನಮೆಂಟ್ ಅಥವಾ ಪ್ರೈವೇಟ್ ಗ್ರೈನೇಜ್‌ಗಳಿಂದ ತೆಗೆದುಕೊಂಡು ಹೋಗಿ ತನ್ನ ಗುಡಿಸಲಿನಲ್ಲಿ ಮಾಡುವುದಕ್ಕೆ ಜಾಗ ಇಲ್ಲ ಎಂದು ಗೌರ್ನಮೆಂಟ್ ಚಾಕಿ ಕೇಂದ್ರದಲ್ಲಿ ಕೊಟ್ಟರೆ ಅವರು ಚಾಕಿ ಕಟ್ಟಬೇಕು. ಆದರೆ ಅವರು ಚಾಕಿ ಕಟ್ಟುತ್ತಿಲ್ಲ. ಬಹಳ ಕೆಲಸ ಚಾಕಿ ಕೇಂದ್ರಗಳಲ್ಲಿ ಮಾಡಬೇಕಾದುದು ಇದೆ. ದ್ರಾವಕ ಹಂಚಬೇಕು. ದ್ರಾವಕ ಎಂದರೆ ತಮಗೆ ತಿಳಿದಿದೆಯೋ ಇಲವೋ ಗೊತ್ತಿಲ್ಲ. ಅವರು ದ್ರಾವಕ ಕೊಡುವುದಿಲ್ಲ, ಅಂಗಡಿಗಳಿಗೆ ಮಾರುತ್ತಿದ್ದಾರೆ. ದ್ರಾವಕ ಸಿಗುವುದೇ ಕಷ್ಟವಾಗಿದೆ. ಅಂಗಡಿಗಳಿಗೆ ಮಾರಾಟ ಮಾಡಿಕೊಂಡು ಬಿಡುತ್ತಾರೆ. ಜೊತೆಗೆ ಚಾಕಿ ಕೇಂದ್ರಗಳಲ್ಲಿ ಚಾಕಿ ಕಟ್ಟುವುದಿಲ್ಲ. ಈ ಚಾಕಿಗೆ ಸೊಪ್ಪು ಬಹಳ ಸಣ್ಣದಾಗಿ ಕೊಯ್ಯಬೇಕು. ಚಾಕಿ ಕೇಂದ್ರಗಳಲ್ಲಿ ಒಂದು ಜ್ವರದಿಂದ ಎರಡು ಜ್ವರದವರೆಗೂ ಸಾಕಿ ಕೊಡಬೇಕು, ಆಮೇಲೆ ರೈತರು ಮೂರನೇ ಜ್ವರಕ್ಕೆ ತಮ್ಮ ಮನೆಗೆ ತೆಗೆದುಕೊಂಡು ಹೋಗಿ ೩–೪ ಜ್ವರದವರೆಗೂ ಮೇಯಿಸಿಕೊಳ್ಳುತ್ತಾರೆ.

ಶ್ರೀ ಸಿ. ಬೈರೇಗೌಡ.—ಚಾಕಿಗೆ ಸೊಪ್ಪು ಸಣ್ಣದಾಗಿ ಕೊಯ್ಯುವ ಕಾಲ ಹೋಯಿತು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾನು ಹೇಳುತ್ತೇನೆ. ಅದನ್ನು ನಾವು ಈಗ ಮಾಡಿಕೊಂಡಿರುವುದು. ಈ ೧೫೦೦ ಚಾಕಿ ಕೇಂದ್ರಗಳಲ್ಲಿ ೪ ಸಾವಿರ ಜನರು ಏನು ಮಾಡುತ್ತಾರೆ? ಇವರ ಮೇಲೆ ಎಕ್ಸ್‌ಟೆನ್‌ಷನ್ ಆಫೀಸರ್ಸ್ ಇದ್ದಾರೆ. ನಿಮ್ಮ ಕ್ಷೇತ್ರದಲ್ಲಿಯೇ ಒಬ್ಬ ಎಕ್ಸ್‌ಟೆನ್‌ಷನ್ ಅಧಿಕಾರಿ ಇದ್ದಾರೆ. ಅವರು ಎಷ್ಟು ಹೊತ್ತು ಅಮಲಿನಿಂದ ಹೊರಗಿರುತ್ತಾರೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಿ. ಅವರು ನಿಮ್ಮ ಕ್ಷೇತ್ರದಲ್ಲಿಯೇ ಇದ್ದಾರೆ. ಇನ್ನು ರೈತರಿಗೆ ಪಾಲಿಥಿನ್ ಪೇಪರ್ ಕೊಡುವುದಕ್ಕೆ ನಿಮ್ಮ ಕೈಯಲ್ಲಿ ಆಗುತ್ತಿಲ್ಲ. ರೈತರು ಮನೆಗಳಲ್ಲಿ ಇಟ್ಟುಕೊಂಡು ಹುಳ ಮೇಯಿಸಬೇಕಾದರೆ ಅವರಿಗೆ ಮುಖ್ಯವಾಗಿ ಪಾಲಿಥಿನ್ ಪೇಪರ್ ಬೇಕಾಗುತ್ತದೆ. ಇತ್ತೀಚೆಗೆ ಈ ಪಾಲಿಥಿನ್ ಪೇಪರ್ ಮಾಯವಾಗಿಬಿಟ್ಟಿದೆ. ಏತಕ್ಕೆ ಈ ರೀತಿ ಆಯಿತೋ ಗೊತ್ತಿಲ್ಲ. ಕಳೆದ ೫–೬ ತಿಂಗಳುಗಳಿಂದ

ರೇಷ್ಮೆ ಇಲಾಖೆಯಲ್ಲಿ ಈ ಬಗ್ಗೆ ಏನಾದರೂ ಸೀರಿಯಸ್ ಆಗಿ ನಿಮ್ಮ ಡೈರೆಕ್ಟರ್ ಮತ್ತು ಉಳಿದ ಅಧಿಕಾರಿಗಳು ಕುಳಿತುಕೊಂಡು ಯೋಚನೆ ಮಾಡಿದ್ದಾರೆಯೋ? ನಿಮ್ಮ ಇಲಾಖಾ ಕಾರ್ಯದರ್ಶಿ ಮತ್ತು ನಿಮ್ಮ ರೇಷ್ಮೆ ಇಲಾಖೆ ಡೈರೆಕ್ಟರ್ ಏನಾದರೂ ಈ ಬಗ್ಗೆ ಯೋಚನೆ ಮಾಡಿದ್ದಾರೆಯೋ? ಒಂದು ವೇಳೆ ನಿಮ್ಮ ಇಲಾಖೆ ಡೈರೆಕ್ಟರ್ ಎಲ್ಲಿಗಾದರೂ ಭೇಟಿ ಕೊಡುತ್ತೇನೆಂದು ಹೇಳುವಷ್ಟರಲ್ಲಿ ಅಲ್ಲಿ ಎಲ್ಲಾ ಸರಿ ಮಾಡಿ ಇಟ್ಟಿರುತ್ತಾರೆ, ಅಲ್ಲಿ ಒಬ್ಬ ನಾಲ್ಕು ಜನ ಅವರ ಏಜೆಂಟ್ಸ್ ಇರುತ್ತಾರೆ. ಅವರು ರೇಷ್ಮೆ ಬಟ್ಟೆ ಹಾಕಿಕೊಂಡು ಇರುತ್ತಾರೆ. ಅವರು ಹೇಳಿಬಿಡುತ್ತಾರೆ. ಇಲ್ಲಿ ಎಲ್ಲಾ ಚೆನ್ನಾಗಿದೆ ಎಂದು. ಆದರೆ ಯಾರು ರೇಷ್ಮೆ ಬಟ್ಟೆ ಹಾಕಿಕೊಂಡು ಇರುತ್ತಾರೋ ಅವರು ರೇಷ್ಮೆ ಬೆಳೆಯುವವರು ಅಲ್ಲ. ಅಲ್ಲಿ ಆ ಏಜೆಂಟರು ಹೇಳಿಬಿಡುತ್ತಾರೆ ಇಲ್ಲಿ ಎಲ್ಲಾ ಸರಿಯಾಗಿದೆ. ಇಲ್ಲಿ ದ್ರಾವಕ ಸರಿಯಾಗಿ ಹಂಚುತ್ತಾರೆ ಮತ್ತು ಪಾಲಿಥಿನ್ ಪೇಪರ್ ಸರಿಯಾಗಿ ಹಂಚಿದ್ದಾರೆ ಎಂದು. ಇಲ್ಲಿ ತಾವು ತಮ್ಮ ವರದಿಯಲ್ಲಿ ೫ ಲಕ್ಷ ಮೊಟ್ಟೆಗಳನ್ನು ನಾವು ಚಾಕಿ ಕಟ್ಟಿದ್ದೇವೆಂದು ಹೇಳಿದ್ದೀರಿ ಚಾಕಿ ಕೇಂದ್ರಗಳಲ್ಲಿ ನಿಜವಾಗಿ ಇಷ್ಟು ಮೊಟ್ಟೆಯನ್ನು ಚಾಕಿ ಮಾಡಿದ್ದಾರೆಯೋ ಎನ್ನುವ ಅಂಕಿ ಅಂಶಗಳ ಬಗ್ಗೆ ತಾವು ತೀವ್ರವಾಗಿ ಯೋಚನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಊಜಿ ನೊಣಗಳ ಕಾಟದಿಂದ ರೈತರು ನಿಜವಾಗಿಯೂ ಬಹಳ ತೊಂದರೆ ಪಡುತ್ತಿದ್ದಾರೆ. ಆದರೆ ಇದನ್ನು ನಮ್ಮ ಕೈಯಲ್ಲಿ ಅಥವಾ ನಿಮ್ಮ ಕೈಯಲ್ಲಿ ಇಲ್ಲಿ ಭಾಷಣ ಮಾಡುವುದರಿಂದ ತಡೆಗಟ್ಟುವುದಕ್ಕೆ ಆಗುವುದಿಲ್ಲ. ಇದಕ್ಕೆ ಒಂದು ಮಾಡಬಹುದು ಈ ಊಜಿ ನೊಣಗಳು ಸೊಪ್ಪು ಮುಖಾಂತರ ಹಾದುಹೋಗುತ್ತವೆ. ಮತ್ತೆ ಸೊಪ್ಪು ಹಾಕುವಾಗ ಹಾದುಹೋಗುತ್ತವೆ; ಇದಕ್ಕೆ ಒಂದು ಪರದೆ ಇದೆ. ಒಂದು ಮೀಟರ್ ಬೆಲೆ ೧-೭೫ ಪೈಸೆಗೆ ಮಾರಾಟ ಮಾಡುತ್ತಿದ್ದರು, ಆದರೆ ಈಗ ಆ ಪರದೆ ಬಟ್ಟೆ ಮಾರಾಟ ಮಾಡುತ್ತಲೆ ಇಲ್ಲ. ಅದು ಬೇರೆ ಕಡೆ ಒಂದು ಮೀಟರ್‌ಗೆ ೪-೫೦ ಪೈಸೆ ಆಗುತ್ತದೆ. ಆದರೂ ಕೆಲವೊಂದು ಸಾರಿ ಪರದೆ ಬಟ್ಟೆ ಸಿಗುವುದೇ ಇಲ್ಲ. ಇವತ್ತು ಏನಾಗುತ್ತಿದೆ ಎಂದರೆ, ಗುಡಿಸಲುಗಳಲ್ಲಿ ವಾಸ ಮಾಡುತ್ತಿರುವವರು ನೆಲಕ್ಕೆ ಸಿಮೆಂಟ್ ಹಾಕಿಸಿರುವುದಿಲ್ಲ. ಸಿಮೆಂಟ್ ನೆಲ ಇಲ್ಲದೆ ಇರುವಂತಹವರು ಈ ಪರದೆ ಬಟ್ಟೆಯನ್ನು ಉಪಯೋಗ ಮಾಡುತ್ತಾರೆ. ಇದರಿಂದ ನೂರಕ್ಕೆ ಐವತ್ತು ಭಾಗದಷ್ಟು ಊಜಿ ನೊಣ ಕಾಟ ತಡೆಗಟ್ಟಬಹುದು ಇಂತಹ ಪರಿಸ್ಥಿತಿಯಲ್ಲಿ ಚಾಕಿ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವ ನೌಕರರು ಮೊಟ್ಟೆಗಳನ್ನು ರೈತರಿಂದ ಪಡೆದು ಚಾಕಿ ಕಟ್ಟಿ ಕೊಡುತ್ತಾರೋ ಇಲ್ಲವೋ ಎನ್ನುವುದನ್ನು ಅಲ್ಲಿರುವ ಎಕ್ಸ್‌ಟೆನ್‌ಷನ್ ಆಫೀಸರ್ ನೋಡುವುದಿಲ್ಲ, ಇನ್ನು ರೈತರೇ ಕಷ್ಟಪಟ್ಟು ಗೂಡು ಬೆಳೆದು ಆ ಗೂಡನ್ನು ಮಾರುಕಟ್ಟೆಗೆ ತೆಗೆದುಕೊಂಡು ಬಂದರೆ ಅಲ್ಲಿ ವ್ಯಾಪಾರ ಮಾಡತಕ್ಕಂಥ ಜನ ಕಣ್ಣು ಸನ್ನೆ ಮೂಲಕವೇ ಕೆಲಸ ಮಾಡುತ್ತಾರೆ. ಇಲ್ಲಿಯೇ ನಿಮ್ಮ ಮೇಲೆ ಸ್ವಲ್ಪ ಒತ್ತಡ ಬರತಕ್ಕಂಥಾದ್ದು. ಇಂತಹವರನ್ನು ಇಂತಹ ಕಡೆ ಹಾಕಬೇಕೆಂದು ಒತ್ತಡ ಮಾಡಿಸಿ ಅವರಿಗೆ ಬೇಕಾದವರನ್ನು ಬೇಕಾದ ಮಾರ್ಕೆಟ್‌ಗಳಿಗೆ ಹಾಕಿಸಿಕೊಂಡು ಹೋಗುತ್ತಾರೆ. ಅಲ್ಲಿ ಎಲ್ಲಾ ವ್ಯವಹಾರಗಳು ಕಣ್ಣು ಸನ್ನೆ ಮೂಲಕವೇ ಆಗುತ್ತದೆ. ಅಲ್ಲಿ ಕ್ವಾಲಿಟಿ ಗೂಡಿಗೆ ಸರಿಯಾದ ಬೆಲೆ ಕೊಡುವುದಿಲ್ಲ. ರೈತರಿಗೆ ಮೋಸ ಮಾಡುತ್ತಾರೆ. ಇದು ರೈತನಿಗೆ ಗೊತ್ತಾಗುವುದಿಲ್ಲ. ಈ ರೇಷ್ಮೆ ಇಲಾಖೆಯಲ್ಲಿ ಒಂದು ಸಿಸ್ಟಂ ಅನ್ನು ಮಾಡಿ ಒಂದು ಅಧಿಕಾರದಲ್ಲಿ ಇದ್ದಂತಹ ಮಂತ್ರಿಗಳಿಗೆ ಹೇಳುತ್ತಿದ್ದೆ, ಮಂತ್ರಿಗಳಾಗಲಿ ಅಥವಾ ಅಧಿಕಾರಿಗಳು ಆಗಲಿ ಕೆಲವು ಸಂದರ್ಭಗಳಲ್ಲಿ ರೇಷ್ಮೆ ಗೂಡು ಮಾರುಕಟ್ಟೆಗಳಿಗೆ ಹೋಗಿ ಕುಳಿತುಕೊಂಡು ನೋಡಿದರೆ ಎಷ್ಟು ಮಾರಾಟ ಆಗುತ್ತಿದೆ ಏನು ನಡೆಯುತ್ತಿದೆ ಎನ್ನುವುದು ಗೊತ್ತಾಗುತ್ತದೆ. ಅಬ್ಬಬ್ಬ ಅಂದ್ರೆ ಒಂದು ೬೦ ಮಾರುಕಟ್ಟೆಗಳು ಇರಬಹುದು. ತಾವು ಏತಕ್ಕೆ ಹೋಗಿ ನೋಡಬಾರದು? ಅಲ್ಲಿ ಇರತಕ್ಕಂಥ ರೀಲರ್ಸ್‌ಗೆ ಮತ್ತು ಮಾರುಕಟ್ಟೆ ಅಧಿಕಾರಿಗಳಿಗೆ ಒಂದು ಅಂಡರ್‌ಸ್ಟ್ಯಾಂಡಿಂಗ್ ಇರುತ್ತದೆ. ರೀಲರ್ಸ್ ಕಣ್ಣು ಸನ್ನೆ ಮೂಲಕವೇ ನೂರು ರೂಪಾಯಿ ಬೆಲೆ ಬಾಳತಕ್ಕಂಥ ಗೂಡನ್ನು ೬೦ ರೂಪಾಯಿಗೆ ಕೊಟ್ಟರೆ ಅಷ್ಟಕ್ಕೇ ತೆಗೆದುಕೊಂಡು ಹೋಗುತ್ತಾರೆ. ಗೂಡುಗಳ ಗುಣಮಟ್ಟ ನಿರ್ಧಾರ ಮಾಡತಕ್ಕಂಥವರು ಮಾರುಕಟ್ಟೆ ಅಧಿಕಾರಿಗಳು. ಅವರು ಏನು ಮಾಡುತ್ತಾರೆ ಎಂದರೆ ಒಂದು ಸಾರಿ ಎರಡು ಸಾರಿ ಮೂರು ಸಾರಿ ಎಂದು ಹೇಳಿ ಗೂಡು ಆಕ್ಷನ್ ಮುಗಿಸಿಬಿಡುತ್ತಾರೆ. ಯಾರಿಗೂ ಗೊತ್ತಾಗುವುದೇ ಇಲ್ಲ. ಮತ್ತೆ ರೀಲರ್ಸ್ ದುಡ್ಡು ಕೊಡಬೇಕಾದರೂ ಅಷ್ಟೇ, ತುಂಬಾ ಸತಾಯಿಸುತ್ತಾರೆ. ರೀಲರ್ಸ್ ಆಕ್ಷನ್ ಮಾಡುವ ಮುನ್ನವೇ ಮಾರುಕಟ್ಟೆಯಲ್ಲಿ ಹಣ ಅಡ್ವಾನ್ಸ್ ತಂದು ಇಟ್ಟು ಅವರು ಆಕ್ಷನ್‌ನಲ್ಲಿ ಭಾಗವಹಿಸಬೇಕು. ಆದರೆ ದುಡ್ಡು ತಂದಿಡುವುದೇ ಇಲ್ಲ. ಆಕ್ಷನ್ ಆದಮೇಲೆ ರೀಲರ್ಸ್ ದುಡ್ಡು ತಂದು ಕೊಡುವ ವರೆಗೂ ರೈತ ಕಾಯಬೇಕು. ೧೨ ಗಂಟೆ ಆದರೂ ಆಗಬಹುದು, [illegible] ಗಂಟೆ ಆದರೂ ಆಗಬಹುದು ಆದ್ದರಿಂದ ದಯಮಾಡಿ ರೀಲರ್ಸ್ ಮತ್ತು ನಿಮ್ಮ ಸಿಲ್ಕ್ ಮಾರ್ಕೆಟ್‌ಗಳಲ್ಲಿರತಕ್ಕ ಅಧಿಕಾರಿಗಳು ಮಧ್ಯೆ ಇರತಕ್ಕಂಥ ಒಂದು ಅಂಡರ್‌ಸ್ಟ್ಯಾಂಡಿಂಗ್ಸ್ ಅನ್ನು [illegible] ವು ಬ್ರೇಕ್ ಮಾಡಬೇಕು. ತಾವು

ಪ್ರಯತ್ನ ಮಾಡಿ ಆಗುತ್ತದೆ. ಇದಕ್ಕೆ ಪ್ರಾಮಾಣಿಕ ಪ್ರಯತ್ನ ಬೇಕು, ಯಾವುದೇ ಒತ್ತಾಯಕ್ಕೆ ನೀವು ಜಗ್ಗಬೇಡಿ, ಆಗ ಎಲ್ಲಾ ಸರಿ ಹೋಗುತ್ತದೆ.

ಈ ರೀತಿ ರೈತರುಗಳಿಗೆ ಆಗುತ್ತಿರುವ ಅನ್ಯಾಯವನ್ನು ತಡೆಗಟ್ಟಲಿಕ್ಕೆ ತಾವು ಪ್ರಾಮಾಣಿಕ ಪ್ರಯತ್ನ ಮಾಡಿ. ಇದು ಸಾಧ್ಯ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಇದು ಸಾಧ್ಯವಿಲ್ಲವೆಂದು ನಾನು ತಿಳಿದುಕೊಂಡಿಲ್ಲ. ಒಂದು ಮಾತನ್ನು ನಾನು ಹೇಳುತ್ತೇನೆ, ನಮ್ಮ ಪಕ್ಷಕ್ಕೂ ನಿಮಗೂ ರಾಜಕೀಯದಲ್ಲಿ ಆಕಾಶ ಭೂಮಿಯಷ್ಟು ವ್ಯತ್ಯಾಸ ಇದ್ದರೂ ಸಹಿತ ಮಾನ್ಯ ವೈ. ಕೆ. ರಾಮಯ್ಯನವರು ಇದರಲ್ಲಿ ಸ್ವಲ್ಪ ಉತ್ತಮ ಕೆಲಸ ಮಾಡಿದ್ದಾರೆ. ಇಲ್ಲಿ ಸ್ವಲ್ಪ ಬಿಗಿ ತಂದಿದ್ದರು, ರಾಮಯ್ಯನವರು, ಹೋಗುತ್ತಾರೆಂದರೆ, ಸಿಲ್ಕ್ ಎಕ್ಸ್‌ಚೇಂಜ್‌ಗಳಲ್ಲಿ, ಮಾರುಕಟ್ಟೆಗಳಲ್ಲಿ, ಚಾಕಿ ಕೇಂದ್ರಗಳಲ್ಲಿ ಬಿಗಿ ಇರುತ್ತಿತ್ತು ಆದರೆ ಈಗ ಏನಾಗಿದೆಯೋ ನನಗಂತೂ ಅರ್ಥವಾಗುತ್ತಿಲ್ಲ. ಈಗಂತೂ ರೈತರುಗಳಿಗೆ ಬಹಳ ತೊಂದರೆ ಯಾಗುತ್ತಿದೆ. ರೈತರುಗಳಿಗೆ ಬೋನಸ್ ಕೊಡುತ್ತೇವೆಂದು ಹೇಳಿದ್ದರು. ಆದರೆ ಅವರು ಬಿಟ್ಟು ಹೋದರು. ಈಗಲಾದರೂ ಬೋನಸ್ ಕೊಡುವುದಕ್ಕೆ ತಾವು ಪ್ರಯತ್ನ ಮಾಡಿ. ಈ ಕೆ.ಎಸ್.ಐ.ಸಿ. ಇದೆಯಲ್ಲಾ, ಈ ಕೆ.ಎಸ್.ಐ.ಸಿ. ಬಗ್ಗೆ ಮಾನ್ಯ ರಾಜೂಗೌಡರು ಸಾಕಷ್ಟು ಹೇಳಿದರು ಇಲ್ಲಿ ೫-೬ ಕೋಟಿ ಲುಕ್ಸಾನಾಗಿದೆಯೆಂದು ಹೇಳಿದರು. ಕೆ.ಎಸ್.ಐ.ಸಿ. ಅಲ್ಲದೆ ಈ ಸಿಲ್ಕ್ ಫಿಲೇಚರ್‌ಗಳಲ್ಲಿ ಸಹ ಬಹಳ ನಷ್ಟವಾಗುತ್ತಿದೆ. ಮಾಂಬಳ್ಳಿ, ಸಂತೆಪಾರ್ಣಹಳ್ಳಿ, ಮುಂಡಿಗೊಂಡಂ ಚಾಮರಾಜನಗರ, ಕೊಳ್ಳೆಗಾಲ ರಾಮನಗರ ನುಂತಾದ ೭-೮ ಕಡೆ ಸಿಲ್ಕ್ ಫಿಲೇಚರ್‌ಗಳು ಇವೆ. ೧೯೮೮-೮೯ರಲ್ಲಿ ೬೬ ಲಕ್ಷ ಲುಕ್ಸಾನಾಗಿತ್ತು ಆದರ ಹಿಂದಿನ ವರ್ಷ ೫೭ ಲಕ್ಷ ರೂಪಾಯಿ ಲುಕ್ಸಾನು. ಹೋದ ವರ್ಷ ೨೫ ಲಕ್ಷ ರೂಪಾಯಿ ಲುಕ್ಸಾನು' ಈ ವರ್ಷ ೩೪ ಲಕ್ಷ ರೂಪಾಯಿ ಲುಕ್ಸಾನು, ಪ್ರತಿ ವರ್ಷವೂ ಲುಕ್ಸಾನು ಏಕೆ ಹೆಚ್ಚಾಗುತ್ತಿದೆ. ಕಳೆದ ೬ ತಿಂಗಳಿನಿಂದ ನೀವು ಆಡಳಿತದಲ್ಲಿ ಇದ್ದರೆ ಅದಕ್ಕೂ ಮೊದಲ ೬ ತಿಂಗಳು ರಾಜ್ಯಪಾಲರ ಆಡಳಿತ ಇತ್ತು. ಆಗ ಯಾವ ಇಂಟರ್ ಫಿಯರೆನ್ಸ್ ಇರಲಿಲ್ಲವೆ ಆಗ ಇದನ್ನು ಏಕೆ ಸರಿ ಮಾಡುವುದಕ್ಕಾಗಲಿಲ್ಲ ? ಅಲ್ಲಿರುವ ಅಧಿಕಾರಿಗಳ ಜುಟ್ಟನ್ನು ಹಿಡಿಯಿರಿ, ಎಲ್ಲಾ ಸರಿಹೋಗುತ್ತದೆ, ಅದನ್ನು ಮಾಡುವುದಕ್ಕಾಗದಿದ್ದರೆ ನೀವು ಯಶಸ್ಸಿನ ಹತ್ತಿರ ಹೋಗಲಿಕ್ಕಾಗುವುದಿಲ್ಲವೆಂದು ನಾನು ತಿಳಿದುಕೊಳ್ಳುತ್ತೇನೆ. ಇನ್ನು ಸಿಲ್ಕ್ ಎಕ್ಸ್‌ಚೇಂಜ್ ಬಗ್ಗೆ ಹೇಳಬೇಕೆಂದರೆ ತಾವು ದಯಮಾಡಿ ಕ್ಷಮಿಸಬೇಕು, ನಮ್ಮ ಅರ್ಥ ಮಂತ್ರಿಗಳೂ ಸಹಿತ ರೇಷ್ಮೆ ವ್ಯವಹಾರವನ್ನು ಮಾಡುತ್ತಿದ್ದವರು. ದುರ್ವ್ಯವಹಾರ ಎಂದು ನಾನು ಹೇಳುತ್ತಿಲ್ಲ ಅವರಿಗೆ ಏಕೆ ಈ ದುರ್ಬುದ್ಧಿ ಬಂದಿದೆಯೋ ನನಗೆ ಅರ್ಥವಾಗುತ್ತಿಲ್ಲ, ನಿಮಗೆ ಹೇಳುತ್ತೇನೆ ಇಡೀ ರಾಷ್ಟ್ರದಲ್ಲಿ ನಾವು ರೇಷ್ಮೆ ಉದ್ಯಮದಲ್ಲಿ ಮೊದಲನೇ ಸ್ಥಾನ ಪಡೆದಿದ್ದೆವು. ಅದಕ್ಕೆ ಕರಾಳತನವನ್ನು ಪಡೆಯತಕ್ಕಂಥ ಒಂದು ಶಾಸನವನ್ನು, ಒಂದು ನೀತಿಯನ್ನು ಕರ್ನಾಟಕ ಸರ್ಕಾರದಲ್ಲಿ ಈಗ ತೆಗೆದುಕೊಂಡು ಬರಲಾಗಿದೆ ಈ ರೇಷ್ಮೆ ಕೈಗಾರಿಕೆಯನ್ನು 'ನಿರ್ನಾಮ ಮಾಡತಕ್ಕಂಥ ಒಂದು ಯೋಜನೆಯನ್ನು ಒಂದು ಕಾರ್ಯಕ್ರಮವನ್ನು ತೆಗೆದುಕೊಂಡು ಬಂದು ೨ ಪರ್ಸೆಂಟ್ ಟ್ಯಾಕ್ಸನ್ನು ಇವರು ಹೆಚ್ಚು ಮಾಡಿದ್ದಾರೆ. ಸಿಲ್ಕ್ ಎಕ್ಸ್‌ಚೇಂಜ್ ಇವತ್ತು ಬೋಗಸ್ ಎಕ್ಸ್‌ಚೇಂಜ್ ಆಗಿದೆ. ಸಿಲ್ಕ್ ಎಕ್ಸ್‌ಚೇಂಜ್‌ನಲ್ಲಿ ಇವತ್ತು ವ್ಯಾಪಾರವಾಗುತ್ತಿಲ್ಲ. ಇವತ್ತು ಇದನ್ನು ತಮಿಳುನಾಡಿನವರು, ಆಂಧ್ರಪ್ರದೇಶ ದವರು, ಉತ್ತರ ಪ್ರದೇಶದವರು ಉಪಯೋಗಿಸಿಕೊಂಡಿದ್ದಾರೆ. ಈ ರೀತಿ ಮಾಡಿರುವುದು ನಮಗೆ ಬಹಳ ದುಃಖವಾಯಿತು. ಜನ ನಿಮಗೆ ಓಟು ಕೊಟ್ಟಿದ್ದಾರೆ, ನೀವು ೧೮೦ ಜನ ಶಾಸಕರಿದ್ದೀರಿ, ಇಂಥಾ ಸಂದರ್ಭದಲ್ಲಿ ಒಳ್ಳೆಯ ಕೆಲಸವನ್ನು ಮಾಡದೇ ಇನ್ನು ಯಾವಾಗ ಮಾಡುತ್ತೀರಿ ? ಇವತ್ತು ಅರ್ಥ ಮಂತ್ರಿಗಳು ಹಣ ಸೋರಿಹೋಗುತ್ತಿದೆ. ಅದನ್ನು ಸರಿ ಮಾಡುತ್ತೇನೆ ಎನ್ನುವ ಉತ್ಸಾಹದಲ್ಲಿ ಈ ಟರ್ನ್‌ಓವರ್ ಟ್ಯಾಕ್ಸ್‌ನ್ನು ಹಾಕಿದ್ದೀರಿ. ನಿಮ್ಮ ಟ್ಯಾಕ್ಸೇಷನ್ ಪಾಲಿಸಿ ಏನಿದೆ, ಈ ಟ್ಯಾಕ್ಸೇಷನ್ ಪಾಲಿಸಿಯಿಂದ ಇಡೀ ರೇಷ್ಮೆ ಉದ್ಯಮವನ್ನು ಕರ್ನಾಟಕದಲ್ಲಿ ಹಾಳು ಮಾಡುವುದಕ್ಕೆ ಕಾರಣವಾಗಿದೆ. ನೀವು ಇದನ್ನು ಸರಿ ಮಾಡಲಿಕ್ಕೆ ಇನ್ನೂ ೧೫—೨೦ ವರ್ಷಗಳಾದರೂ ಸಾಧ್ಯವಿಲ್ಲವೆಂದು ಈ ಸಂದರ್ಭ ದಲ್ಲಿ ಹೇಳಬಯಸುತ್ತೇನೆ. ಕರಪ್ಷನ್ ಇರತಕ್ಕಂದ್ದು ಕೆ. ಎಸ್. ಎಂ. ಬಿ. ಯಲ್ಲಿ, ಕರಪ್ಷನ್ ಇರತಕ್ಕಂತದ್ದು ಕೆ. ಎಸ್. ಐ. ಸಿ.ನಲ್ಲಿ. ಕರಪ್ಷನ್ ಇರತಕ್ಕಂತದ್ದು ಸಿಲ್ಕ್ ಎಕ್ಸ್‌ಚೇಂಜ್‌ನಲ್ಲಿ ನಿಮ್ಮ ಟ್ಯಾಕ್ಸೇಷನ್‌ನಲ್ಲಿ ಅಲ್ಲ. ಏನು ಮಾಡಿದ್ದಾರೆ ಇವರು ? ಕೆ. ಎಸ್. ಎಂ. ಬಿ. ನಲ್ಲಿ ಏನು ರೇಷ್ಮೆ ಬರುತ್ತದೋ ಇದನ್ನು ಮಾನ್ಯ ರಾಜೂಗೌಡರು ೧೨ ಪರ್ಸೆಂಟ್ ಎಂದು ಹೇಳಿದರು. ಇನ್ನು ಉಳಿದದ್ದು ಎಲ್ಲಿ ಹೋಗುತ್ತದೆ ? ಎಕ್ಸ್‌ಚೇಂಜ್‌ಗೆ ಬರತಕ್ಕಂಥ ರೇಷ್ಮೆ ಎಲ್ಲಿಗೆ ಹೋಗುತ್ತದೆ ? ನೌಕರರು ನಿಮಗೆ ಶಾಪ ಹಾಕುತ್ತಿದ್ದಾರೆ. ನಾನು ನೌಕರರ ಪರವಾಗಿ ಯಾವುದೋ ಲಾಬಿ ಪರವಾಗಿ ಮಾತನಾಡುತ್ತಿದ್ದೇನೆಂದು ದಯಮಾಡಿ ಆ ಹಣೆಪಟ್ಟಿಯನ್ನು ಕಟ್ಟಲಿಕ್ಕೆ ಬರಬೇಡಿ. ಈ ಎಕ್ಸ್‌ಚೇಂಜ್‌ನಲ್ಲಿ ಇರತಕ್ಕಂಥ ಅಧಿಕಾರಿಗಳು ಲೂಟಿ ಮಾಡುತ್ತಿದ್ದಾರೆ. ಈ

ಎಕ್‌ಚೇಂಜ್‌ಗೆ ಅಧಿಕಾರಿಯಾಗಿದ್ದ ಜಯರಾಜ್ ಎನ್ನುವವರು ಇದ್ದಾಗ ಸ್ವಲ್ಪ ಬಿಗಿ ಇತ್ತು. ಇವತ್ತು ಏಕೆ ಬಿಗಿ ಇಲ್ಲ ? ಅಲ್ಲಿರತಕ್ಕ ಅಧಿಕಾರಿಗಳು ಜಾತಿ ಹೆಸರು ತೆಗೆದುಕೊಂಡು ಬರುತ್ತಾರೆ. ಆತ್ಮಾನಂದ ರವರೇ ನಾವೂ ನಿಮ್ಮ ಜಾತಿಯವರೇ ಎಂದು ಹೇಳಿ ಬರುತ್ತಾರೆ. ಯಾರು ಅಧಿಕಾರದಲ್ಲಿರುತ್ತಾರೆ. ಅವರ ಹತ್ತಿರ ಬಂದು ನಾವು ನಿಮ್ಮ ಜಾತಿಯವರು ಎಂದು ಹೇಳಿಕೊಳ್ಳುತ್ತಾರೆ. ಅವರೆಲ್ಲರೂ ದುಡ್ಡು ಹೊಡೆಯುವ, ಲೂಟಿ ಮಾಡುವ ಜಾತಿಗೆ ಮಾತ್ರ ಸೇರಿದವರು. ಅವರನ್ನು ಮಟ್ಟ ಹಾಕಿದರೆ ಎಲ್ಲವನ್ನೂ ಕೂಡ ಸರಿಮಾಡಬಹುದು. ಕೆ. ಎಸ್. ಐ. ಸಿ. ಯನ್ನು ಕೂಡ ಸರಿ ಮಾಡಬಹುದು. ಒಂದು ವೇಳೆ ೨—೩ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಆದಾಯವನ್ನು ಪಡೆಯಬೇಕೆಂದು ಮಾನ್ಯ ಆರ್ಥಿಕ ಸಚಿವರಿಗೆ ಮನಸ್ಸು ಇದ್ದರೆ ಅವರಿಗೆ ಇದರಲ್ಲಿ ೪೦ಕೋಟಿ ರೂಪಾಯಿಗಳ ಆದಾಯವನ್ನು ಕೂಡ ಹೆಚ್ಚಿಗೆ ಪಡೆಯಬಹುದು. ಇದರಲ್ಲಿ ನೀವು ಫ್ರೀ ಮಾರ್ಕೆಟ್ ಪದ್ಧತಿಯನ್ನು ತೆಗೆದುಕೊಂಡು ಬನ್ನಿ. ನನಗೆ ಗೊತ್ತಿದೆ, ನೀವುಗಳು ಫ್ರೀಮಾರ್ಕೆಟ್‌ನ್ನು ಜಾರಿಗೆ ತರುವುದಿಲ್ಲ ನಿಮಗೆ ಯಾರೋ ನಾಲ್ಕು ಜನ ಅಧಿಕಾರಿಗಳು ತಪ್ಪು ಮಾರ್ಗದರ್ಶನ ನೀಡುತ್ತಾರೆ. ಅವರು ಅದರಿಂದ ಲಾಭವನ್ನು ಪಡೆಯುತ್ತಾರೆ. ಹೀಗಾಗಿ ಇವೊತ್ತು ಯಾರೂ ಉದ್ಯಮಕ್ಕೆ ಸಂಬಂಧಪಟ್ಟವರು ಸಮಾಧಾನದಿಂದ ಇಲ್ಲ. ರೀಲರ್ಸ್‌ಗಳು ಸಮಾಧಾನದಿಂದ ಇಲ್ಲ ಅವರಿಗೆ ಕಾರ್ಮಿಕ ಇಲಾಖೆಯವರು ಒಂದು ಕಡೆಯಿಂದ ತೊಂದರೆ ಕೊಡುತ್ತಾ ಇದ್ದಾರೆ. ವೀವರ್ಸ್ ಹ್ಯಾಪಿಯಾಗಿ ಇಲ್ಲ, ರೀಲರ್ಸ್ ಹ್ಯಾಪಿಯಾಗಿ ಇಲ್ಲ. ರೈತರು ಹ್ಯಾಪಿಯಾಗಿ ಇಲ್ಲ. ಹಾಗಾದರೆ ಇದನ್ನೆಲ್ಲಾ ಏತಕ್ಕಾಗಿ ಯಾರಿಗಾಗಿ ಮಾಡುತ್ತಿದ್ದೀರಿ ? ಏತಕ್ಕಾಗಿ ಇಂಡಸ್ಟ್ರೀಯನ್ನು ಹಾಳು ಮಾಡುತ್ತಿದ್ದೀರಿ ? ಇದು ನಿಮಗೆ ಅರ್ಥವಾಗುತ್ತಾ ಇಲ್ಲವೆ ? ರೀಲರ್ಸ್‌ಗಳಿಗೆ ಒಂದು ಕಾರ್ಡ್ ಕೊಡಿ. ಅವನು ಮಾರ್ಕೆಟ್‌ನಿಂದ ಎಷ್ಟು ಕಕೂನ್ ಪರ್ಚೇಸ್ ಮಾಡುತ್ತಾನೆ. ಅದಕ್ಕೆ ಸಮನಾದ ರೇಷ್ಮೆ ಯನ್ನು ಅವನು ಸಿಲ್ಕ್ ಎಕ್ಸ್‌ಚೇಂಜ್‌ಗೆ ತಂದು ಕೊಡಬೇಕು. ಸಿಲ್ಕ್ ಎಕ್ಸ್‌ಚೇಂಜ್‌ನಿಂದ ಅದನ್ನು ಪತ್ತೆ ಮಾಡಬಹುದು. ಅದೇ ತರಹದಲ್ಲಿ ವೀವರ್ಸ್ ಯಾರಿದ್ದಾರೆ. ಅವರಿಗೆ ಒಂದು ಮಾರ್ಕೆಟ್‌ನ್ನು ಮಾಡಿ. ನೇಕಾರರಿಗೆ ಅನ್ಯಾಯ ಏನು ಆಗುತ್ತಿದೆ ಅದನ್ನು ತಪ್ಪಿಸ ಬೇಕಾದರೆ ಅವರಿಗೆ ಒಂದು ಬೋರ್ಡ್ ಮಾಡಿ. ಅವರಿಗಾಗಿ ಏತಕ್ಕೆ ಒಂದು ಬೋರ್ಡ್ ಮಾಡುವ ಮನಸ್ಸು ಮಾಡಬಾರದು. ದಯಮಾಡಿ ತಾವುಗಳು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು ಇವೊತ್ತು ಸರ್ಕಾರದ ಟ್ಯಾಕ್ಸೇಶನ್ ನೀತಿಯು ಸರಿ ಯಾಗಿಲ್ಲ. ಇದು ನಿಜಕ್ಕೂ ನಮ್ಮ ರಾಜ್ಯದ ನೇಕಾರರನ್ನು ರೇಷ್ಮೆ ಬೆಳೆಗಾರರನ್ನು ರೇಷ್ಮೆ ಕೈಗಾರಿಕೆ ಯನ್ನು ಇತಿಶ್ರೀ ಹಾಡತಕ್ಕಂಥ ಒಂದು ನೀತಿಯಾಗಿದೆ. ಇದನ್ನು ಬದಲಾವಣೆ ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮನ್ನು ಒತ್ತಾಯ ಮಾಡುತ್ತೇನೆ. ನಮ್ಮ ಪರಿಸ್ಥಿತಿಯನ್ನು ಅರಿತುಕೊಂಡು, ತಮಿಳುನಾಡಿನವರು,ಆಂಧ್ರಪ್ರದೇಶದವರು ತೆರಿಗೆಯನ್ನು ಸಂಪೂರ್ಣವಾಗಿ ರದ್ದು ಮಾಡಿದ್ದಾರೆ. ಫ್ರೀ ಮಾರ್ಕೆಟ್ ಮಾಡಿದ್ದಾರೆ. ಹೀಗಾಗಿ ಅಲ್ಲಿಯ ಯುವಕರಿಗೆ ಉದ್ಯೋಗಾವಕಾಶ ದೊರಕಿದೆ. ಇವೊತ್ತು ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಪರಿಸ್ಥಿತಿಯು ಏನಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಇದೊಂದು ಬಂಡವಾಳ ಅಧಿಕಾಧಿಕ ಬೇಕಾಗದೇ ಇರತಕ್ಕಂಥ ಕೈಗಾರಿಕೆ. ಅವರ ಪಾಡಿಗೆ ಅವರು ಉದ್ಯೋಗವನ್ನು ಮಾಡಿಕೊಳ್ಳುತ್ತಾರೆ. ಅವರಷ್ಟಕ್ಕೆ ಅವರನ್ನು ಇರಲು ಬಿಡಿ. ಅದನ್ನು ಬಿಟ್ಟು ಯಾರೋ ಹತ್ತು ಜನ ಅಧಿಕಾರಿಗಳು ಹೇಳಿದ್ದನ್ನು ಕೇಳಿಕೊಂಡು ಜನರನ್ನು ಕಷ್ಟಕ್ಕೆ ಸಿಲುಕಿಸಿ ಅಧಿಕಾರಿಗಳನ್ನು ಲೂಟಿ ಮಾಡಲಿಕ್ಕೆ ಬಿಡಬೇಡಿ. ಅಂಥ ಒಂದು ಕಾರ್ಯವನ್ನು ಮಾಡುವುದಕ್ಕೆ ಹೋಗಬೇಡಿ ಎಂದು ಹೇಳ ಬಯಸುತ್ತೇನೆ.

ಈ ಬಗ್ಗೆ ಅರ್ಥಮಂತ್ರಿಗಳ ಮೇಲೆ ಒತ್ತಡವನ್ನು ತನ್ನಿ. ಈ ಒಂದು ಕೈಗಾರಿಕೆ ಕಳೆದ ೨೫ ವರ್ಷಗಳಿಂದ ಏನು ಬೆಳೆದುಕೊಂಡು ಬಂದಿದೆ; ಅದು ಇದೇ ರೀತಿಯಲ್ಲಿ ಬೆಳೆದುಕೊಂಡು ಹೋಗಲು ಅನುವು ಮಾಡಿ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಕೆಎಸ್‌ಐಸಿ ಯಲ್ಲಿ ಏನಾದರೂ ನಷ್ಟ ಆಗಿದ್ದರೆ ಅದಕ್ಕೆ ಅಧಿಕಾರಿಗಳ ಮಿಸ್‌ಮ್ಯಾನೇಜ್‌ಮೆಂಟ್ ಕಾರಣ. ಬೇರೆ ಯಾವುದೇ ರೀತಿಯಲ್ಲಿ ನಿಮಗೆ ಇದನ್ನು ಸರಿ ಪಡಿಸಲಿಕ್ಕೆ ಆಗಲಿಲ್ಲ ಅಂದರೆ ದಯಮಾಡಿ ಒಂದು ನೋಟೀಸ್ ಕೊಟ್ಟು ಅದನ್ನು ಮುಚ್ಚಿಸಿ ಬಿಡಿ. ಅಲ್ಲಿ ೬—೭ಕೋಟಿ ರೂ. ಗಳು ಏನು ಸೋರಿ ಹೋಗುತ್ತಾ ಇದೆ, ಆ ಹಣವನ್ನು ರೈತರಿಗೆ ಬೋನಸ್‌ರೂಪ ದಲ್ಲಿ ಕೊಡಿ ಆಗ ಹೆಚ್ಚಿಗೆ ರೇಷ್ಮೆ ಬೆಳೆಯೂ ಬರುತ್ತದೆ ಹೆಚ್ಚಿಗೆ ಬಟ್ಟೆಯನ್ನೂ ಕೂಡ ಮಾಡೋಣ. ಇದರಿಂದ ನಮ್ಮ ರಾಜ್ಯದ ಜನತೆಗೆ ಅನುಕೂಲವಾಗುತ್ತದೆ, ಸರಕಾರಕ್ಕೆ ಆದಾಯವೂ ಬರುತ್ತದೆ. ಈ ಕೆಲಸವನ್ನು ತಾವುಗಳು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವೊತ್ತು ನೇಕಾರರುಗಳಿಗೆ ನೀವೇ ನಿಂತು ಕೊಂಡು ಹೀಗೇ ಸ್ಮಗ್ಲಿಂಗ್ ಮಾಡಿ ಎಂದು ಹೇಳಿದಂತಾಗಿದೆ. ರೇಷ್ಮೆ ಮತ್ತು ರೇಷ್ಮೆಬಟ್ಟೆಯನ್ನು ತಯಾರು ಮಾಡಿ ಅದನ್ನು ತೆಗೆದುಕೊಂಡು ಹೋಗಿ ಆಂಧ್ರಪ್ರದೇಶ ಮತ್ತು ತಮಿಳುನಾಡುಗಳಲ್ಲಿ ಮಾರಾಟ ಮಾಡುತ್ತಿದ್ದಾರೆ. ಅಂಥದ್ದನ್ನು ತಪ್ಪಿಸಬೇಕು. ವಿಶ್ವ ಬ್ಯಾಂಕ್‌ನಿಂದ ನೀವು ಸಾಲವನ್ನು ತೆಗೆದುಕೊಂಡು ಬಂದಿದ್ದೀರಿ. ಅದರ ಯೋಜನೆಯನ್ನು ಯಾರು ತಯಾರು ಮಾಡಿದರು, ಯಾರು ಇಂಪ್ಲಿಮೆಂಟ್ ಮಾಡಿದರು ? ಯಾವರೀತಿಯಲ್ಲಿ ಇಂಪ್ಲಿಮೆಂಟ್ ಮಾಡಿದರು ? ನಮ್ಮ ರಾಜ್ಯದಲ್ಲಿನ ೬ ಜಿಲ್ಲೆಗಳಲ್ಲಿರತಕ್ಕಂಥ ಈ ಉದ್ಯಮವು ನಾಳೆ ೧೯ ಜಿಲ್ಲೆಗಳಿಗೂ ಪಸರಿಸಬೇಕು ಎಂಬ ಇಚ್ಛೆ ನನ್ನದಾಗಿದೆ.

ಅದರಲ್ಲಿಯೂ ಅತ್ಯಂತ ಬರಗಾಲಪೀಡಿತ ಪ್ರದೇಶಗಳಲ್ಲಿ ಇದು ಹರಡಬೇಕು, ಅದರಿಂದ ಆ ಪ್ರದೇಶಗಳು ಅಭಿವೃದ್ಧಿಗೆ ಬರಬೇಕು. ಆದರೆ ವಸ್ತುಸ್ಥಿತಿಯು ಬೇರೆ ಇದೆ. ದೊಡ್ಡ ದೊಡ್ಡ ಬಿಲ್ಡಿಂಗ್‌ಗಳನ್ನು ಕಾಣುತ್ತೇವೆ. ನೀವು ಕಟ್ಟಿದ ಮಾರುಕಟ್ಟೆಯಲ್ಲಿ ಭೂತಗಳು ಹೋಗಿ ಸೇರಿಕೊಂಡಿದ್ದಾವೆ. ತಾವುಗಳು ಮಾಡಿದ ಕಾರ್ಯಕ್ರಮಗಳಲ್ಲಿ ಎಷ್ಟು ? ಹೇಗೆ ? ಮತ್ತು ಯಾವ ರೀತಿಯಲ್ಲಿ ನಡೆಯುತ್ತಿದೆ ಎಂದು ನೋಡ ಬೇಕು. ಇವುಗಳನ್ನು ಸರಿಪಡಿಸಲಿಕ್ಕೆ ಪ್ರಯತ್ನಗಳನ್ನು ಮಾಡಬೇಕು. ಬೆಳಿಗಾರರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು. ನಿಮಗೆ ಓಟು ಕೊಟ್ಟಂಥ ರೈತರು ನಿಮ್ಮಿಂದ ಒಳ್ಳೆಯದನ್ನು ಬಯಸುತ್ತಾರೆ. ಆದರೆ ಅವರು ನಿಮ್ಮ ವರ್ತನೆಯಿಂದ ನೊಂದಿದ್ದಾರೆ ಪ್ರಾಮಾಣಿಕವಾಗಿ ನಾನು ಹೇಳುತ್ತಾ ಇದ್ದೇನೆ. ಇದರಲ್ಲಿ ನಾನು ರಾಜಕೀಯವನ್ನು ಬೆರೆಸುತ್ತಿಲ್ಲ ಅವರ ಮನಸ್ಸು ನೋಯಿಸಬೇಡಿ. ಒಳ್ಳೆಯ ಮೊಟ್ಟೆ ಕೊಡಿ; ಉಳಿದದ್ದೆಲ್ಲ ಅವರೇ ಮಾಡಿಕೊಳ್ಳುತ್ತಾರೆ ಇಷ್ಟನ್ನು ಹೇಳಿ ನಮ್ಮ ವಿದ್ಯುತ್ ಖಾತೆ ಬಗ್ಗೆ ಒಂದೆರಡು ಸಲಹೆಗಳನ್ನು ಕೊಡುತ್ತೇನೆ. ನಾವು ಈ ಕಡೆಗೆ ಬಂದು ೬ ತಿಂಗಳಾಯಿತು. ಆಗಿನಿಂದಲೂ ಒಂದೇ ಡಿಮಾಂಡು ನಮ್ಮದು : ಒಂದು ಪೋಲು ಅಥವಾ ಎರಡು ಪೋಲು ಅವಶ್ಯಕತೆ ಇರುವಂತಹ ರೈತರಿಗೆ ಐಪಿ ಸೆಟ್‌ಗಳಿಗೆ ಕನೆಕ್ಷನ್ ಕೊಡಬೇಕೆಂಬುದು. ಇದನ್ನು ಮೊದಲನೇ ಮತ್ತು ಎರಡನೇ ಅಧಿವೇಶನದಲ್ಲಿ ಹೇಳಿ ಈಗ ಮೂರನೇ ಅಧಿವೇಶನದಲ್ಲೂ ಹೇಳುತ್ತಿದ್ದೇವೆ. ಇದು ಅರಣ್ಯ ರೋಧನವಾಗಿಬಿಟ್ಟಿದೆ. ಅವರಿಗೆ ಬಹಳ ತೊಂದರೆಯಾಗಿದೆ. ತಾವು ಹೇಳುವ ಎನರ್ಜಿ ಲಾಸನ್ನು ಮತ್ತಿತರ ತೊಂದರೆಗಳನ್ನು ನಾವು ಅರ್ಥಮಾಡಿಕೊಳ್ಳಬಲ್ಲೆವು. ಆದರೂ ರೈತರ ಮೇಲೆ ನೀವು ಅನುಕಂಪ ಇಟ್ಟುಕೊಂಡು ಒಂದು ಅಥವಾ ಎರಡು ಪೋಲಗಳಿರುವ ರೈತರಿಗೆ ಒಂದೊಂದು ತಾಲ್ಲೂಕಿನಲ್ಲಿ ೨೦೦–೩೦೦ ರೈತರು ೨೫–೩೦ ಸಾವಿರ ಕೈಸಾಲ ಮಾಡಿ ಮೋಟಾರ್ ಇಟ್ಟುಕೊಂಡು ಕಾಯುತ್ತಿದ್ದಾರೆ, ದಯವಿಟ್ಟು ತಾವು ಈ ಕೆಲಸವನ್ನು ಮಾಡಲೇಬೇಕೆಂದು ಒತ್ತಾಯ ಮಾಡುತ್ತೇನೆ. ಈ ಐಪಿ ಸೆಟ್‌ಗಳಿಗೆ ಕನೆಕ್ಷನ್ ಕೊಡುವ ಬಗ್ಗೆ ನಮ್ಮ ಸರ್ಕಾರ ಒಳ್ಳೆಯ ಕೆಲಸ ಮಾಡಿದೆ ತಾವೂ ಹೇಳಿದ್ದೀರಿ. ವರ್ಷಕ್ಕೆ ೫೦ ಸಾವಿರ ೬೦ ಸಾವಿರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕೊಟ್ಟೆವು. ಅದನ್ನು ಈ ವರ್ಷ ನೀವು ೩೫ ಸಾವಿರಕ್ಕೆ ಇಳಿಸಿದ್ದೀರಿ ಎಂದು ತಿಳಿಯಿತು. ದಯವಿಟ್ಟು ಹಾಗೆ ಮಾಡಬೇಡಿ. ಆಮೇಲೆ ಬಡವರಿಗೆ ಕೆ.ಇ.ಬಿ.ಯಿಂದ ಆಗಿರುವ ಒಳ್ಳೆಯ ಕೆಲಸ ಎಂದರೆ ಭಾಗ್ಯಜ್ಯೋತಿ. ಇದರ ಸಂಖ್ಯೆಯನ್ನು ತಾವು ಇನ್ನೊಂದಷ್ಟು ಹೆಚ್ಚು ಮಾಡಬೇಕು. ಇದರಿಂದ ಬಡವರಿಗೆ ಬಹಳ ಅನುಕೂಲವಾಗುತ್ತದೆ. ಅದರಲ್ಲೂ ಗುಡಿಸಲು ಹರಕಲುಮುರುಕಲು ಮನೆಗಳಲ್ಲಿ ದೀಪ ಹಾಕಿಸಿದರೆ ಹಾವು ಚೇಳು ಹೋಗಿ ಸೇರಿಕೊಳ್ಳುವುದಕ್ಕೆ ಅವಕಾಶ ಇರುವುದಿಲ್ಲ. ಆದ್ದರಿಂದ ಇದರ ಸಂಖ್ಯೆಯನ್ನು ಹೆಚ್ಚು ಮಾಡಬೇಕೆಂದು ಸಲಹೆ ಮಾಡುತ್ತೇನೆ. ಕನಿಷ್ಟ ಪಕ್ಷ ಎಸ್‌ಸಿ/ಎಸ್‌ಟಿಯವರು ಎಲ್ಲೆಲ್ಲಿ ಭಾಗ್ಯಜ್ಯೋತಿಯಲ್ಲಿ ಯಾರು ಯಾರು ದೀಪದ ಸಂಪರ್ಕ ತೆಗೆದುಕೊಂಡಿದ್ದಾರೆ. ಅವರು ದುಡ್ಡು ಕಟ್ಟಿಲ್ಲವೆಂದು ಡಿಸ್‌ಕನೆಕ್ಟ್ ಮಾಡಬೇಡಿ. ನಾನು ಸಮಾಜಕಲ್ಯಾಣ ಸಚಿವನಾಗಿದ್ದಾಗ ಸ್ಪೆಷಲ್ ಕಾಂಪೊನೆಂಟ್‌ನಲ್ಲಿ ಬರುವ ಹಣದಿಂದ ೫೦ ಲಕ್ಷ ರೂಗಳನ್ನು ತೆಗೆದು ಈ ಭಾಗ್ಯಜ್ಯೋತಿ ಬಾಬಿಗೆ ಬಳಸಿಕೊಳ್ಳಿ. ಅವರ ಮನೆ ಬೆಳಕನ್ನು ಮಾತ್ರ ಕಿತ್ತುಕೊಳ್ಳಬೇಡಿ. ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನವರ ಜೊತೆ ಈ ಬಗ್ಗೆ ನೀವು ಚರ್ಚೆ ಮಾಡಿದರೆ ಈ ಜನರಿಗೆ ಬಹಳ ಉಪಯೋಗವಾಗುತ್ತದೆಂದು ಹೇಳುತ್ತೇನೆ. ಇನ್ನು ಸಿಸ್ಟಮ್ ಲಾಸಸ್ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ಬೇರೆ ಸ್ನೇಹಿತರೆಲ್ಲಾ ಹೇಳಿದ್ದಾರೆ. ಹಳ್ಳಿಗಳಿಗೆ ಬೆಳಕುಕೊಡುವ ಕಾರ್ಯಕ್ರಮವನ್ನು ನಮ್ಮ ಕಾಲದಲ್ಲಿ ಸಾಕಷ್ಟು ಜಾರಿಗೆ ತಂದಿದ್ದೇವೆ. ಇವೊತ್ತು ಕರ್ನಾಟಕ ರಾಜ್ಯದ ಯಾವುದೇ ರೆವಿನ್ಯೂ ಹಳ್ಳಿಯೂ ವಿದ್ಯುತ್ ಇಲ್ಲದೇ ಇಲ್ಲ, ನಮ್ಮಲ್ಲಿ ರೆವಿನ್ಯೂ ವಿಲೇಜ್ ಅಷ್ಟೇ ಅಲ್ಲ, ಹಳ್ಳಿಗಳ ಹೊರಗೆ ಲಂಬಾಣಿ ತಾಂಡಗಳು, ಎಸ್‌ಸಿಎಸ್‌ಟಿಗಳ ವಸತಿಗಳು ಇವೆ. ಇವರಿಗೆ ಇನ್ನೂ ವಿದ್ಯುತ್ ಸಿಕ್ಕಿಲ್ಲ. ಇವರಿಗೆಲ್ಲ ವಿದ್ಯುತ್ ಪೂರೈಸುವ ಯೋಜನೆಯನ್ನು ಒಂದೇ ವರ್ಷದಲ್ಲಿ ಮಾಡುವುದಾಗಿ ನೀವು ಕಾರ್ಯಕ್ರಮ ಹಾಕಿಕೊಂಡರೆ ಬಹಳ ಉಪಯೋಗವಾಗುತ್ತದೆ. ಸಭಾಧ್ಯಕ್ಷಿಣಿಯವರೇ, ಸಮಯದ ಅಭಾವದಿಂದ ನೀವು ಕೊಟ್ಟ ೩೦ ನಿಮಿಷದಲ್ಲಿ ನನ್ನ ಭಾಷಣ ಮುಗಿಸಿ ಈ ಡಿಮಾಂಡನ್ನು ವಿರೋಧಿಸಿ ನನ್ನ ಮಾತು ಮುಗಿಸುತ್ತೇನೆ.

೪–೪೫ ಪಿ. ಎಂ.

† ಶ್ರೀಮತಿ ಚಂದ್ರಪ್ರಭಾ ಅರಸು (ಹುಣಸೂರು).—ಮಾನ್ಯ ಉಪ ಸಭಾಧ್ಯಕ್ಷಿಣಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದನೆಗಳು. ಮೊದಲನೆಯದಾಗಿ ವಿದ್ಯುತ್ ಇಲಾಖೆ ಮೇಲೆ ಕೆಲವೊಂದು ಅಂಶಗಳನ್ನು ಹೇಳಲು ಬಯಸುತ್ತೇನೆ. ನಮ್ಮ ಕರ್ನಾಟಕ ರಾಜ್ಯ ವಿದ್ಯುತ್ ಉತ್ಪಾದನೆಯಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೂ ಕೂಡ ಇಡೀ ರಾಷ್ಟ್ರಕ್ಕೇ ಬಹಳ ಮೇಲ್ಪಂಕ್ತಿಯಾಗಿದ್ದ ಮತ್ತು ಆದರ್ಶಪ್ರಾಯವಾಗಿ ಕೆಲವೊಂದು ಜಲವಿದ್ಯುತ್ ಯೋಜನೆಗಳನ್ನು ಅಳವಡಿಸಿಕೊಂಡಂಥ

ರಾಜ್ಯವಾಗಿತ್ತು. ಹೆಚ್ಚುವರಿ ವಿದ್ಯುತನ್ನು ಇತರೆ ರಾಜ್ಯಗಳಿಗೆ ಅಂದರೆ ಕೇರಳ ಮತ್ತು ಅಕ್ಕಪಕ್ಕದ ರಾಜ್ಯಗಳಿಗೆ ನಾವು ಕೊಡುತ್ತಿದ್ದಂಥ ಸಂದರ್ಭ ಇತ್ತು. ಆದರೆ ಇವತ್ತಿನ ದಿವಸ ವಿದ್ಯುತ್ ಅಭಾವ ಬಹಳವಾಗಿದ್ದು, ಅದರ ಕೊರತೆಯನ್ನು ಇಡೀ ರಾಜ್ಯದ ಜನತೆ ವಿವಿಧ ರಂಗಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಅನುಭವಿಸುತ್ತಿದ್ದಾರೆ. ಇದಕ್ಕೆ ಕಾರಣ ಮೂಲತಃ ಜಲವಿದ್ಯುತ್ ಘಟಕಗಳನ್ನೇ ಅಂದರೆ ಜಲ ವಿದ್ಯುತ್‌ಗಾರಗಳನ್ನು ನಾವು ಹೊಂದಿರುವುದು, ಇಂತಹ ನೀರನ್ನು ಆಧರಿಸಿರತಕ್ಕಂಥ ಉತ್ಪಾದಕ ಘಟಕಗಳಿಂದ ಉತ್ಪಾದನೆ ಆಗುತ್ತಿರುವುದು ಜನತೆಯ ಬೇಡಿಕೆಗಳಿಗೆ ಅನುಗುಣವಾಗಿಲ್ಲ, ಅದೆಲ್ಲದಕ್ಕಿಂತ ಹೆಚ್ಚಾಗಿ ಇಲಾಖೆಯಲ್ಲಿ ಮತ್ತು ಮಂಡಳಿಯಲ್ಲಿ ವಿದ್ಯುತ್ ಸೋರುವಿಕೆಯನ್ನು ತಡೆಗಟ್ಟುವುದಕ್ಕೆ ಯಾವುದೇ ಸೂಕ್ತವಾದ ಕ್ರಮಗಳನ್ನು ಕೈಗೊಳ್ಳದೇ ಇರತಕ್ಕಂಥದ್ದೂ ಒಂದು ಮುಖ್ಯವಾದ ಕಾರಣ ವಾಗಿರಬಹುದು. ನಮ್ಮಲ್ಲಿ ಜಲ ವಿದ್ಯುತ್‌ಗಾರಗಳು ಹೆಚ್ಚಾಗಿ ಇರುವುದರಿಂದ ಮೇಜರ್ ಪ್ರಾಜೆಕ್ಟ್ಸ್‌ಗಳು ಏನು ಇದೆ ವಿದ್ಯುತ್‌ನ್ನು ಉತ್ಪಾದನೆ ಮಾಡತಕ್ಕಂಥ ವರಾಹಿ ಹಾಗೂ ಕಾಳಿನದಿ ಮತ್ತಿತರ ಜಲ ವಿದ್ಯುತ್ ಉತ್ಪಾದನಾ ಕೇಂದ್ರಗಳಲ್ಲಿ ಸಾಕಷ್ಟು ಕೆಲಸ ಪ್ರೋಗ್ರೆಸ್ ಎಂದರೆ ಆಯಾಯ ಸಮಯಕ್ಕೆ ತಕ್ಕಹಾಗೆ ಮುಂದುವರೆಸಲಾರದಂಥ ಪರಿಸ್ಥಿತಿ ಇರತಕ್ಕಂಥದ್ದು, ಥರ್ಮಲ್ ವಿದ್ಯುತ್. ಮತ್ತು ಅಣು ವಿದ್ಯುತ್ ಕೇಂದ್ರಗಳನ್ನು ಸ್ಥಾಪನೆ ಮಾಡುವುದರಲ್ಲಿ ನಮ್ಮ ಸರಕಾರ ಬಹಳ ಹಿಂದೆ ಬಿದ್ದಿರಬಹುದು. ರಾಯಚೂರು ಥರ್ಮಲ್ ವಿದ್ಯುತ್ ಕೇಂದ್ರ ಇವತ್ತಿಗೂ ಚಾಲನೆಗೆ ಬಾರದ ಪರಿಸ್ಥಿತಿಯಲ್ಲಿದೆ. ಮುಖ್ಯವಾಗಿ ಮೂರು ದಿಶೆಗಳಲ್ಲಿ ನಮ್ಮ ವಿದ್ಯುತ್‌ನ್ನು ನಾವು ಉಪಯೋಗಿಸುತ್ತಿದ್ದೇವೆ. ಒಂದು ಇಂಡಸ್ಟ್ರೀಸ್ ; ಮೇಜರ್ ಅಂಡ್ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕೈಗಾರಿಕಾ ಉದ್ದಿಮೆಗಳಲ್ಲಿ ಎರಡನೆಯ ದಾಗಿ ನೀರಾವರಿ ಮತ್ತು ನೀರಾವರಿ ಅಳವಡಿಸಿರತಕ್ಕಂಥ ಬಾವಿ ಅಥವಾ ಪಂಪ್‌ಸೆಟ್ ಮುಂತಾದ ಕೆಲಸ ಗಳಿಗಾಗಿ ; ಮೂರನೆಯದಾಗಿ ಗೃಹಬಳಕೆ. ಈ ಮೇಜರ್ ಇಂಡಸ್ಟ್ರೀಸ್‌ನಲ್ಲಿ ಸಾಕಷ್ಟು ಅವರಿಗೆ ವಿದ್ಯುತ್ತಿನ ಕೊರತೆ ಇಲ್ಲದ ರೀತಿಯಲ್ಲಿ ಸರ್ಕಾರ ನಡೆದುಕೊಂಡರೂ ಕೂಡಾ ಕೆಲವೊಮ್ಮೆ ಸೋರುವಿಕೆ ಅವ್ಯಾಹತವಾಗಿ ನಡೆಯುತ್ತಿದೆ. ಸಣ್ಣ ಸಣ್ಣ ಉದ್ದಿಮೆಗಳು ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಮತ್ತು ಸಿಂಗಲ್ ವಿಂಡೊ ಇಂಡಸ್ಟ್ರಿಗಳ ಬಗ್ಗೆ ಹಿಂದಿನ ಸರ್ಕಾರ ಬಹಳವಾಗಿ ಕಾರ್ಯಕ್ರಮವನ್ನು ಹಾಕಿಕೊಂಡಿತ್ತು. ಆದರೆ ತದನಂತರದ ದಿನಗಳಲ್ಲಿ ಅದು ಕೂಡಾ ಸಿಕ್ ಇಂಡಸ್ಟ್ರೀಸ್ ಅಥವಾ ರೋಗಗ್ರಸ್ಥ ಉದ್ದಿಮೆಗಳ ಸಾಲಿಗೆ ಸೇರಬೇಕಾಗಿ ಬಂದಿರುವುದಕ್ಕೆ ಮುಖ್ಯವಾದ ಕಾರಣ ವಿದ್ಯುಚ್ಛಕ್ತಿಯ ಕೊರತೆ. ಮತ್ತು ಇನ್ನೊಂದು ಕಾರಣ ಅವುಗಳಿಗೆ ಇರಬೇಕಾದಂಥ ಸಾಮಗ್ರಿಗಳು ಮತ್ತು ಬಂಡವಾಳದ ಕೊರತೆ. ಹೀಗಾಗಿ ಅವು ಮುಚ್ಚುವಂಥ ಪರಿಸ್ಥಿತಿಗೆ ಬಂದಿವೆ. ಒಂದು ತಿಂಗಳಲ್ಲಿ ಸುಮಾರು ನೂರಾರು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಮುಚ್ಚಿವೆ- ಸಿಂಗಲ್ ವಿಂಡೋಸ್ ಇಂಡಸ್ಟ್ರೀಸ್‌ಗಳನ್ನು ಮಾಡುತ್ತೇವೆ ಎಂದು ಹೇಳಿದಂಥ ಸಂದರ್ಭದಲ್ಲಿ, ಅವುಗಳಪೈಕಿ ಅರ್ಧಕ್ಕಿಂತ ಹೆಚ್ಚಾಗಿ ಮುಚ್ಚುವಂಥ ಸಂದರ್ಭಗಳು ಇವೆ. ವಿದ್ಯುಚ್ಛಕ್ತಿ ಉತ್ಪಾದನೆ ನಮ್ಮ ರಾಜ್ಯದಲ್ಲಿ ಎಷ್ಟಿದೆ? ಎಷ್ಟು ಬೇಕಾಗಿದೆ? ನಮ್ಮ ಬೇಡಿಕೆ ಎಷ್ಟಿದೆ ಎನ್ನುವುದನ್ನು ಅವಲಂಬಿಸಿ ಇದಕ್ಕೆ ಉತ್ಪಾದನೆಯನ್ನು ಮಾಡತಕ್ಕಂಥ ಬೇರೆ ಬೇರೆ ಮಾರ್ಗಗಳನ್ನು ನಾವು ಇನ್ನು ಕೂಡಾ ಸಂಪೂರ್ಣವಾಗಿ ಅಳವಡಿಸಿಕೊಳ್ಳುವುದಕ್ಕಾಗಿಲ್ಲ. ಇದನ್ನೂ ಕೂಡಾ ಮಾಡಬೇಕು. ಮತ್ತು ಈಗ ಯಾವುದೇ ಕಾರ್ಯಕ್ರಮವನ್ನು ಸಾಧನೆಗೆ ತೆಗೆದುಕೊಂಡಿದ್ದರೆ. ಅದನ್ನು ಆದಷ್ಟು ಟೈಮು ಬೌಂಡ್ ಪ್ರೋಗ್ರಾಮ್ ಎಂದು ಇಂತಿಷ್ಟೇ ವರ್ಷದಲ್ಲಿ ಅಥವಾ ಇಂತಿಷ್ಟೇ ತಿಂಗಳಲ್ಲಿ ಈ ಒಂದು ಕೆಲಸ ವನ್ನು ಮುಗಿಸಿ ನಮಗೆ ಬೇಕಾದಂಥ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಸರ್ಕಾರ ತೀವ್ರ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಇದಕ್ಕೆ ಹೆಚ್ಚಿನ ಹಣಕಾಸನ್ನು ಒದಗಿಸಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟ ಸಿಬ್ಬಂದಿ ವರ್ಗವನ್ನೂ ಸಹಾ ಹೆಚ್ಚಿನ ಕೆಲಸಕ್ಕಾಗಿ ಅಳವಡಿಸಬೇಕಾಗುತ್ತದೆ. ಮತ್ತು ಗೃಹಬಳಕೆ ವಿದ್ಯುತ್‌ನಲ್ಲಿ ಈಗ ಸಾಕಷ್ಟು ದರಗಳನ್ನು ಏರಿಸಿದ್ದಾರೆ. ಹಿಂದೆ ಇದ್ದಂಥ ದರಗಳು ಕೆಲವೇ ವರ್ಷದಲ್ಲಿ, ದಾಮ್ದುಪಾ ದರಗಳನ್ನು ತಾವು ನೋಡಿದರೆ ಗೃಹಬಳಕೆಯ ಒಂದು ದರ ಹೇಗಿದೆ ಎಂದು ಹೇಳಿದರೆ ಅದನ್ನು ಮುಟ್ಟಿ ನೋಡಿದವರಿಗೆ ಸಾಕಷ್ಟು ಷಾಕ್ ಹೊಡೆದಿರುತ್ತದೆ. ಆದುದರಿಂದ ಈ ಸೋರುವಿಕೆಯನ್ನು ತಡೆಯುವುದರಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ ಮತ್ತು ಈ ವಿದ್ಯುತ್ ದರಗಳನ್ನು ನಿಗದಿಪಡಿಸತಕ್ಕಂಥ ಸಂದರ್ಭದಲ್ಲಿ ಬಳಕೆದಾರರಿಗೆ ಆಗಿರತಕ್ಕಂಥ ತೊಂದರೆಗಳ ಬಗ್ಗೆ ಒಂದೆರಡು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಕೆ.ಇ.ಬಿ.ನವರು ಪ್ರತಿ ತಿಂಗಳೂ ಬಿಲ್ ಅನ್ನು ಅಲ್ಲಿರತಕ್ಕ ಮೀಟರ್ ರೀಡಿಂಗ್ ನೋಡಿ ಬರೆದು ಕೊಂಡು ಹೋಗುತ್ತಾರೆ. ನಂತರ ಬಿಲ್ ಅನ್ನು ಕೊಟ್ಟು ಹೋಗುತ್ತಾರೆ. ಬಿಲ್‌ನ ಪಾವತಿ ಸಂಬಂಧ ಪಟ್ಟ ಇಲಾಖೆಯ ಕೇಂದ್ರಗಳಲ್ಲಿ ಮತ್ತೆ ಕೆಲವು ಕಡೆ ಬ್ಯಾಂಕ್‌ನಲ್ಲಿ ಚೆಕ್ ಮುಖಾಂತರ ಕೊಡುವಂತಹ ವ್ಯವಸ್ಥೆ ಮಾಡಿದ್ದಾರೆ. ಯಾವುದೇ ಬಿಲ್ ಅನ್ನು ಅವರು ರೀಡಿಂಗ್ ಹಾಕಿ ಬರೆದಿರುತ್ತಾರೆ, ಅದರ ಪ್ರಮಾಣವನ್ನು ನೋಡಿ ಕೊಟ್ಟಂತಹ ಬಿಲ್ ಅನ್ನು ಗ್ರಾಹಕರು ತೆಗೆದುಕೊಂಡು ಸಂಬಂಧಪಟ್ಟ ಇಲಾಖೆ

ಯಲ್ಲಿ ಪಾವತಿ ಮಾಡಿದರೆ, ಅದಕ್ಕೆ ಪೇಡ್ ರಿಸೀಟ್, ಹಣ ಬಂದಿದೆ ಎಂದು ಒಂದು ರಶೀದಿಯನ್ನು ಕೊಡುತ್ತಾರೆ. ಮತ್ತೆ ಇನ್ನೊಂದು ತಿಂಗಳು ನೋಡಿದರೆ ಬಾಕಿದರ ಎನ್ನುವುದು ಸೇರಿಸಿ ಬಿಲ್ ಕೊಡುತ್ತಾರೆ. ಒಂದಕ್ಕೆ ಎರಡರಷ್ಟು ಆಗಿ ಬಂದಿರುತ್ತದೆ. ಈ ತಿಂಗಳು ಮುನ್ನೂರು ರೂಪಾಯಿ ಬಂದಿರುತ್ತದೆ ಎಂದು ಇಟ್ಟುಕೊಳ್ಳೋಣ. ಅದನ್ನು ತೆಗೆದುಕೊಂಡು ಹೋಗಿ ಅವರಲ್ಲಿ ಕೊಟ್ಟು ಹಣ ವನ್ನು ಕಟ್ಟಿ, ಅದಕ್ಕೆ ರಸೀತಿಯನ್ನು ಪಡೆದು ಲೆಜ್ಡರ್ ಎಂಟ್ರಿ ಆಗಿರುತ್ತದೆ, ಅಂದರೆ ಮತ್ತೊಮ್ಮೆ ಮುಂದಿನ ತಿಂಗಳು ನೋಡಿದರೆ ಕೂಡ ೩೦೦ ರೂಪಾಯಿಗೆ ಇನ್ನೂ ಒಂದು ೩೫೦ ಸೇರಿಸಿರುತ್ತಾರೆ. ದಂಡ ಮತ್ತು ಬಾಕಿ ದರ ಅದಕ್ಕೆ ಶೇಕಡಾ ಎರಡು ಬಡ್ಡಿ ಇಷ್ಟೆಲ್ಲಾ ಸೇರಿಸಿ ೩೫೦ ರೂಪಾಯಿ ಆಗಿ, ಒಟ್ಟು ೬೫೦ಕ್ಕೆ ಬಿಲ್ ಬರುತ್ತದೆ. ಇದನ್ನು ವೆರಿಫಿಕೇಷನ್ ಮಾಡಲು ಹೋದರೆ ಅಂದಗೆ ವಿಮರ್ಶೆ ಮಾಡಲಿಕ್ಕೆ ತೆಗೆದುಕೊಂಡು ಹೋದರೆ ಪ್ರತಿಯೊಂದು ಹೆಜ್ಜೆ ಹೆಜ್ಜೆಗೂ ತೊಂದರೆ. ಅಲ್ಲಿ ಹೋಗಿ, ಇಲ್ಲಿ ಹೋಗಿ, ನಾಳೆ ಬನ್ನಿ ಎನ್ನುತ್ತಾರೆ. ಹಿಂದೆ ಸ್ಟ್ಯಾಂಪ್ಡ್ ರಿಸೀಟ್ ಕೊಡುತ್ತಿದ್ದರು. ಈಗ ಅದನ್ನು ಕಂಪ್ಯೂಟರೈಸ್ ಮಾಡಿದ್ದೀವೆ ಎಂದು ಹೇಳುತ್ತಾರೆ. ಕಂಪ್ಯೂಟರೈಸ್ ರಸೀತಿ ಎಷ್ಟು ಸಣ್ಣದು ಆಗಿದೆ ಅಂದರೆ ತಮಗೆ ಕಳಿಸಿಕೊಡುತ್ತೇನೆ, ನೋಡಿ. ಯಾರಾದರೂ ಕೈಯಲ್ಲಿ ಕೂಡ ಅದನ್ನು ಭದ್ರವಾಗಿ ಇಡತಕ್ಕಂಥ ಒಂದು ಪರಿಸ್ಥಿತಿಯಲ್ಲಿ ಇಲ್ಲ; ಅಷ್ಟು ಸಣ್ಣದು ಆಗಿದೆ. ಅದಕ್ಕೆ ಸ್ಟ್ಯಾಂಪ್ ಸಹ ಹಚ್ಚಿರುವುದಿಲ್ಲ, ಸ್ಟ್ಯಾಂಪ್ ಅನ್ನು ಕೈಗೆ ಕೊಡುತ್ತಾರೆ. ಈ ನ್ಯೂನತೆಯನ್ನು ಸರಿಪಡಿಸುವುದಕ್ಕೆ ಆಗುವುದಿಲ್ಲವೇ ? ಸಾರ್ವಜನಿಕರು ಎಷ್ಟು ಸಾರಿ ಅಲ್ಲಿ ಸರದಿಯಲ್ಲಿ ನಿಂತು ಕಾಯಬೇಕಾದ ಪ್ರಸಂಗ ಇದೆ. ಮತ್ತು ವೆರಿಪಿಕೇಷನ್‌ಗೆ ಹೋದರೆ ತಕ್ಷಣ, ಆಗದೇ ಇರುವ ಕೆಲಸ ಒಂದು ದಿವಸಕ್ಕೆ ಮೂರು ದಿವಸ ಹಿಡಿಯುತ್ತದೆ. ಅದು ಅಷ್ಟುಬೇಗ ಆದರೆ ಪುಣ್ಯ. ಏತಕ್ಕೆ ಈ ಮಾತನ್ನು ಹೇಳುತ್ತೇನೆ ಅಂದರೆ ಗ್ರಾಹಕರ, ಬಳಕೆದಾರರ ಸರ್ವೀಸ್ ಏನು ಇದೆ, ಅದಕ್ಕೆ ಸಾಕಷ್ಟು ಛಾರ್ಜಸ್ ಅನ್ನು ಮಂಡಲಿಯವರು ತೆಗೆದುಕೊಳ್ಳುತ್ತಾರೆ. ಆದರೆ ಸರ್ವೀಸ್ ಮಾಡತಕ್ಕ ರೀತಿ, ಗ್ರಾಹಕರಿಗೆ ಒದಗಿಸಿಕೊಡತಕ್ಕ ಸೇವೆ ಯಾವುದೇ ರೀತಿಯಲ್ಲಿ ಉತ್ತಮಗೊಂಡಿಲ್ಲ. ಇವರ ಅಲೆದಾಟ ತಪ್ಪಿಲ್ಲ. ದಿನವೂ ಚಿಂತನೆ ಮಾಡತಕ್ಕದ್ದು ತಪ್ಪಿಲ್ಲ. ಪ್ರತಿ ತಿಂಗಳೂ ಸಹ ಬಿಲ್ ಅನ್ನು ಜೋಪಾನವಾಗಿ ಬಾಂಡ್ ತರಹ ಇಟ್ಟುಕೊಳ್ಳುವಂತಹ ಪರಿಸ್ಥಿತಿ ಬಂದಿದೆ. ಅದನ್ನು ಕಾಪಾಡಿಕೊಳ್ಳಲಿಲ್ಲ ಅಂದಕೆ ಒಂದಕ್ಕೆ ನಾಲ್ಕರಷ್ಟು ದಂಡ ಬೀಳುತ್ತದೆ. ಅದೇ ರೀತಿ ಈ ಕೈಗಾರಿಕಾ ಉದ್ಯಮಗಳಲ್ಲಿ ಸೋರುವಿಕೆ ಯನ್ನು ತಡೆಗಟ್ಟಬೇಕು ಮಾತ್ರ ಹೈ-ವೋಲ್ಟೇಜ್ ಟೆನ್‌ಷನ್‌ನಲ್ಲಿ ವಿದ್ಯುತ್ ಸೋರುವಿಕೆ ೨೫ ಪರ್ಸೆಂಟ ಭಾಗ ಆಗುತ್ತದೆ ಎಂದು ಹೇಳಿದ್ದಾರೆ, ಅದು ಈಗ ಎಲ್ಲಿಯವರೆಗೆ ಬಂದಿದೆಯೋ ಗೊತ್ತಿಲ್ಲ. ಮಾನ್ಯ ಸಚಿವರು ಉತ್ತರದಲ್ಲಿ ಹೇಳಬೇಕಾಗುತ್ತದೆ. ಈ ಸೋರುವಿಕೆಯನ್ನು ತಡೆಗಟ್ಟುವುದಕ್ಕೆ ಸರ್ಕಾರ ನೇರವಾದ ಸೂಕ್ತವಾದ, ಪರಿಣಾಮಕಾರಿಯಾದ ಕ್ರಮಗಳನ್ನು ಹಾಕಿಕೊಂಡಿದೆಯೋ ? ಅಥವಾ ಸರ್ಕಾರವು ಕ್ರಮ ಹಾಕಿಕೊಳ್ಳುವಂತಹ ಯೋಚನೆ ಇಟ್ಟುಕೊಂಡಿದೆಯೇ ಎಂಬ ಪ್ರಶ್ನೆಯನ್ನು ತಮ್ಮ ಮೂಲಕ ನಾನು ಅವರಲ್ಲಿ ಕೇಳುತ್ತೇನೆ. ಕೇಂದ್ರ ಸರ್ಕಾರ ಸ್ಥಾಪನೆ ಮಾಡಿರತಕ್ಕ ಬೃಹತ್ ಕೈಗಾರಿಕೆಗಳು ನಮ್ಮ ರಾಜ್ಯದಲ್ಲಿರತಕ್ಕದು ಒಂದು ವಿಶೇಷ. ಅದೂ ಅಲ್ಲದೇ ನಮ್ಮ ರಾಜ್ಯ ಸರ್ಕಾರದ ವತಿಯಿಂದ ನಡೆದಿರತಕ್ಕ ಕೈಗಾರಿಕೆಗಳು ಉದಾಹರಣೆಗೆ ಸೋಪ್ ಅಂಡ್ ಡಿಟರ್ಜೆಂಟ್ಸ್, ಸಾಬೂನು ಕೈಗಾರಿಕೆ. ಪ್ರತಿ ನಿತ್ಯ ಬಳಕೆದಾರರು ಬಳಕೆ ಮಾಡತಕ್ಕ ಕೈಗಾರಿಕೆ ಏತಕ್ಕೆ, ಯಾವಾಗ ನೋಡಿದರೂ ನಷ್ಟದಲ್ಲಿ ಇರುತ್ತದೆ; ಇದು ಏತಕ್ಕೆ ಎಂದು ಗೊತ್ತಿಲ್ಲ. ಯಾವಾಗ ಕೇಳಿದರೂ ಸಹ ಅದರಲ್ಲಿ ನಷ್ಟ ದಲ್ಲಿ ಇರುವಂತಹ ಅಂಕಿ ಅಂಶಗಳನ್ನು ತೋರಿಸುತ್ತಾರೆಯೋ ಹೊರತು ಅದು ಲಾಭದಾಯಕವಾಗಿ ಅಥವಾ ಲಾಭ ನಷ್ಟ ಇಲ್ಲದೇ ಸರಿದೂಗಿಸಿಕೊಂಡು ಹೋಗುವಂತಹ ಸಂದರ್ಭ ಅತಿ ವಿರಳ. ಅಂದರೆ ಅದರಲ್ಲಿ ಆಡಳಿತ ಮಂಡಳಿಯವರು ಸರಿಯಾಗಿ ನೋಡಿಕೊಳ್ಳುವುದಕ್ಕೆ ಆಗುತ್ತಿಲ್ಲವೋ ಅಥವಾ ಉಸ್ತುವಾರಿ ಇಲಾಖೆಯವರು ಅವರ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲವೊ ಏನು ಕಾರಣ ಎಂಬುದು ಗೊತ್ತಿಲ್ಲ. ಯಾವಾಗ ಕೇಳಿದರೂ ರೋಗಗ್ರಸ್ಥ ಎನ್ನುವ ಪದ ಉಪಯೋಗಿಸುತ್ತಿದ್ದಾರೇ ಸಿಕ್ ಇಂಡಸ್ಟ್ರೀಸ್; ಈ ರೋಗ ಮೊದಲೇ ಬರುತ್ತದೆಯೋ ಅಥವಾ ಹುಟ್ಟುತ್ತಾ ಬರುತ್ತದೆಯೊ. ಬೆಳೆಯುತ್ತಾ ಬರುತ್ತದೆಯೋ ಅಥವಾ ಇದಕ್ಕೆ ಇನ್ನೂ ಏನಾದರೂ ಮದ್ದು ಇದೆಯೋ ಅಥವಾ ಇಲ್ಲವೋ ಎನ್ನುವುದು ಬಹಳಅಪರೂಪದ ಸಂಗತಿ ಆಗಿದೆ. ಏಕೆಂದರೆ ಯಾವಾಗಲಾದರೂ ಮನುಷ್ಯನಿಗೆ ರೋಗ ಬರುತ್ತದೆ; ಯಾವತ್ತಾದರೂ ರೋಗ ಬಂದಾಗ ಅದಕ್ಕೆ ಉಪಾಯ ಅಥವಾ ಪರಿಹಾರಇರುತ್ತದೆ; ಮದ್ದು ಇರುತ್ತದೆ. ಆದರೆ ಈ ರೋಗಗ್ರಸ್ಥ ಕಾರ್ಖಾನೆಗಳಿಗೆ ಮದ್ದೇ ಇಲ್ಲವೆಂದು ಹೇಳುವಂತಹ ಪರಿಸ್ಥಿತಿ ಬಂದಿದೆ. ಯಾವಾಗ ಕೇಳಿದರೂ ರೋಗಗ್ರಸ್ಥ ಎನ್ನುವುದು. ಅದರಲ್ಲಿಯೂ ಮುಖ್ಯವಾಗಿ ದಿನಬಳಕೆಯ ವಸ್ತುಗಳನ್ನು ತಯಾರು ಮಾಡತಕ್ಕ ಕೈಗಾರಿಕೆ ಕೂಡ ಏತಕ್ಕೆ ನಷ್ಟವನ್ನು ಅನುಭವಿಸಬೇಕಾಗಿದೆ ಎನ್ನುವುದು ಸಾರ್ವಜನಿಕರಿಗೆ ಇನ್ನೂ ಅರ್ಥ ಆಗುತ್ತಿಲ್ಲ. ಇದನ್ನು ಸರಿಪಡಿಸುವಂತಹ

ಕೆಲಸವನ್ನು ತೆಗೆದುಕೊಳ್ಳಬೇಕು. ಈಗಾಗಲೇ ಇರತಕ್ಕಂಥ ಕೈಗಾರಿಕೆಗಳು ಚೆನ್ನಾಗಿ ಕೆಲಸ ಮಾಡುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನಮ್ಮ ರಾಜ್ಯವು ಬಹಳ ಸಂಪದ್ಭರಿತವಾಗಿದೆ, ಅದರಲ್ಲಿಯೂ ಪ್ರಕೃತಿ ಸಂಪತ್ತುಗಳನ್ನು ಒಳಗೊಂಡಂತೆ ಇರತಕ್ಕ ರಾಜ್ಯ. ಆದ್ದರಿಂದ ಪ್ರಕೃತಿ ಸಂಪತ್ತನ್ನು ಬಳಸಿಕೊಂಡು ಗುಡಿ ಕೈಗಾರಿಕೆಗಳಿಗೆ ಹೆಚ್ಚು ಒತ್ತು ಕೊಟ್ಟರೆ ಬಹುಶಃ ನಗರ ಈ ಉದ್ಯಮಗಳ ಸಂಖ್ಯೆ ಹೆಚ್ಚುವುದು ಮತ್ತು ಜನ ಸಂದಣಿ ಪಟ್ಟಣಗಳಲ್ಲಿ ನಗರ ಪ್ರದೇಶಗಳಲ್ಲಿ ಮತ್ತು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಹೆಚ್ಚಿನ ಜನಸಂಖ್ಯೆ ಒತ್ತಡ ಹೆಚ್ಚುವಂತಹ ಪರಿಸ್ಥಿತಿಯನ್ನು ಬಹಳ ಮಟ್ಟಿಗೆ ಕಡಿಮೆ ಮಾಡಬಹುದು. ಹಾಗೂ ಗೃಹ ಬಳಕೆದಾರರ ವಸ್ತುವನ್ನು ಸಣ್ಣ ಪ್ರಮಾಣದಲ್ಲಿ ತಯಾರು ಮಾಡತಕ್ಕ ಕೈಗಾರಿಕೆಗಳು ಏನು ಇದ್ದವು ಗುಡಿ ಕೈಗಾರಿಕೆಗಳು ಏನು ಇದ್ದವು, ನಮ್ಮ ಗ್ರಾಮ ರಾಜ್ಯ ಎಂದು ಹಿಂದೆ ನಮ್ಮ ಬಾಪೂಜಿಯವರು ಏನು ಕನಸು ಕಂಡಿದ್ದರು, ಅಂತಹ ಇಂಡಿಜಿನಸ್ ಪ್ರಾಡಕ್ಟ್‌ಗಳನ್ನು ತಯಾರು ಮಾಡತಕ್ಕ ಸಣ್ಣ ಪ್ರಮಾಣದ ಗುಡಿ ಕೈಗಾರಿಕೆಗಳು ಹೆಚ್ಚಬೇಕು.

ಉದಾಹರಣೆಗೆ ನೂಲು ತೆಗೆಯತಕ್ಕಂಥ ಗಿರಣಿಗಳು, ಕಾಯರ್ ಅಥವಾ ತೆಂಗಿನ ನಾರಿನಲ್ಲಿ ಮಾಡತಕ್ಕಂಥ ಉಪಯೋಗಿ ವಸ್ತುಗಳು ಹಾಗೂ ಸಾಬೂನು ತಯಾರಿಕೆಗಳು, ಇನ್ನಿತರ ಸಣ್ಣಪುಟ್ಟ ಉದ್ದಿಮೆಗಳು, ಅದರಲ್ಲೂ ರೇಷ್ಮೆ ಉದ್ಯಮ ಏನಿದೆ, ಇದು ಕೃಷಿಯೂ ಹೌದು, ವಿಜ್ಞಾನವೂ ಹೌದು, ಇದನ್ನೂ ಕೂಡ ಅಂದರೆ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಆಗಿ ಆಯಾ ಗ್ರಾಮಾಂತರ ಪ್ರದೇಶದಲ್ಲಿ ಪ್ರಾರಂಭ ಮಾಡತಕ್ಕಂಥಕ್ಕೆ ಅವಕಾಶಗಳಿವೆ. ಸರ್ಕಾರ ಇದಕ್ಕೆ ಹೆಚ್ಚಿನ ಒತ್ತನ್ನು, ಪ್ರೋತ್ಸಾಹ ಧನ, ಪ್ರೋತ್ಸಾಹ ತರಬೇತಿ ಮುಂತಾದ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಈ ದಿಸೆಯಲ್ಲಿ ಒಂದು ಸ್ವರೂಪವನ್ನೇ ಬದಲಾಯಿಸತಕ್ಕಂಥ ಪರಿಣಾಮಕಾರಿಯಾದ ರೂಪುರೇಷೆಗಳನ್ನು ಅಥವಾ ಯೋಜನೆಗಳನ್ನು ಹಾಕಿಕೊಳ್ಳುವುದರಲ್ಲಿ ಸಂಬಂಧಪಟ್ಟ ಇಲಾಖೆ ಗಮನಹರಿಸುತ್ತದೆ ಎನ್ನುವ ಭರವಸೆಯಿಂದ ನಾನಾದರೂ ಈ ಮಾತನ್ನು ಹೇಳುತ್ತಾ ಇದ್ದೇನೆ. ರೇಷ್ಮೆ ಇಲಾಖೆ ಬಗ್ಗೆ ಈಗಾಗಲೇ ನಮ್ಮ ಹಿರಿಯ ಸಹೋದ್ಯೋಗಿಗಳು ಹಾಗೂ ವಿರೋಧಪಕ್ಷದ ಉಪನಾಯಕರು ಮಾತನಾಡಿದ್ದಾರೆ. ನಮ್ಮ ಕನ್ನಡ ನಾಡು ಚಿನ್ನದ ಗಣಿ, ರೇಷ್ಮೆನಾಡು, ಶ್ರೀಗಂಧದ ಬೀಡು ಎಂಬ ಹೆಸರನ್ನು ಪಡೆದಿದೆ. ಇಡೀ ಕರ್ನಾಟಕ ರಾಜ್ಯ ರೇಷ್ಮೆ ಉತ್ಪಾದನೆಯಲ್ಲಿ ನಮ್ಮ ರಾಷ್ಟ್ರದಲ್ಲೇ ಪ್ರಥಮ ಸ್ಥಾನದಲ್ಲಿದೆ. ಹಾಗೂ ಅಂತರರಾಷ್ಟ್ರೀಯ ಮಟ್ಟವನ್ನು ಮುಟ್ಟಲು ಸಾಕಷ್ಟು ಪ್ರಯತ್ನವನ್ನು ನಡೆಸುತ್ತಾ ಇದ್ದಾರೆ. ವಿಶ್ವಬ್ಯಾಂಕಿನ ಯೋಜನೆಯಲ್ಲಿ ನಮಗೆ ಸಾಕಷ್ಟು ಸಹಾಯಧನ ದೊರೆತಿದೆ. ಇಂಥಾದ್ದರಲ್ಲೂ ಸಹ ೧೯೬೯-೭೦ರಲ್ಲಿ ರೇಷ್ಮೆ ಇಲಾಖೆಯ ಅಂದಾಜು ಬಜೆಟ್ ಸುಮಾರು ೧೪ ಲಕ್ಷ ಇದ್ದದ್ದು ಇವತ್ತಿನದಿವಸ ೩೦-೩೫ ಕೋಟಿಗಳವರೆಗೆ ಏರಿದೆ ಅಂದರೆ ಈ ಇಲಾಖೆ ಎಷ್ಟು ಬೃಹತ್ ಆಗಿ ಬೆಳೆದಿದೆ, ಇಲಾಖೆಯ ವ್ಯಾಪ್ತಿ ಮತ್ತು ಕರ್ತವ್ಯಗಳು ಎಷ್ಟು ಹೆಚ್ಚಿದೆ ಎನ್ನುವುದನ್ನು ಅದರ ಕಾರ್ಯವ್ಯಾಪ್ತಿಯಿಂದ ನಾವು ಗಮನಿಸಬಹುದು. ಆದರೆ ಈ ಇಲಾಖೆ ಮಾತ್ರ ಈಗಲೂ ಕೂಡ ಮೇಜರ್ ಇಂಡಸ್ಟ್ರೀಸ್ ಅಂದರೆ ದೊಡ್ಡ ಪ್ರಮಾಣದ ಕೈಗಾರಿಕೆಗಳ ಜೊತೆಯಲ್ಲಿದೆ. ಹಿಂದೆ ನಾನು ಕೆಲವು ತಿಂಗಳ ಕಾಲ ಸಚಿವೆಯಾಗಿ ಕೆಲಸ ಮಾಡತಕ್ಕಂಥ ಅವಕಾಶ ದೊರೆತಾಗ ನಾನು ಇದನ್ನು ಗಮನಿಸಿ ಸಾಕಷ್ಟು ಒತ್ತುಕೊಟ್ಟು ಈ ಮೇಜರ್ ಇಂಡಸ್ಟ್ರೀಸ್, ಸಿಕ್ ಇಂಡಸ್ಟ್ರೀಸ್‌ಗಳು ಸರ್ಕಾರದ ದೊಡ್ಡ ದೊಡ್ಡ ಉದ್ದಿಮೆಗಳು, ಸ್ಟೀಲ್ ಇಂಡಸ್ಟ್ರೀಸ್, ಪೇಪರ್ ಇಂಡಸ್ಟ್ರೀಸ್ ಮುಂತಾದ ಇಂಡಸ್ಟ್ರೀಸ್‌ನಿಂದ ಇದನ್ನು ಹೊರತಾಪಡಿಸಬೇಕು. ಕೃಷಿ ಮತ್ತು ವಿಜ್ಞಾನಕ್ಕೆ ಒಂದು ಇಲಾಖೆ ಇದೆ. ಅದೇರೀತಿಯಲ್ಲಿ ರೇಷ್ಮೆ ಇಲಾಖೆ ಅಂದರೆ ರೇಷ್ಮೆ ಕೃಷಿ ಮತ್ತು ವಿಜ್ಞಾನ, ಸಿರಿಕಲ್ಚರ್ ಸೈನ್ಸ್ ಅಂಡ್ ಟೆಕ್ನಾಲಜಿಯನ್ನಾಗಿ ಮಾಡಬೇಕು ಎಂದು ನಾನು ಒತ್ತಡಪೂರ್ವಕವಾಗಿ ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಇಲಾಖಾ ಮಂತ್ರಿಗಳಿಗೆ ಮನವಿ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ಅವರು ಸೂಕ್ತರೀತಿಯಲ್ಲಿ ಮೇಲ್ಮಟ್ಟದಲ್ಲಿ ಮತ್ತು ಸಚಿವ ಸಂಪುಟದ ದರ್ಜೆಯಲ್ಲಿ ತೆಗೆದುಕೊಂಡು ಈ ಇಲಾಖೆಯನ್ನು ಬೇರ್ಪಡಿಸಿ ಇನ್ನೂ ಹೆಚ್ಚಿಗೆ ಉತ್ತಮಪಡಿಸಬೇಕು ಎಂದು ಹೇಳುತ್ತೇನೆ. ಉದಾಹರಣೆಗೆ ಹೇಳುವುದಾದರೆ, ಚಾಕಿ ಸೆಂಟರ್ಸ್ ಇವೆ. ಪಿ ಎಸ್.ಓ.ಗಳು ಇವೆ. ಸಾಮಾನ್ಯವಾದಂಥ ಬಳಕೆ ವಸ್ತುಗಳಾದ ಮರಮುಟ್ಟುಗಳು ಸಾಮಗ್ರಿಗಳನ್ನು ಕೊಂಡುಕೊಳ್ಳುವುದಕ್ಕೂ ಕೂಡ ಎಸ್‌ಟಿಡಿಗೆ ಹೋಗಿ, ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿಗೆ ಹೋಗಿ ಮತ್ತೊಮ್ಮೆ ಸುತ್ತಿ ಬಳಸಿ ಬರುವುದಕ್ಕೆ ಸುಮಾರು ವರ್ಷಗಳ ಕಾಲ ಹಿಡಿಯುತ್ತದೆ. ಇದನ್ನು ನಾನು ಸಾಕಷ್ಟು ಸ್ವಂತ ಅನುಭವದಿಂದ ಹೇಳುತ್ತಾ ಇದ್ದೇನೆ. ಅದು ಅಷ್ಟು ಬಳಸುವುದು ಬೇಕಾಗಿಲ್ಲ. ಏಕೆಂದರೆ ಪ್ರತಿನಿತ್ಯ ಆಗಬೇಕಾದಂಥ ಕೆಲಸಗಳಿಗೆ ಅಲ್ಲಿ ನಿತ್ಯೋಪಯೋಗಿ ವಸ್ತುಗಳನ್ನು ತಕ್ಷಣದಲ್ಲೇ ನಾವು ಪಡೆಯಬೇಕಾಗುತ್ತದೆ. ಚಾಕಿ ಸೆಂಟರ್ಸ್ ವರ್ಕ್ ಮಾಡಬೇಕಾಗುತ್ತದೆ, ಗ್ರೈನೇಜ್ ವರ್ಕ್ ಮಾಡಬೇಕಾಗುತ್ತದೆ. ಜನಗಳಿಗೆ ತತ್ಕಾಲದಲ್ಲೇ ಮೊಟ್ಟೆ ಮರಿಗಳ ವಿತರಣೆ ಆಗಬೇಕಾಗುತ್ತದೆ, ಈ

ಸಂದರ್ಭದಲ್ಲಿ ಪ್ರತಿಯೊಂದಕ್ಕೂ ಮೇಜರ್ ಇಂಡಸ್ಟ್ರೀಸ್ ಇಲಾಖೆಗೆ ಕೈಗಾರಿಕಾ ಇಲಾಖೆಗೆ ಹೋಗಿ ಬರುವುದು ಅಂದರೆ ಬಹಳ ಶ್ರಮದ ಕೆಲಸ, ಬಹಳ ವಿಳಂಬ ನೀತಿಯನ್ನು ಇದರಲ್ಲಿ ಅನುಸರಿಸಲಾಗುತ್ತದೆ. ಇದನ್ನು ದೂರೀಕರಿಸಬೇಕಾದರೆ ಇದನ್ನು ಹೊರತುಪಡಿಸಬೇಕಾದರೆ ಈ ಇಲಾಖೆಯನ್ನು ಬೇರ್ಪಡಿಸತಕ್ಕದ್ದು ಉತ್ತಮವಾದ ಕೆಲಸ ಎಂದು ನಾನಾದರೂ ಅಂದುಕೊಂಡಿದ್ದೇನೆ. ಮತ್ತು ಮೊಟ್ಟೆ ವಿತರಣೆ ಬಗ್ಗೆ ಈಗಾಗಲೇ ನಮ್ಮ ಮಾನ್ಯ ಸದಸ್ಯರು ಹೇಳಿದರು ರೈತನ ದರ್ಜೆ ಯಾವಾಗ ಉತ್ತಮಗೊಳ್ಳುತ್ತದೊ, ಅವನ ಮಟ್ಟ ಯಾವಾಗ ಉತ್ತಮಗೊಳ್ಳುತ್ತದೊ ಆಗ ಈ ಮೊಟ್ಟೆಮಟ್ಟ ಕೂಡ ಉತ್ತಮಗೊಳ್ಳುವುದಕ್ಕೆ ಆಗುತ್ತದೆ. ನಮ್ಮಲ್ಲಿ ನೀರಾವರಿ ಪ್ರದೇಶಕ್ಕಿಂತ ಮಳೆ ಆಧಾರಿತ ಬೇಸಾಯ ಪ್ರದೇಶವೇ ಜಾಸ್ತಿ ಇರುವುದರಿಂದ ನಮ್ಮ ರಾಜ್ಯದಲ್ಲಿ ಹಳೆಯ ಮೈಸೂರು ಜಿಲ್ಲೆಯಲ್ಲಿ ಹಳೇ ಸಂಪ್ರದಾಯದ ರೀತಿಯಲ್ಲಿ ಈ ಬೆಳೆಯನ್ನು ಬೆಳೆಯುತ್ತಾ ಇದ್ದಾರೆ. ಅವರಿಗೆ ಸರಿಯಾದ ರೀತಿಯಲ್ಲಿ ತರಬೇತಿ ಕೊಡಬೇಕಾಗುತ್ತದೆ. ಎಕ್ಸ್‌ಟೆನ್‌ಷನ್ ಆಫೀಸರ್ಸ್ ಒಳ್ಳೆಯ ಕೆಲಸಗಳನ್ನು ಮಾಡಬೇಕಾಗುತ್ತದೆ. ಹಾಗೂ ಚಾಕಿ ಸಾಕಾಣಿಕೆ ಕೇಂದ್ರಗಳಲ್ಲಿ ಯಾವರೀತಿ ಅದನ್ನು ಸಾಕಬೇಕು, ವೈಜ್ಞಾನಿಕ ರೀತಿಯಲ್ಲಿ ಒಳ್ಳೆಯ ವಾತಾವರಣದಲ್ಲಿ ಇಟ್ಟು ಬೆಳೆಸಬೇಕು ಎನ್ನುವುದರ ಬಗ್ಗೆ ತರಬೇತಿ ಕೊಡಬೇಕಾಗುತ್ತದೆ. ಇದಕ್ಕೆ ಹಳೆಯ ತಲೆಮಾರಿನವರನ್ನು ಆರಿಸಿಕೊಳ್ಳುವುದಕ್ಕಿಂತಲೂ ಹೊಸ ತಲೆಮಾರಿನವರನ್ನು ಅಂದರೆ ರೈತರ ಮಕ್ಕಳನ್ನು ಅಂದರೆ ಎಸ್‌ಎಸ್‌ಎಲ್‌ಸಿ ಅಥವಾ ದೊಡ್ಡ ಪತ್ಯದ ಅವಶ್ಯಕತೆಯಿಲ್ಲ, ಅಲ್ಲಲ್ಲಿ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿ ಅವರಿಗೆ ತರಬೇತಿ ಕೊಡುವುದರಿಂದ ಹೊಸದಾಗಿ ರೈತರು ಇದನ್ನು ತೆಗೆದುಕೊಳ್ಳುವುದಕ್ಕೆ ಮತ್ತು ರೈತರ ಮಕ್ಕಳು ಇದರ ಬಗ್ಗೆ ತರಬೇತಿ ಮತ್ತು ಮಾಹಿತಿಯನ್ನು ಪಡೆಯುವುದಕ್ಕೆ ಅವಕಾಶವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಚಾಕಿ ಸಾಕಾಣಿಕೆ ಕೇಂದ್ರಗಳನ್ನು ವಾಲಂಟರಿ ಆರ್ಗನೈಜೇಷನ್ಸ್, ಮಹಿಳಾ ಸಮಾಜಗಳು, ಯುವಕ ಕೇಂದ್ರಗಳು, ಇಂಥವರಿಗೆ ವಹಿಸಿಕೊಡತಕ್ಕ ಒಂದು ಅಭಿಪ್ರಾಯ ಇದೆಯೆಂದು ಮಾನ್ಯ ಸಚಿವರು ಒಂದು ಸಂದರ್ಭದಲ್ಲಿ ಹೇಳುತ್ತಿದ್ದರು. ಇದು ಒಳ್ಳೆಯ ಸೂಚನೆಯಾದರೂ ಕೂಡ ಅದಕ್ಕೆ ತಕ್ಕಂತೆ ತರಬೇತಿ ಅವರಲ್ಲಿ ಇಲ್ಲದೇ ಹೋದರೆ, ಇದನ್ನು ನಡೆಸಿಕೊಂಡು ಹೋಗುವುದಕ್ಕೆ ಕಷ್ಟವಾಗುತ್ತದೆ. ಮತ್ತೆ ಮೊಟ್ಟೆ ವಿತರಣೆ, ಅದರ ಗುಣಮಟ್ಟದ ಬಗ್ಗೆ ದೊಡ್ಡ ಅಡಚಣೆ ಬರುತ್ತದೆ. ಆದ್ದರಿಂದ ಇದನ್ನು ಕೈಗೆತ್ತಿಕೊಳ್ಳುವುದಕ್ಕೆ ಮೊದಲು ಈ ತರಬೇತಿ ಕೇಂದ್ರಗಳನ್ನು ಹೆಚ್ಚು ಸ್ಥಾಪಿಸಬೇಕೆಂದು ಹೇಳುತ್ತೇನೆ. ಇದು ಗುಡಿಕೈಗಾರಿಕೆಯೂ ಹೌದು, ಉದ್ದಿಮೆಯೂ ಹೌದು ವಿಜ್ಞಾನವೂ ಹೌದು. ಸುಮಾರು ಎರಡೂವರೆ ಲಕ್ಷ ರೈತ ಕುಟುಂಬಗಳನ್ನು ಒಳಗೊಂಡಂಥ ಬೆಳೆಗಾರರನ್ನು ಒಳಗೊಂಡಂಥ ೮–೧೦ ಸಾವಿರ ರೀಲರುಗಳನ್ನು ಒಳಗೊಂಡಥ ೬–೭ ಸಾವಿರ ವೀವರ್‌ಗಳನ್ನು ಒಳಗೊಂಡಂಥ ಬೃಹತ್ ಉದ್ದಿಮೆಯಾಗಿದೆ. ಇದು ಒಂದಕ್ಕೊಂದು ಬಹಳ ಅನ್ಯೋನ್ಯವಾದ ಮತ್ತು ವಿಭಜನೆ ಮಾಡಲಾಗದಂಥ ಸಂಬಂಧ ಇದೆ. ಇವರನ್ನು ಪರಸ್ಪರ ಅನ್ಯೋನ್ಯವಾಗಿ ಪೂರಕವಾಗಿ ಕೆಲಸಗಳನ್ನು ನಿರ್ವಹಿಸಬೇಕಾದರೆ, ಈ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಒಂದೊಂದು ವಿಷಯದ ಬಗ್ಗೆಯೂ ಪ್ರತಿಯೊಬ್ಬರಿಗೂ ಮಾಹಿತಿ ಬೇಕಾಗುತ್ತದೆ. ರೈತರು ಗೂಡು ಏನು ತರುತ್ತಾರೆ, ಅದು ಚೆನ್ನಾಗಿರಬೇಕಾದರೆ, ಉತ್ಕೃಷ್ಟವಾದ ಬೆಳೆಬರಬೇಕಾದರೆ ಅದರ ಗುಣಮಟ್ಟ ಹೆಚ್ಚಬೇಕಾದರೆ, ನೀರಾವರಿ ಪ್ರದೇಶ ಇರಬೇಕಾಗುತ್ತದೆ. ರೈತರು ಒಳ್ಳೆಯ ಸೊಪ್ಪನ್ನು ಬೆಳೆಯಬೇಕಾಗುತ್ತದೆ. ರೇಷ್ಮೆ ಸೊಪ್ಪನ್ನು ಬೆಳೆದ ಮೇಲೆ, ಒಳ್ಳೆಯ ಮೊಟ್ಟೆಗಳ ಸೌಕರ್ಯ ಸಿಗಬೇಕಾಗುತ್ತದೆ. ಇದಾದ ಮೇಲೆ ಒಳ್ಳೆಯ ಮೊಟ್ಟೆಗಳನ್ನು ಒದಗಿಸಿದರೆ, ರೈತರು ವಿತರಣೆಗಾಗಿ ಗೂಡುಗಳನ್ನು ಮಾರ್ಕೆಟ್ಟಿಗೆ ತರುತ್ತಾರೆ. ಮಾರುಕಟ್ಟೆಯಲ್ಲಿ ಗೂಡುಗಳನ್ನು ಕೊಳ್ಳುವವರು ರೀಲರ್ಸ್ ಕೆಲವುಕಡೆ ಇವರದ್ದು ಮನಾಪಲಿ ನಡೆಯುತ್ತಿದೆ. ರೈತರು ಮಾರುಕಟ್ಟೆಗೆ ತಂದ ಗೂಡುಗಳನ್ನು ೨–೩ ದಿವಸ ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಹಾಗೆ ಇಟ್ಟುಕೊಂಡರೆ ಚಿಟ್ಟೆಗಳು ಹೊರಗೆ ಬರುತ್ತವೆ. ರೈತರು ಕಾಯದೇ ಸಿಕ್ಕಿದ ರೇಟಿಗೆ ಗೂಡುಗಳನ್ನು ಮಾರಾಟ ಮಾಡಿಕೊಂಡು ಹೋಗುವಂಥ ಪರಿಸ್ಥಿತಿ ಕೂಡ ಇದೆ. ರೀಲರುಗಳಿಗೂ ಕೂಡ ಅವರದ್ದೇ ಆದಂಥ ತೊಂದರೆಗಳಿದೆಯೆಂದು ಹೇಳುತ್ತಿದ್ದಾರೆ. ನಾನು ಕೂಡ ವಿಜಯಪುರ, ಶಿಡ್ಲಘಟ್ಟ ಕಡೆ ಹೋದಾಗ ನೋಡಿದ್ದೇನೆ. ಅವರೂ ಕೂಡ ಅನೇಕ ರೀತಿಯಲ್ಲಿ ಟ್ಯಾಕ್ಸ್ ಕಟ್ಟಬೇಕಾದ ತೊಂದರೆ ಇದೆ ಎಂದು ಹೇಳಿದ್ದಾರೆ. ಸೌದೆ ಮತ್ತು ಇಂಧನದ ತೊಂದರೆ ಇದೆ ಎಂದು ಕೂಡ ಹೇಳಿದ್ದಾರೆ. ಈಗಿನ ಅಭ್ಯಾಸಗಳನ್ನು ನವೀಕರಣಗೊಳಿಸಬೇಕಾಗುತ್ತದೆ ಟ್ಯಾಕ್ಸ್‌ನ್ನು ಕೂಡ ಕಡಿಮೆಮಾಡಬೇಕಾಗುತ್ತದೆ. ಪರಸ್ಪರ ಇದೆಲ್ಲಾ ಪೂರಕವಾಗಿ ಜ್ಞಾನವನ್ನು ಹೆಚ್ಚಿಸುವುದರಿಂದ ಈ ಕೆಲಸ ಆಗುತ್ತದೆ. ರೀಲಿಂಗ್ ಟ್ರೈನಿಂಗ್ ಸೆಂಟರುಗಳನ್ನು ಹೆಚ್ಚು ಮಾಡಬೇಕಾದುದು ಅವಶ್ಯಕವಾಗಿ ಆಗಬೇಕಾಗಿದೆ. ರಾಮನಗರದಲ್ಲಿ ಅತಿ ದೊಡ್ಡ ಮಾರುಕಟ್ಟೆ ಇದೆ. ಅಲ್ಲಿ ಒಂದು ರೀಲಿಂಗ್ ಟ್ರೈನಿಂಗ್ ಸೆಂಟರ್ ಮಾಡಬೇಕೆಂಬ ಪ್ರಸ್ತಾಪ ಹಿಂದೆ ಇತ್ತು. ಅದು ಎಲ್ಲಿಯವರೆಗೆ ಬಂದಿದೆಯೋ

ಗೊತ್ತಿಲ್ಲ. ಮತ್ತೆ ರೇಷ್ಮೆ ಕೃಷಿಕರ ಭವನ ಕಟ್ಟಬೇಕೆನ್ನುವ ಪ್ರಸ್ತಾವವೂ ಕೂಡ ಇತ್ತು. ಇದರ ಬಗ್ಗೆ ಕೂಡ ಮಾನ್ಯ ಸಚಿವರು ಕ್ರಮಕೈಗೊಳ್ಳಬೇಕೆಂದು ಹೇಳುತ್ತೇನೆ. ಇತ್ತೀಚಿನ ದಿನಗಳಲ್ಲಿ ರೇಷ್ಮೆ ಬೆಳೆಯನ್ನು ಹೊಸ ಹೊಸ ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದೆ, ಅದು ಶಿವಮೊಗ್ಗ, ಬೀದರ್ ಹಾಗೂ ರಾಯಚೂರು ವಿಭಾಗಗಳಿರಬಹುದು. ಅಲ್ಲಿ ಉತ್ತಮವಾದಂಥ ಒಳ್ಳೆಯ ಗುಣ ಮಟ್ಟದ ಬೆಳೆಯನ್ನು ಬೆಳೆಯುತ್ತಿದ್ದಾರೆ. ಅಲ್ಲಿ ಪರಿಸರವನ್ನು ಶುದ್ಧವಾಗಿಟ್ಟುಕೊಂಡು ವೈಜ್ಞಾನಿಕ ರೀತಿಯಲ್ಲಿ, ಒಳ್ಳೆಯ ತರಬೇತಿಯನ್ನು ಪಡೆದುಕೊಂಡು ರೇಷ್ಮೆ ಬೆಳೆಯನ್ನು ಬೆಳೆಯುತ್ತಿದ್ದಾರೆ. ಆದರೆ ನಮ್ಮ ಭಾಗಗಳಲ್ಲಿ ಹಳೆಯ ಸಂಪ್ರದಾಯದಂತೆ, ಓಬಿರಾಯನ ಕಾಲದ ಪದ್ಧತಿಗಳನ್ನು ಅನುಸರಿಸಿ ಬೆಳೆ ಬೆಳೆಯುತ್ತಿದ್ದಾರೆ. ಇದನ್ನು ಒಂದೇ ಸಾರಿ ಮಾರ್ಪಾಡು ಮಾಡುವುದಕ್ಕೆ ಆಗುವುದಿಲ್ಲ. ಕಾಲಕ್ರಮೇಣ ಹಂತಹಂತವಾಗಿ ಮಾಡುವುದಕ್ಕೆ ಸರ್ಕಾರದವರು ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ವಿಶ್ವಬ್ಯಾಂಕ್‌ನಿಂದ ದೊರೆಯುವಂಥ ಯೋಜನೆಯ ಲಾಭವನ್ನು ಸಂಪೂರ್ಣವಾಗಿ, ಯಶಸ್ವಿಯಾಗಿ ಉಪಯೋಗಿಸಿಕೊಂಡು, ಸೂಕ್ತ ರೂಪುರೇಷೆಗಳನ್ನು ತಯಾರಿಸಿ ಅವುಗಳನ್ನು ಜಾರಿಗೆ ತರಬೇಕೆಂದು ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ. ಮತ್ತೆ ಇದಕ್ಕಾಗಿ ಒಂದು ಉನ್ನತಮಟ್ಟದ ಸಮಿತಿಯನ್ನು ರಚನೆ ಮಾಡಬೇಕು ಹಾಗೂ ಈ ಒಂದು ಉದ್ದಿಮೆಯಲ್ಲಿ ಬರತಕ್ಕ ಸಮಸ್ಯೆಗಳು ಏನಿವೆ, ಅವುಗಳನ್ನು ಪರಿಹರಿಸುವುದಕ್ಕೆ, ವಿವಿಧ ಅಂಗಸಂಸ್ಥೆಗಳಲ್ಲಿರತಕ್ಕ ನ್ಯೂನತೆಗಳನ್ನು ತಿಳಿದುಕೊಂಡು ಅವುಗಳನ್ನು ಪರಿಹಾರ ಮಾಡುವುದಕ್ಕೆ ಸೂಕ್ತ ಕ್ರಮಕೈಗೊಳ್ಳಬೇಕೆಂದು ವಿನಂತಿಸಿಕೊಂಡು, ಮಾನ್ಯ ಉಪಾಧ್ಯಕ್ಷಿಣಿಯವರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ ಮಾತನ್ನು ಮುಗಿಸುತ್ತೇನೆ.

† SRI QAMARUL ISLAM (Gulbarga).—Madam Deputy Speaker, I know there are number of demands before this House to discuss and I cannot just do justice with almost all the demands and my colleagues who have participated have spoken on various demands but Iwant to do justice by speaking only on Wakf demand. Nobody had spoken till now on Wakf demand.

As far as Wakf portfolio is concerned, this is a very important portfolio for the minorities and muslims and under the Wakf Act, almost all the religious Muslim institutions are managed, controlled and protected by the Wakf Board. The Wakf Board is constituted under the Wakf Act by way of nominations of the Wakf members into the Board The Wakf Board is responsible for the supervision and the administration, protection and the development of the Wakf property. Now, there are 20,727 Wakf institutions in Karnataka as per the annual report. The main source for the Wakf Board is 6% Wakf contribution from the institutions which are having an income of more than Rs 100/-. Here the report says that Rs. 67 lakhs and odd is the balance which has not been collectd from the Wakf institutions. It means, the Board is utterly failed to collect 6% revenue which is the main source of income for the Wakf Board from the wakf institutions. Why the Board has become a failure ? In this connection, I wanted to quote certain examples. In the Board, there are certain members who are having vested interest. The Board instead of public-oriented, has become Mutvali-oriented and the persons who are Administrators are Muthvallies of big institutions which are having income more than lakhs of rupees. They have become the Board Members and once they are board members, they are not ready to give the wakf contribution. For example, in Gulbarga, and in the entire South

India, Dharga Khaja Nawab is the biggest institutions. They have taken up lot of developmental works. If you go on the main road, there is a very big Khaja Nagari where about 60-70 shops have come and each shop is having more than Rs. 100/-rent per month, and for this Khaja Nagari Project, we got loans from the central Wakf Board i.e., about Rs. 48 lakhs and money was released and the construction has come up during the last 6-7 years. Now they are colleeting the rent ut of it The purpose of giving loan to this project is that the wakf property should be developed and wakf property income should be improved and when once the income if generated, then naturally the wakf contribution i.e., 6% under the Wakf Act will come to the Wakf Board. The idea is that the Board should get some income. Now what is happening? The Muthvalli of that Dharga Sheriff is a Member of the Board and I want to ask the Hon'ble Minister, is it not sufficient to show that the Board has failed in its duties Madam, not a single paise has been given out of Rs. 67-68 lakhs. You say more than lakhs of rupees of arrears there, i.e., as per your annual report. In that one institution, you have not collected the arrears. In this Dharga Sherieff, the arrears were not collected because the Muthvalli is a Member and the Board has to yield to the vested interest. The Members and the Chairman when they go to Dharga Sheriff the Muthvalli will give them a beautiful Hyderabad style dishes, a dinner and lunches and the Chairman and Members enjoy his food.

As a Member we are responsible here in this Legislative Assembly because the people have elected us. The Hon'ble Minister is a Muslim and I am also a Muslim. This Wakf property is a property of Allah and we are not only anserable here but we are answerable before the Almighty. I wanted to remaind the Hon'ble Minister about that responsibility. As a Minister of Wakf, you must remember that responsibility and can this Government take action or take steps? Many times, what has happened? The Government appointed a Commission to enquire about it. I am sorry to say a few things. Mr. Ramakrishna Hegde was in power, there were two Commissions. One Commission was there and he resigned. When the Commission was formed to enquire into Dharga Sheriff, there was a hue and cry that there is a Commission against Muthvalli, and the hon'ble Chief Minister at that time drooped that commission. What was happened again is that these new ministry came and this hon'ble Minister Mr. Azeez Sait also he just appointed a committee in which the chairman was a member elected from the Gulbarga city, that is Qamarul Islam, who was made the Chairman of that committee of the Khaja Nagari and dealing with the construction of that there was a representation, there was telegram that vested interests was there. The hon'ble Chief Minister Veerendra Patil he has with-held that committee and this

Government is not having that courage to give representation and to make the elected member to enquire the matter and to deal with the matter. That property is not the property of one person. That is the property of Almighty Allah and that property is to be managed under the Wakf Act by Karnataka Wakf Board and this Wakf Board is not at all functioning properly. Lot of politics is there because, you see, when the Government changed, Governors have been changed and there was a pressure automatically and Governors have also changed. But this Wakf Board which was appointed by the previous Government is still continuing. I wanted to know, Sir, honestly you tell me, are you having control over this

5-15 P. M.

Board being a Minister This Board says "we are autonomous". Whatever your directions are there, the Board is not fulfilling. Because that Board says "we have been appointed and we are members of the previous Government" At the same time, what is the attitude of the Government ? This Government when it came in power, about the previous Government there was a criticism that Ramakrishna Hegde Government has not given money and they are not looking after the interests of the minorities, minority institutions, wakf properties and all that. I am one of the critics. But say, Sir, honestly because now I am in this House. But the fact is this Government's attitude towards the Wakf and Muslim properties is worse than the previous Government I must at least appreciate that the previous Government if you go through the annual report they have given sixty lakhs towards the grant-in-aid of the wakf institutions and 40 lakhs towards maintenance of wakf Board. Sir, on 31st March how much money was released ? Only 40 lakhs was released and under the maintenance only 30 lakhs released. 30 lakhs which was the original sanction of the previous Government, this Government has not released. When you have taken charge you became cabinet Minister, the people were thinking that Veerendra Patil Sarkaar will do justice with the minorities but the attitude of Veerendra Patil Sarkaar is eventhough the original sanctioned amount which was not released properly, this Government at least we were thinking that one crore will be allotted as far as the grant-in-aid of the Wakf institutions and 50 lakhs towards maintenance. But this Government has not allotted atleast 60 lakhs and 40 lakhs what the previous Government has done this Government has allotted only 50 lakhs towards grant-in-aid and 40 lakhs and again 10 lakhs was not allotted. Is it the way of saying that this Government is having only lip sympathy. I have gone through almost all the demands, and not a single demand, whether it is Urdu academy, Wakf Board or Minority Development Corporation, is not met with. Mr. Veerandra Patil Sarkaar is having only lip

sympathy towards minority. Actually, in practical they are not having any sympathy towards the minority institutions. This I have to say in this House. Sir, if you wanted that Board is to be actually function properly then there are about 21 Wakf officers to be promoted. If you promote the 21 wakf officers who will be in charge of the district Wakf Committees at the district level the financial commitment will be only sixty thousand per annum, that comes five thousand if you just give an increase in their scale and if you promote them as wakf Officers, because no district is having wakf officers now. There are about 20 districts wakf committees and only Inspector cum Auditors are there. They are just insufficient to do the work. So, I wanted that the promotion which is pending for the wakf officers has to be immediately taken up. Secondly in the wakf board, on the line of Khadi and Village Board the pensionery benefits to be given. There should be some attraction. When Mr. Azeez Sait was the minister and I was an MLA I demanded that the Government scale should be given to the wakf employees otherwise what was happening previously, that old scale of 200 and 100 which is used to be given and old people were maintaining the records. Records were not maintained properly. After the Government appointment and pay scale has been given, new comers have come and young generation has come and this Board has become a little systematic. There is a proposal pending in the Wakf Board also regarding pensionery benefits on line with the Khadi and village Board. Also the previous Government has sanctioned pension to the poojaris and it is also pending in the Board and it is a long pending demand of the muslims. You are giving some money for th construction of the mosque and construction of madarsa in the villages what is happening actually is, there is no Peshamams and there is Mouzamams because the villages are not having that much amount to contribute and to give to the Peshamams and Mouzamams. And in the Kerala State and in the Tamil Nadu State the pensions are being given to peshamams and mouzamams. The previous Government has given pension to poojaris. I wanted that the pensions to the peshamams and mouzamams should also be given by this Government.

SRI S. M. YAHYA (Minister for Wakfs).—Do you want nationalisation ?.

SRI QAMARUL ISLAM.—No question of nationalisation. This is the wakf amount which we are getting. We wanted that this six per cent which is coming, should be distributed to the peshamams and imams. When you are giving money for the construction of the mosque whether the mosque is nationalised ? When you are giving money for the construction of the mandirs and all whether the Mandirs are nationalised ? I don't think by giving pension any institution can be nationalised, any religious institution can

be nationalised. Sir, I came to know that in Gulbarga the Dargah of Hazarat Khaja Bande Nawaz is the biggest shrine and it is the biggest dargah of the South. Sir, for Ajmer Sharif Dargah there is a separate Act and for the Dargah of Hazrat Nizamuddin Aulia at New Delhi there is a separate Act. I came to know that there is a proposal or there was a proposal when you were not the minister and when Mr Azeez Sait was the minister that the Government is also thinking of bringing an Act for the maintenance of the properties of the Dargah of Hazrat Khaja Bande Nawaz. It has the property of crores and one man is enjoying the rights and one man is enjoying the whole amount. He says that he is hereditery.

But the rights of other hereditary Mujawars and others have been taken off, I wanted a categorical reply from the Hon. Minister as to whether the Government is having any intention of taking action against them or the Government is still afraid of certain Saintly people appeared to be so but inside there are cases of 420 against such Mutavalis. I can give case numbers also.

SRI S. M. YAHYA.—We have all reverence for all religious people. We have tremendous reverence for Bande Nawaz Dargah also. I do not want to deal with it. But as for your suggestion that just like Ajmer, there should a separate Act to manage the Bande Nawaz Darga, I must say that the Karnatak has adopted and accepted the Central Wakf Act, 1954. Whereas in Ajmer, the difficulty is that the Wakf Act, the U.P. Government has not accepted. Therefore, in case of Karnataka and other states, they governed by Wakf Act of 1954. Whereas in U.P., Wakf Act is not there and they have the problems of managing and supervising of various institutions including Ajmer Dargah Sharif. They have a separate Act but we are not thinking of having any such Act in Karnataka.

SRI QUMARUL ISLAM,—Sir, in U.P. there is Wakf Act but excluding the Darga Hajrath Ajmer-E-Sharif Its properties are managed by separate Act. I am hones ly speaking Sir that when the Inspector-cum-Auditor goes to ask for arrears, he is not dare enough since he is afraid of Administrator or sajada of that property. I cannot become sajada or you cannot become sajada. You have faith in the Aulegram. I have also faith in Aulegram However, I am talking about the administrator of that Wakf property which is worth more than crores. They are just thinking that they are the owners and not the Administrators. Whatever they can do they can. That is the kingly attitude which will spoil the institution. What will happen if these big institutions do not come forward and if they do not give the arrears or if they do not give 6% Wakf contribution because of their influence on the Members, Chairman of the Wakf Board.

SRI S. M. YAHYA.—There I can agree with you. If there are deficiencies under the present Act, deficiency or mismangement and whatever other aspects, we can set-right. There need not be a separate Act to manage Dargah-E-Sharif of Gulbarga; That is the only point. There are deficiencies and we can set-right them under the present Act itself.

SRI QUMARUL ISLAM.—That was my proposal. These properties should be maintained properly. These properties should be the property of Wakf Institutions.

Further Sir, there is lot of criticism against the Members of the Wakf Board. I want that the Hon. Minister should be bold enough to take action against such members of the Board who are involved in misappropriation and all sorts of things. They should be changed. There should be members in the Wakf Board from all Parties, Please see that honest persons are given the membership of the Wakf Board, When we talk of wakf properties, we say that it is the Property of Allah and all that, However, who are Members in the District Wakf Committee. Gulbarga. The members are the rowdies. There are charge-sheets against them. They are doing business of selling of arrack and brandy. The wholesaless of the liquor are the Members of the District Wakf Committee. Their Godfather is there to protect their interest. When such are the Members of the Wakf Board, who are not performing their own religious duties, how can they safeguard the interest of religious institution. Such Member should be changed and other honest persons should be given a chance. Then Sir, the Annual Report has been given to us comprising of Power. Energy and Wakf. Sir, Wakf means it is a separate portfolio. However, here the report of the Wakf has come only in 4 pages along with the Revenue I am sorry to say this, There ahould be a detailed report on the wakfs. They have distributed Rs. 40 lakhs. I want to know which are those institutions whom you have distributed this grant-in aid, How many districts you have given. Have you done any justification with almost all the institutions of the district or you have given the grant at the influence of some Members or the Chairman of wakf Board. Here is the list of grants given to various institutions. It is Nil for Gulbarga. Sir, Gulbarga is having maximum number of religious institutions which is paying maximum fund towards wakf Fund contribution, Sir, the Darga-E-Sharif Sajadda is the member of the same wakf Board who has taken Rs. 48 lakhs from Central wakf Fund for Khwaja Nagari. He is Member there only for his self-interest. His eyes were closed when the question of his District came up. He knows not what is happening in the villages. taluks and other places, Same thing is about Hyderabad-Karnataka area. Only one institution has been given Rs. 15,000 in Bellary.

SRI M. MALLIKARJUNA KHARGE.—The grants were given when Sri Azeez Sait was the wakf Minister.

SRI QUMARUL ISLAM.—It is not the question of Azeez Sait or S.M. Yahya. It is the Body which has recommended like this I do not wish to go into the details. I leave it at that.

SRI S.M. YAHYA.— Justice will be done to Gulbarga, North Canara and Bijapur.

SRI QAMARUL ISLAM.— Atleast in the future, when the report on Wakfs is given, the amounts released to the various districts should be mentioned so that the Members could know what amount is provided. What is happening is that the Members who are on the Board will recommend and they are able to influence the Minister to get sanction of the funds. I wish to submit that every Member of this House should be given weightage, because he is not representing a particular community. He is representing the people as a whole, whether it is a matter of sanction of Mandirs under the Endowment or it is a matter of Wakf Board. Eventhough I am a Member of the Muslim League, I have recommended for the temple of great Lord Venkateshwara and the Hon'ble Member Mr. Aziz Sait was kind enough to sanction money. I therefore request the Hon'ble Minister that the views of the M.L.As., should be considered and given due weightage and that should be the criteria in future for allotment of Wakf funds.

As regards, Hyderabad Karnataka Development Board with statutary powers is concerned, it has not come and now atleast the High-Power Committee has come. The Hon'ble Minister is also a Member. I want to emphasise on one point. Gulbarga district is having maximum number of integrated Limestone and there are number of medium and big industries. Is it not possible for the Government to collect atleast 50 paise or 20 paise on each bag from these industries? This money should not be credited to the Consolidated Fund of the Government, but it should be credited to the Hyderabad Karnatak Improvement fund. Atleast the roads, bridges and other things which are connected with these factories should be developed. I have talked to some of the Industrialists and they have said that these are worst roads. I have gone to Andhra Pradesh. When N.T. Rama Rao was the Chief Minister there, certain bridges have come up costing two to three crores. In Vijayawada, the contract was given to a Contractor. There was an agreement between the Government and the Contractor that the Contractor will collect Re. 1/- or Re. 0.50/- from each vehicle that passes through the bridge for ten to fifty years and the Government need not pay any money to the Contractor. But the Bridge has come and the contractor who has built the bridge has made arragements to collect money as per the agreement. Therefore

so far as the Hyderabad Karnataka area is concerned, which is the most backward area. I want to suggest that atleast 25 ps. or 50 ps., should be collected on each bag of cement and this money should be utilised for the development of Roads. bridges, culverts etc., of our area.

As regards Karnataka Electricity Board, hon'ble Member Smt. Chandraprabha Urs spoke about the Billing system in K.E.B. In the bank, when we deposit and withdraw money, they will give us Pass-books. In the same manner, I want to suggest that there should be a Pass-book in the K.E.B., in respect of the consumers, so that we can konw the details of payments made and the payments due and there will be no confusion. What is happening is that KEB is also charging interest. When the Bills are received, there will be lot of confusion as regards entries in the bills. Therefore, if pass-book is issued, it will avoid all these confusions. I wanted to give this suggestion and I hope the Hon'ble Minister will consider my suggestion. With these words, I thank the Chair for having given me sufficient time to speak.

† ಶ್ರೀ ಎ. ಎಂ. ಹಿಂಡಸಗೇರಿ (ಹುಬ್ಬಳ್ಳಿ).— ಮಾನ್ಯ ಉಪಾಧ್ಯಕ್ಷಿಣಿಯವರೆ, ಇವತ್ತಿನ ದಿವಸ ಡಿಮ್ಯಾಂಡ್ ನಂಬರ್ ೬,೯,೪೯,೫೪.೮ ಮತ್ತು ೧೧ನ್ನು ಸಭೆಯ ಮುಂದೆ ಮಂಡಿಸಿ ಅದರ ಬಗ್ಗೆ ಡಿಸ್ಕಷನ್ ನಡೆಯುತ್ತಿದೆ. ನಾನೂ ಸಹ ತಮ್ಮ ಅನುಮತಿ ಪಡೆದು ೫೪ನೇ ಡಿಮ್ಯಾಂಡ್ ಆದ ವಕ್ಫ್ ಬೋರ್ಡ್ ಮೇಲೆ ನನ್ನ ವಿಚಾರವನ್ನು ವ್ಯಕ್ತಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಈಗಾಗಲೇ ಕಮರುಲ್ ಇಸ್ಲಾಂ ಅವರು ವಕ್ಫ್ ಬೋರ್ಡ್ ಬಗ್ಗೆ ತಮ್ಮ ಮಾತನ್ನು ಹೇಳಿದ್ದಾರೆ. ನಾನೂ ಸಹ ಅದರ ಬಗ್ಗೆ ಹೇಳುತ್ತೇನೆ. ೧೯೮೮ನೇ ಇಸವಿಯಲ್ಲಿ ವಕ್ಫ್ ಬೋರ್ಡ್ ಕಾನ್‌ಸ್ಟಿಟ್ಯೂಟ್ ಆಯಿತು. ಅದರಲ್ಲಿ ೧೧ ಜನ ಸದಸ್ಯರಿದ್ದಾರೆ. ಆದರೆ ಕಮರುಲ್ ಇಸ್ಲಾಂ ಅವರು ಹೇಳಿದಹಾಗೆ ಈ ಬೋರ್ಡು ವಕ್ಫ್ ಆಕ್ಟ್ ಪ್ರಕಾರ ರಚನೆ ಆಗಲಿಲ್ಲ. ವಕ್ಫ್ ಆಕ್ಟ್ ಕ್ಲಾಸ್-೧೧ರಲ್ಲಿ ಯಾವ ಯಾವ ತರಹದ ಮೆಂಬರ್‌ಷಿಪ್ ಇರಬೇಕು ಎಂದು ಕಾಣಿಸಿದ್ದಾರೆ. ಆದರೆ ಈಗಿರುವ ವಕ್ಫ್ ಬೋರ್ಡಿನಲ್ಲಿ ಆ ರೀತಿ ಸದಸ್ಯರು ಇಲ್ಲ. ನಾನು ಮಾನ್ಯ ಮಂತ್ರಿಯವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿ ಮೆಂಬರ್ಸ್ ಆಫ್ ಸ್ಟೇಟ್ ಲೆಜಿಸ್ಲೇಚರ್ ಮತ್ತು ಮೆಂಬರ್ಸ್ ಆಫ್ ಪಾರ್ಲಿಮೆಂಟ್ ಇರಬೇಕು ಎಂದು ಇದೆ. ಆದರೆ ಈಗಿನ ವಕ್ಫ್ ಬೋರ್ಡಿನಲ್ಲಿ ಒಬ್ಬರೂ ಲೆಜಿಸ್ಲೇಟರ್ಸ್ ಆಗಲೀ ಮೆಂಬರ್ ಆಫ್ ಪಾರ್ಲಿಮೆಂಟ್ ಆಗಲೀ ಇಲ್ಲ. ಅದಕ್ಕೋಸ್ಕರವಾಗಿ ಮಾನ್ಯ ಮಂತ್ರಿಗಳು ಈ ಬಗ್ಗೆ ಗಮನಕ್ಕೆ ತೆಗೆದುಕೊಂಡು ಈ ವಕ್ಫ್ ಬೋರ್ಡ್ ಬಗ್ಗೆ ವಿಚಾರ ಮಾಡಬೇಕು. ಈ ಬೋರ್ಡ್ ಸರಿಯಾಗಿ ಫಂಕ್ಷನ್ ಮಾಡುತ್ತಿಲ್ಲ. ವಕ್ಫ್ ಬೋರ್ಡ್ ರಾಜಕೀಯ ಬೋರ್ಡ್ ಆಗಿದೆ. ಈ ಬೋರ್ಡ್ ೧೯೮೮ರಲ್ಲಿ ಹಿಂದಿನ ಸರ್ಕಾರ ಕಾನ್ಸ್ಟಿಟ್ಯೂಟ್ ಮಾಡಿದಂಥದ್ದು. ಆ ಸರ್ಕಾರ ಮತ್ತು ಆಗಿನ ಮುಖ್ಯ ಮಂತ್ರಿಗಳು ರಾಜೀನಾಮೆ ಸಲ್ಲಿಸಿದ ನಂತರ ಅನೇಕ ಬೋರ್ಡ್‌ಗಳ ಚೇರ್‌ಮನ್‌ಗಳು ತಮ್ಮ ರಾಜೀನಾಮೆಗಳನ್ನು ಮಾರಲ್ ಗ್ರೌಂಡ್ಸ್ ಮೇಲೆ ಸಲ್ಲಿಸಿದರು. ಆದರೆ ಈ ಬೋರ್ಡಿನ ಚೇರ್ಮನ್ನರು ಹಾಗೂ ಸದಸ್ಯರು ರಾಜೀನಾಮೆ ಸಲ್ಲಿಸುವುದಕ್ಕೆ ಪ್ರಯತ್ನ ಮಾಡಲಿಲ್ಲ. ಇದರ ಬಗ್ಗೆ ಅನೇಕ ಕ್ರಿಟಿಸಿಸಂ ಬಂತು ಹೊರಗಡೆ ಜನರೂ ಮಾತನಾಡಿದರು. ಆದರೂ ಬೋರ್ಡಿನವರಿಗೆ ಸ್ವಲ್ಪವಮಟ್ಟಿಗೂ ಅರಿವು ಆಗಲಿಲ್ಲ ಈ ಬೋರ್ಡ್ ಮೇಲೆ ಅನೇಕ ಚಾರ್ಜ್‌ಗಳಿವೆ. ಕಮರುಲ್ ಇಸ್ಲಾಂ ಅವರು ಹೇಳಿದಹಾಗೆ ತಮ್ಮ ತಮ್ಮ ಡಿಸ್ಟ್ರಿಕ್ಟ್‌ನಲ್ಲಿ ತಮಗೆ ಬೇಕಾದವರಿಗೆ ಹೆಚ್ಚು ಹಣ ಪಡೆಯುತ್ತಾರೆ. ನಮ್ಮ ಧಾರವಾಡ ಜಿಲ್ಲೆಯಲ್ಲಿ ಒಬ್ಬರು ತಮ್ಮದೇ ಆದ ಸಂಸ್ಥೆಗೆ ೫ ಲಕ್ಷ ರೂಪಾಯಿ ಗ್ರಾಂಟ್ ತೆಗೆದುಕೊಂಡಿದ್ದಾರೆ. ಅವರು ಒಂದು ಸಣ್ಣ ಸಂಸ್ಥೆಯನ್ನು ಕಟ್ಟುತ್ತಿದ್ದಾರೆ. ಇದರ ಬಗ್ಗೆ ಎನ್‌ಕ್ವೈರಿ ಆಗಬೇಕು. ಯೋಗ್ಯವಾದ ಜನರು ಯಾರು ಹಣ ಬೇಡುತ್ತಾರೆ ಅವರಿಗೆ ೫ ಸಾವಿರ ಕೂಡ ಹಣ ಕೊಡುವುದಕ್ಕೆ ಆಗುವುದಿಲ್ಲ. ಮತ್ತು ಯಾರು ಯಾರು ತಮ್ಮ ಪಕ್ಷದವರಿದ್ದಾರೆ ತಮಗೆ ಬೇಕಾದವರಿದ್ದಾರೆ ಅವರಿಗೆ ಕೊಟ್ಟಿದ್ದಾರೆ. ನನ್ನ ಕಾನ್‌ಸ್ಟಿಟುಯೆನ್ಸಿಯಲ್ಲಿ ಒಂದು ಇನ್‌ಸ್ಟಿಟ್ಯೂಷನ್‌ಗೆ ವಂತಿಕೆ ಕೊಟ್ಟರೆ ಪಕ್ಕದಲ್ಲಿ ೧೫ ಸಂಸ್ಥೆಗೆ ಕೊಟ್ಟಿದ್ದಾರೆ. ಇದು ವಕ್ಫ್ ಬೋರ್ಡ್ ಆಕ್ಟ್ ಪ್ರಕಾರ ನಡೆಯುತ್ತಿಲ್ಲ.

ಎರಡು ವರ್ಷವಾದರೂ ರಾಜಕೀಯವಾಗಿ ಹಣ ಉಪಯೋಗ ಮಾಡಿಕೊಂಡು ತಮ್ಮ ತಮ್ಮ ಕಮಿಟಿಯನ್ನು ರಚನೆ ಮಾಡುತ್ತಿದ್ದಾರೆ. ಮಾನ್ಯ ಮಂತ್ರಿಯವರು ಇದರ ಬಗ್ಗೆ ಗಮನ ಕೊಟ್ಟು ಈ ಬೋರ್ಡನ್ನು ಹೇಗೆ ಸರಿಪಡಿಸಬೇಕೋ ಹಾಗೆ ಸರಿಪಡಿಸಬೇಕು ಎಂದು ತಮ್ಮ ಮುಖಾಂತರ ಕೇಳಿ ಕೊಳ್ಳುತ್ತೇನೆ. ಅಲ್ಲಿ ಚೇರ್ಮನ್ನರಾಗಲೀ ಸದಸ್ಯರಾಗಲೀ ಅವರನ್ನು ಕೇಳಿಕೊಳ್ಳುತ್ತೇನೆ. ಏನೆಂದರೆ ಹಿಂದಿನ ಸರ್ಕಾರ ಹೇಗೆ ರಾಜೀನಾಮೆ ಕೊಟ್ಟಿದೆ ಅದೇರೀತಿ ತಾವೂ ರಾಜೀನಾಮೆ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒಂದು ಸಲಹೆ ಕೊಡುವುದಕ್ಕೆ ಇಚ್ಛಿಪಡುತ್ತೇನೆ. ಅದೇನೆಂದರೆ ಈ ವಕ್ಫ್ ಸಂಸ್ಥೆಗಳ ಆಸ್ತಿ ಸಾರ್ವಜನಿಕ ವತಿಯಿಂದಲೂ ಸರ್ಕಾರದ ವತಿಯಿಂದಲೂ ಬಹಳಷ್ಟು ಎನ್‌ಕ್ರೂಚ್‌ಮೆಂಟ್ ಆಗುತ್ತದೆ. ಬಿಜಾಪುರದಲ್ಲಿ ೩೦ವಕ್ಫ್ ಸಂಸ್ಥೆಗಳಿವೆ. ಈ ಸರ್ಕಾರ ದವರು ಅವುಗಳನ್ನು ತಮ್ಮ ವಶದಲ್ಲಿಟ್ಟುಕೊಂಡಿದ್ದಾರೆ. ವಕ್ಫ್ ಸಂಸ್ಥೆಯನ್ನು ಬಿಜಾಪುರದಲ್ಲಿ ಅಸಿಸ್ಟೆಂಟ್ ಕಮಿಷನರ್‌ರವರ ಕಛೇರಿಗೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಉಪಯೋಗಿಸುತ್ತಿದ್ದಾರೆ. ಅದನ್ನು ತಕ್ಷಣ ವಕ್ಫ್ ಬೋರ್ಡ್‌ಗೆ ವಾಪಸ್ಸು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿ ಕೊಳ್ಳುತ್ತೇನೆ. ಮತ್ತೊಂದು ಮಹತ್ವವಾದ ಮಾತು ಅಂದರೆ ಚರಿತ್ರಾರ್ಹ ಸ್ಥಳವಾದ ಹುಕ್ಕೇರಿಯ ಬಗ್ಗೆ ಎರಡು ತಿಂಗಳುಗಳ ಹಿಂದೆ ಮಾನ್ಯ ಮುಖ್ಯಮಂತ್ರಿಗಳವರೆಗೆ ಒಂದು ಪತ್ರ ಬರೆದಿದ್ದೇನೆ. ಆಗಿನ ವಕ್ಫ್ ಮಂತ್ರಿಗಳಾದ ಅಜೀಜ್‌ಸೇಠ್‌ರವರಿಗೆ ಒಂದು ಪತ್ರ ಬರೆದಿದ್ದೆನೆ. ಇದುವರೆಗೆ ಅವರು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಈಗಿನ ವಕ್ಫ್ ಮಂತ್ರಿಗಳಾದ ತಮಗೆ ಒಂದು ಪತ್ರವನ್ನು ಬರೆದಿದ್ದೇನೆ. ಪತ್ರಿಕೆಗಳಲ್ಲಿ ಬಂದಿರುವ ಫೋಟೋಗಳನ್ನು ಸಹ ತಮಗೆ ಕಳುಹಿಸಿ ಕೊಡುತ್ತಿದ್ದೇನೆ. ಆದಿ ಅದಿಲ್‌ಶಾ ಕಟ್ಟಿದ ಡೂಮ್ಸ್ ಇದೆ. ಅಲ್ಲಿ ಚರಿತ್ರಾರ್ಹವಾದ ಡೂಮ್ಸ್‌ಗಳಿವೆ. ಒಂದನ್ನು ಗೆಸ್ಟ್‌ಹೌಸ್ ಆಗಿ ಉಪಯೋಗಿಸುತ್ತಿದ್ದಾರೆ. ಇನ್ನೊಂದನ್ನು ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ನವರು ಉಪಯೋಗಿಸು ತ್ತಿದ್ದಾರೆ. ಆ ತರಹ ಮಾಡುವುದು ಅಷ್ಟು ಚಂದ ಅನಿಸುವುದಿಲ್ಲ. ಆ ಡೂಮ್‌ಗಳನ್ನು ಖಾಲಿ ಮಾಡಿಸಿ ವಕ್ಫ್ ಮಂಡಳಿಗೆ ವಾಪಸ್ ಕೊಡಬೇಕು. ಅದು ಚರಿತ್ರಾರ್ಹ ಸ್ಥಳವಾಗಿಯೇ ಇರಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ವಕ್ಫ್ ಬೋರ್ಡ್‌ನವರು ಏನೇನು ಮಾಡುತ್ತಿದ್ದಾರೆನ್ನುವುದು ನಮಗೆ ತಿಳಿಯುವುದಿಲ್ಲ. ಅನೇಕ ಸಂಘ ಸಂಸ್ಥೆಗಳವರು ತಮ್ಮ ತಮ್ಮ ರಿಪೋರ್ಟ್‌ಗಳನ್ನು ಕಳುಹಿಸುತ್ತಿದ್ದಾರೆ. ಆದರೆ ನಮಗೆ ವಕ್ಫ್ ಬೋರ್ಡ್‌ನವರು ತಮ್ಮದೇ ಆದ ವರದಿಯನ್ನು ಕಳುಹಿಸಿಲ್ಲ, ರೆವಿನ್ಯೂ ಡಿಪಾರ್ಟ್‌ಮೆಂಟ್ ವರದಿಯಲ್ಲಿ ನಾಲ್ಕು ಪೇಜ್ ರಿಪೋರ್ಟ್ ಬಂದಿದೆ. ಅದಕ್ಕೆ ನಾನು ವಿಷಾದ ವ್ಯಕ್ತಪಡಿಸುತ್ತೇನೆ. ಮುಂದೆ ಆ ರೀತಿ ಆಗಬಾರದು.

ಶ್ರೀ ಎಸ್. ಎಂ. ಯಾಹ್ಯ:,—ಹಾಗೆ ಆಗಿರುವುದಕ್ಕೆ ಕಾರಣ ಇಷ್ಟೆ: ಹಿಂದೆ ವಕ್ಫ್ ಮತ್ತು ರೆವಿನ್ಯೂ ಪೋರ್ಟ್‌ಫೋಲಿಯೋ ಒಬ್ಬರಿಗೆ ಇತ್ತು. ಅದಕ್ಕಾಗಿ ಒಂದು ಮಾಡಿ ಕೊಟ್ಟಿದ್ದಾರೆ. ಮುಂದೆ ಆ ರೀತಿ ಆಗದ ಹಾಗೆ ನೋಡಿಕೊಳ್ಳುತ್ತೇನೆ.

ಶ್ರೀ ಎಂ. ಎಂ. ಹಿಂಡಸ್‌ಗೇರಿ: ರೆವಿನ್ಯೂ. ಖಾತೆ ಮತ್ತು ವಕ್ಫ್ ಖಾತೆಯ ಮಂತ್ರಿಗಳು ಒಬ್ಬರೆ ಇದ್ದರೂ ಸಹ ವರದಿಗಳು ಬೇರೆ ಬೇರೆ ಬರಬೇಕು. ವಕ್ಫ್ ಮಂಡಳಿಯವರು ರಿಪೋರ್ಟ್‌ಗಳನ್ನು ಕಳುಹಿಸಬೇಕು, ಪ್ರತಿಯೊಂದು ಯೂನಿವರ್ಸಿಟಿಗಳ ರಿಪೋರ್ಟ್‌ಗಳು ಬೇರೆ ಬೇರೆ ಆಗಿ ಬರುತ್ತವೆ. ಕರ್ನಾಟಕ ಯೂನಿವರ್ಸಿಟಿಯ ವರದಿ ಬರುತ್ತದೆ, ಮೈಸೂರು ಯೂನಿವರ್ಸಿಟಿಯ ವರದಿ ಬರುತ್ತದೆ. ಅದೇ ರೀತಿ ಏತಕ್ಕೆ ವಕ್ಫ್ ಬೋರ್ಡ್‌ನಿಂದ ಸಪರೇಟ್ ವರದಿ ಬರುವುದಿಲ್ಲ ? ವರದಿಯನ್ನು ಸಪರೇಟಾಗಿ ತರಿಸಬೇಕು. ಮಾನ್ಯ ಕಮರುಲ್ಲ ಇಸ್ಲಾಂರವರು ಹೇಳಿದಹಾಗೆ ವಕ್ಫ್ ಮಂಡಳಿಯಲ್ಲಿ ಎಷ್ಟು ಹಣ ಇದೆ. ಎಷ್ಟು ಹಣ ಬಂತು, ಏನೇನು ಕಾರ್ಯಕ್ರಮಗಳನ್ನು ಮಾಡುತ್ತಾರೆನ್ನುವ ವರದಿಯನ್ನು ಅವರು ಏತಕ್ಕೆ ಕಳುಹಿಸಬಾರದು. ಈಗ ಬಂದಿರತಕ್ಕ ರಿಪೋರ್ಟ್ ರೆವಿನ್ಯೂ ಡಿಪಾರ್ಟ್‌ಮೆಂಟ್ ಮೂಲಕ ಬಂದಿರಬಹುದು. ಆದರೆ ವಕ್ಫ್ ಮಂಡಳಿಯಲ್ಲಿ ಎಷ್ಟು ಹಣವಿದೆ. ಏನೇನು ಕಾರ್ಯಗಳನ್ನು ಮಾಡು ತ್ತಿದ್ದಾರೆ, ಯಾವುದರಲ್ಲಿ ವಿಫಲರಾಗಿದ್ದಾರೆನ್ನು ವರದಿ ಸಪರೇಟಾಗಿ ಇರಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ ಇನ್ನು ಮುಂದೆ ಈ ರೀತಿ ಆಗುವುದಕ್ಕೆ ಅವಕಾಶ ಕೊಡ ಬಾರದೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ತಮ್ಮ ವರದಿಯಲ್ಲಿ ಹಜ್ ಕಮಿಟಿಯ ಬಗ್ಗೆ ಹೇಳಿದ್ದಾರೆ. ಆ ವರದಿಯಲ್ಲಿ ನಾಲ್ಕು ಲೈನು ಬರೆದು ಇಷ್ಟು ಮಂದಿ ಹಜ್ ಯಾತ್ರೆಗೆ ಹೋಗಿದ್ದಾ ರೆಂದು ವರದಿಯನ್ನು ಕೊಟ್ಟಿದ್ದಾರೆ. ಅಷ್ಟು ಕೊಟ್ಟರೆ ಸಾಲದು. ಹಿಂದೆ ಹಜ್ ಹೌಸ್ ಕಟ್ಟಲಿಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡು ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಗಳಾಗಿದ್ದಾಗ ೩೦ ಲಕ್ಷ ರೂಪಾಯಿ ಗ್ರಾಂಟ್ ಕೊಡುತ್ತೇನೆ ಎನ್ನುವ ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆ ಹಣವನ್ನು ಕೊಟ್ಟಿದ್ದಾರೋ ಕೊಡಲಿಲ್ಲವೋ ಅದನ್ನು ತಿಳಿಸಬೇಕು. ಹಣ ಕೊಟ್ಟಿದ್ದರೆ ಹಜ್ ಹೌಸ್ ಎಷ್ಟರವರೆಗೆ ಕಟ್ಟಿದ್ದಾರೆ. ಆ ವರ್ಕ್ಸ್ ಪ್ರೋಗ್ರೆಸ್‌ನಲ್ಲಿದೆಯೋ ಅಥವಾ ಇಲ್ಲವೇ ಎನ್ನುವ ಮಾಹಿತಿಯನ್ನು ಕೊಡ

ಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ನಾನು ವಕ್ಫ್ ಪ್ರಾಪರ್ಟಿ ಎನ್‌ಕ್ರೋಚ್‌ಮೆಂಟ್ ಬಗ್ಗೆ ಹೇಳುತ್ತಿದ್ದೆ. ನಮ್ಮ ಜಿಲ್ಲೆಯಲ್ಲಿ ವಿಶೇಷವಾಗಿ ಅದರಲ್ಲೂ ಮಹಾನಗರ ಪಾಲಿಕೆಯ ಹುಬ್ಬಳ್ಳಿಯಲ್ಲಿ ದೊಡ್ಡ ಮೂರು ಪ್ರಾಪರ್ಟಿಗಳಿವೆ. ಪ್ರೈವೇಟ್ ಜನರಿಂದ ಮತ್ತು ಸರ್ಕಾರದಿಂದ ಎನ್‌ಕ್ರೋಚ್‌ಮೆಂಟ್ ಆಗಿದೆ. ಆದಷ್ಟು ಬೇಗ ರೆವಿನ್ಯೂ ಡಿಪಾರ್ಟ್‌ಮೆಂಟ್ ಮೂಲಕ ಆ ಪ್ರಾಪರ್ಟಿಯನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಯಾರು ಯಾರು ಎನ್‌ಕ್ರೋಚ್‌ಮೆಂಟ್ ಮಾಡಿದ್ದಾರೆ ಅವರ ಕಡೆಗೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಎಲ್ಲಿಯತನಕ ಗಮನಹರಿಸುವುದಿಲ್ಲ. ಕೇರ್ ತೆಗೆದುಕೊಳ್ಳುವುದಿಲ್ಲ ಅಲ್ಲಿಯ ತನಕ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಎನ್‌ಕ್ರೋಚ್‌ಮೆಂಟ್ ಏನಾಗಿದೆ ಅದನ್ನು ರೆವಿನ್ಯೂ ಇಲಾಖೆಯ ಕಡೆಯಿಂದ ಬಿಡಿಸಿಕೊಳ್ಳಬೇಕು. ಬೆಂಗೇರಿ ಕಬರಸ್ತಾನದೊಳಗೆ ತಮ್ಮ ಕ್ವಾರ್ಟರ್ಸ್ ಕಟ್ಟಿಸಿದ್ದಾರೆ ಅಲ್ಲಿ ಎನ್‌ಕ್ರೋಚ್ ಆಗಿದೆ. ಅದರ ಬಗ್ಗೆ ನಾನು ಈಗಾಗಲೇ ಒತ್ತಾಯ ಮಾಡಿದ್ದೇನೆ. ಎಷ್ಟು ಜಾಗ ಎನ್‌ಕ್ರೋಚ್ ಆಗಿದೆ ಅಷ್ಟು ಜಾಗವನ್ನು ವಕ್ಫ್ ಸಂಸ್ಥೆಗೆ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಗೋಕುಲ ಇಂಡಸ್ಟ್ರಿಯಲ್ ಏರಿಯದಲ್ಲಿ ಒಂದು ದೊಡ್ಡ ಮೈದಾನವಿದೆ. ಅಲ್ಲಿ ಎನ್‌ಕ್ರೋಚ್ ಆಗಿದೆ. ಯಾರು ಎನ್‌ಕ್ರೋಚ್ ಮಾಡಿದ್ದಾರೆ ಅವರು ಬೇರೆ ಕಡೆ ಎರಡು ಎಕರೆ ಜಾಗವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಎರಡು ಎಕರೆ ಭೂಮಿಯನ್ನು ತೆಗೆದುಕೊಂಡು ಬಾಜುದಲ್ಲಿ ತಮ್ಮದೇ ಆದ ಕಟ್ಟಡ ಕಟ್ಟಿಸಲಿಕ್ಕೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ವಕ್ಫ್ ಆಸ್ತಿ ಅನೇಕ ಜಿಲ್ಲೆಗಳಲ್ಲಿ ಎನ್‌ಕ್ರೋಚ್ ಆಗಿದೆ. ಪ್ರೈವೇಟ್ ನವರಿಂದ ಅಥವಾ ಸರ್ಕಾರದಿಂದ ಅದು ಆಗಿದೆ. ಅದನ್ನು ಆದಷ್ಟು ಬೇಗ ವಾಪಸ್ ತೆಗೆದುಕೊಳ್ಳಬೇಕು. ಅದನ್ನು ವಕ್ಫ್ ಬೋರ್ಡ್‌ನವರು ಸರಿಯಾಗಿ ಉಪಯೋಗಿಸಿದರೆ ಇರತಕ್ಕ ಎಷ್ಟೋ ತೊಂದರೆಗಳು ನಿರ್ಮೂಲನವಾಗುತ್ತವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಜಿಲ್ಲಾಧಿಕಾರಿಗಳವರ ಕಛೇರಿಯಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ವಕ್ಫ್ ಖಾತೆಯನ್ನು ನೋಡುವುದಕ್ಕೆ ಯಾವುದೇ ಅಧಿಕಾರಿ ಅಥವಾ ಸಿಬ್ಬಂದಿ ಇರುವುದಿಲ್ಲ. ಜಿಲ್ಲಾಧಿಕಾರಿಗಳ ಕಛೇರಿಗಳಲ್ಲಿ ಎಸ್‌ಡಿಸಿ ಮತ್ತು ಎಫ್‌ಡಿಸಿಗಳಿಗೆ ಆ ಫೈಲುಗಳನ್ನು ಕೊಡುತ್ತಾರೆ. ನಮ್ಮಂತಹವರು ವಕ್ಫ್ ಬೋರ್ಡ್‌ನ ಛೇರ್ಮನ್‌ರವರು ಸಂಬಂಧಪಟ್ಟವರು ಅಲ್ಲಿಗೆ ಹೋದರೆ ವಕ್ಫ್ ಅಂದರೇನು ಅಂತ ನಮ್ಮನ್ನೆ ಕೇಳುತ್ತಾರೆ. ದಯವಿಟ್ಟು ಜಿಲ್ಲಾಧಿಕಾರಿಗಳವರ ಕಛೇರಿಯಲ್ಲಿ ವಕ್ಫ್ ಖಾತೆಯನ್ನು ನೋಡಿಕೊಳ್ಳಲಿಕ್ಕೆ ಎಫ್‌ಡಿಸಿ ಗ್ರೇಡ್‌ನವರೊಬ್ಬರನ್ನು ಅಪಾಯಿಂಟ್‌ಮೆಂಟ್ ಮಾಡಬೇಕು. ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್‌ರವರ ಕಛೇರಿಯಲ್ಲಿ ಎಸ್‌ಡಿಸಿ ಗ್ರೇಡ್ ನವರೊಬ್ಬರನ್ನು ಅಪಾಯಿಂಟ್‌ಮೆಂಟ್ ಮಾಡಬೇಕು. ವಕ್ಫ್ ಖಾತೆಯನ್ನು ನೋಡಿಕೊಳ್ಳಲಿಕ್ಕೆ ಅಲ್ಲಿ ಒಂದು ಹುದ್ದೆಯನ್ನು ಸೃಷ್ಟಿ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇಲ್ಲದಿದ್ದರೆ ವಕ್ಫ್ ಬೋರ್ಡ್ ವತಿಯಿಂದ ಸ್ವಲ್ಪಮಟ್ಟಿಗೆ ಮಾಹಿತಿ ಇರತಕ್ಕವರನ್ನು ಅಲ್ಲಿಗೆ ಡೆಪ್ಯುಟೇಶನ್ ತೆಗೆದುಕೊಂಡು ಅವರಿಂದ ಕೆಲಸ ಮಾಡಿಸಬೇಕು. ರಾಜ್ಯದ ೨೦ ಜಿಲ್ಲೆಗಳಲ್ಲಿ ಈ ಕೆಲಸವನ್ನು ಮಾಡಬೇಕು. ತಹಶೀಲ್ದಾರ್‌ರವರ ಕಛೇರಿಗಳಲ್ಲಿ ಮತ್ತು ಜಿಲ್ಲಾಧಿಕಾರಿಗಳವರ ಕಛೇರಿಯಲ್ಲಿ ವಕ್ಫ್ ಆಸ್ತಿಯ ಎಂಟ್ರಿಗಳು ಸರಿಯಾಗಿ ಮಾಡಿರುವುದಿಲ್ಲ. ಏನೇನು ಬರೆಯುತ್ತಾರೆ ಅದು ಸರಿಯಾಗಿರುವುದಿಲ್ಲ. ಸರಿಯಾಗಿ ಬರೆದಿಡುವುದಕ್ಕೆ ಆದೇಶವನ್ನು ಕೊಡಬೇಕೆಂದು ಮಾನ್ಯ ಮಂತ್ರಿಗಳಿಗೆ ಕೇಳಿಕೊಳ್ಳುತ್ತೇನೆ. ಇನಾಂ ಅಬಾಲಿಷನ್ ಆಕ್ಟ್ ಬಂದ ನಂತರ ಲ್ಯಾಂಡ್ ರಿಫಾರಮ್ಸ್ ಆಕ್ಟ್ ಜಾರಿಗೆ ಬಂದ ನಂತರ, ಟೆನೆನ್ಸಿ ಆಕ್ಟ್ ಜಾರಿಗೆ ಬಂದ ನಂತರ ಅನೇಕ ಸಂಸ್ಥೆಗಳ ಜಾಗೀರ್ ಜಮೀನ್‌ಗಳು ಇಲ್ಲವಾಗಿವೆ. ತಾಲ್ಲೂಕು ಮಟ್ಟಗಳಲ್ಲಿ ಅದರಲ್ಲೂ ಹಳ್ಳಿಗಳ ಮಟ್ಟಗಳಲ್ಲಿ ಕಬರ್‌ಸ್ತಾನ ಇದ್ದರೂ ಕೂಡ ಅಲ್ಲಿ ಹೂಳಲಿಕ್ಕೆ ಜಾಗವಿಲ್ಲ. ಆದಕ್ಕೋಸ್ಕರ ಕಂದಾಯ ಸಚಿವರು ಮತ್ತು ವಕ್ಫ್ ಸಚಿವರು ಪ್ರತಿಯೊಂದು ಹಳ್ಳಿಗಳಿಗೂ ಒಂದು ಕಬರ್‌ಸ್ತಾನದ ವ್ಯವಸ್ಥೆ ಮಾಡಿಕೊಡಬೇಕು. ಇಲ್ಲದಿದ್ದರೆ ಹೂಳಲಿಕ್ಕೆ ಹೋದಾಗ ಜಗಳ ಆಗುತ್ತದೆ. ಜನರು ಪೋಲೀಸ್‌ಸ್ಟೇಶನಗೆ ಹೋಗುತ್ತಾರೆ ಇದೆಲ್ಲ ಸರಿಯಾಗಬೇಕಾದರೆ ಒಂದೆರಡು ಎಕರೆ ಭೂಮಿಯನ್ನು ಪ್ರತಿ ಹಳ್ಳಿಯಲ್ಲಿ ರೆವಿನ್ಯೂ ಇಲಾಖೆಯವರು ಕೊಡಬೇಕೆಂದು ತಮ್ಮ ಮೂಲಕ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರ ಮೊನ್ನೆ ಮಾನ್ಯ ಮಂತ್ರಿಗಳು ಇದಕ್ಕಾಗಿ ವಕ್ಫ್ ಗ್ರ್ಯಾಂಟ್‌ನಿಂದ ೨೫ ಸಾವಿರ ರೂಪಾಯಿಗಳನ್ನು ಕೊಡುತ್ತೇನೆಂದು ಹೇಳಿದ್ದಾರೆ, ೨೫ ಸಾವಿರ ರೂಪಾಯಿಗಳನ್ನು ಹಳ್ಳಿಗಳಿಗೆ ಕೊಡುವುದಕ್ಕೆ ಅಡ್ಡಿಯಿಲ್ಲ. ಆದರೆ ನಗರ ಪ್ರದೇಶಗಳಲ್ಲಿ ೨೫ ಸಾವಿರ ರೂಪಾಯಿ ಕೊಟ್ಟರೆ ಅದು ಸಾಲುವುದಿಲ್ಲ. ಏಕೆಂದರೆ ಅಲ್ಲಿ ಪ್ರಾಪರ್ಟಿ ಸಾಕಷ್ಟು ಬೆಲೆ ಇರುವುದರಿಂದ ೨೫ ಸಾವಿರ ರೂಪಾಯಿಗಳಲ್ಲಿ.........

ಒಬ್ಬ ಮಾನ್ಯ ಸದಸ್ಯರು.—೨೫ ಸಾವಿರ ರೂಪಾಯಿ ಗ್ರಾಮೀಣ ಭಾಗಗಳಲ್ಲೂ ಸಾಲುವುದಿಲ್ಲ. ಗ್ರಾಮೀಣ ಪ್ರದೇಶಗಳಿಗೆ ೨೫ ಸಾವಿರ ಕೊಟ್ಟರೆ ಅದು ಯಾವುದಕ್ಕೂ ಸಾಲುವುದಿಲ್ಲವೆಂದು ನಾವು ಈಗಾಗಲೇ ಮಾನ್ಯ ಮಂತ್ರಿಗಳಿಗೆ ಹೇಳಿದ್ದೇವೆ.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಎಸ್. ಎಂ. ಯಾಹ್ಯ.—ನಮ್ಮಲ್ಲಿರುವ ಹಣ ೪೦ಲಕ್ಷ ಮಾತ್ರ. ನಮ್ಮಲ್ಲಿ ೨೧ಸಾವಿರ ಸಂಸ್ಥೆಗಳಿವೆ. ಗ್ರಾಮೀಣ ಪ್ರದೇಶಗಳಿಗೆ ೨೫ಸಾವಿರ ರೂಪಾಯಿ ಕೊಡುತ್ತಿದ್ದೇವೆ. ನಗರಪ್ರದೇಶಗಳಿಗೆ ಹಣ ಕೊಡಲೇಬಾರದು. ಏಕೆಂದರೆ ನಗರಪ್ರದೇಶಗಳಲ್ಲಿ ಶ್ರೀಮಂತ ಮುಸಲ್ಮಾನರು ಇದ್ದಾರೆ. ಶ್ರೀಮಂತರು ಯಾರಿದ್ದಾರೆ ಅವರಿಗೂ ಸಹ ಜವಾಬ್ದಾರಿ ಇದೆ. ಬಡ ಮುಸ್ಲಿಮರು ಎಲ್ಲಿದ್ದಾರೆ ಅವರ ಮಸೀದಿ ಅವರ ಕಬರಸ್ತಾನ ದರ್ಗಾ, ಇವುಗಳಿಗೆ ಬೌಂಡರಿ ಹಾಕಿಕೊಳ್ಳಲಿಕ್ಕೆ ಶ್ರೀಮಂತರು ಸಹಾಯ ಮಾಡಬೇಕು. ಎಲ್ಲಿ ಶ್ರೀಮಂತರು ಇರುವುದಿಲ್ಲ, ಅಂತಹಕಡೆಗಳಿಗೆ ಮಾತ್ರ ಸಹಾಯ ಮಾಡಬೇಕೆಂದಿದ್ದೇವೆ

ಒಬ್ಬ ಮಾನ್ಯ ಸದಸ್ಯರು.— ಬಹಳ ಒಳ್ಳೆಯ ನಿರ್ಣಯ.

ಶ್ರೀ ಎ. ಎಂ. ಹಿಂಡಸಗೇರಿ.—ಮಾನ್ಯ ಮಂತ್ರಿಗಳು ಹೇಳಿದರು, ಏನೆಂದರೆ ಅರ್ಬನ್ ಏರಿಯಾದಲ್ಲಿ ಬಹಳಷ್ಟು ಶ್ರೀಮಂತರು ಇದ್ದಾರೆ ಎಂದು. ಬಹುಶಃ ಅದು ಭಟ್ಕಳ ಏರಿಯಾದಲ್ಲಿ ಇದೆ ಉಳಿದಂಥ ಅರ್ಬನ್ ಏರಿಯಾದಲ್ಲಿ ಇಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಎಷ್ಟು ಹಳ್ಳಿಗಳಲ್ಲಿ ಬಡವರಾದ ಮುಸ್ಲೀಮರು ಇದ್ದಾರೆ. ಅಷ್ಟೇ ಅರ್ಬನ್ ಏರಿಯಾದಲ್ಲೂ ಸಹ ಇದ್ದಾರೆ...

ಶ್ರೀ ಎಸ್. ಎಂ. ಯಾಹ್ಯಾ.—ಅರ್ಬನ್ ಏರಿಯಾದಲ್ಲಿ ಶ್ರೀಮಂತರು ಮತ್ತು ಬಡವರು ಇಬ್ಬರೂ ಇದ್ದಾರೆ, ಆದರೆ ಹಳ್ಳಿಗಳಲ್ಲಿ ಬರೀ ಬಡವರೇ ಹೆಚ್ಚು ಇರುವುದು. ನಾವು ಯಾರಿಗೆ ಮಾಡುವ ಕೆಲಸ ಇದು? ತೀರಾ ಬಡವರಿಗೆ ಮಾಡುವಂಥ ಕೆಲಸ. ಅರ್ಬನ್ ಏರಿಯಾದಲ್ಲಿ ಬಹಳಷ್ಟು ಶ್ರೀಮಂತರು ಇದ್ದಾರೆ ಅವರ ಕೈಯಿಂದ ನಾವು ತೆಗೆದುಕೊಳ್ಳಬೇಕಾಗಿದೆ. ಇದು ರಿಲೀಜಿಯಸ್ ಡ್ಯೂಟಿ. ಇಸ್ಲಾಂನಲ್ಲಿ ಬೇಕಾದಷ್ಟು ಒಳ್ಳೆಯ ತತ್ವಗಳಿವೆ. ಜಕಾತ್ ಕೊಡಬೇಕು ಎಂದು ಹೇಳುತ್ತೇವೆ. ದೊಡ್ಡ ದೊಡ್ಡ ಶ್ರೀಮಂತರು, ದೊಡ್ಡ ದೊಡ್ಡ ಪಟ್ಟಣಗಳಲ್ಲಿದ್ದವರು ಅವರು ಮಾಡುವಂಥ ಕೆಲಸ ಇದು. ವಕ್ಫ್ ಬೋರ್ಡ್ ಮಾಡುವಂಥ ಕೆಲಸ ಅಲ್ಲ. ತೀರಾ ಬಡವರು ಇದ್ದ ಕಡೆ ವಕ್ಫ್ ಬೋರ್ಡ್ ಸಹಾಯ ಮಾಡಬೇಕು ಎಂದು ಇದೆ. ಆ ಕಾರಣದಿಂದ ಹೇಳುತ್ತಿದ್ದೇನೆ ಹೊರತು ಬೇರೆ ಅಲ್ಲ. ಇದು ಒಂದು ಒಳ್ಳೆಯ ತತ್ವ. ಇದು ಈಕ್ವಿಟಬಲ್ ಪ್ರಿನ್ಸಿಪಲ್.

ಉಪಾಧ್ಯಕ್ಷರು.—ಶ್ರೀ ಹಿಂಡಸಗೇರಿಯವರೇ, ಇನ್ನು ಐದು ನಿಮಿಷಗಳಲ್ಲಿ ಮುಗಿಸಿಬಿಡಿ.

ಶ್ರೀ ಎ. ಎಂ. ಹಿಂಡಸಗೇರಿ.—ಈಗಾಗಲೇ ವಕ್ಫ್ ಗ್ರ್ಯಾಂಟ್ಸ್ ಬಗ್ಗೆ ನನ್ನ ಮಿತ್ರರು ಮತ್ತು ನಾವು ಮಾನ್ಯ ಮಂತ್ರಿಯವರಿಗೆ ಇದರ ಮಹತ್ವವನ್ನು ಹೇಳಿದ್ದೇವೆ. ಅದಕ್ಕೆ ಅವರು ಒಂದು ಒಳ್ಳೆಯ ಮಾತನ್ನು ಹೇಳಿದ್ದಾರೆ. ಆದರೂ ಸಹ ನಾನು ತಮ್ಮ ಮೂಲಕ ಅವರಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ ವಕ್ಫ್ ಪ್ರಾಪರ್ಟಿ ಅರ್ಬನ್ ಏರಿಯಾದಲ್ಲಿ ಡೆವಲಪ್ ಮಾಡಿದರೆ ಅದರಿಂದ ಇನ್‌ಕಮ್ ಸರಿಯಾಗಿ ಬರುತ್ತದೆ. ನಾನು ಇಷ್ಟು ಮಾತ್ರ ಹೇಳುವುದಕ್ಕೆ ಇಚ್ಛೆಪಡುತ್ತೇನೆ ಏನೆಂದರೆ ದಯವಿಟ್ಟು ಹಿಂದೆ ಹೇಗೆ ಸಹಾಯ ಮಾಡಿದ್ದೀರಿ, ಅದರಂತೆ ಈಗಲೂ ಸಹಾಯ ಮಾಡಿರಿ. ಮತ್ತು ಗ್ರಾಮಾಂತರ ಭಾಗದಲ್ಲಿ ಡೆವಲಪ್ ಮಾಡಲಿಕ್ಕೆ ತಾವು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ೨೫ ಸಾವಿರ ರೂಪಾಯಿ ಕೊಡುತ್ತೇವೆ ಎಂದು ಹೇಳಿದ್ದೀರಿ, ಅದಕ್ಕಿಂತ ಜಾಸ್ತಿ ಹಣ ಕೊಟ್ಟು ಅಲ್ಲಿಗೂ ಸಹಾಯ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ಶ್ರೀ ಕಮರುಲ್ ಇಸ್ಲಾಂ ಅವರು ಹೇಳಿದಂತೆ ಈ ವಕ್ಫ್‌ಗೆ ವಿಶೇಷ ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಮತ್ತೊಂದು ಮಾತು ಈ ಸಂದರ್ಭದಲ್ಲಿ ಹೇಳಬೇಕೆಂದರೆ, ಮೈನಾರಿಟೀಸ್ ಬಗ್ಗೆ ಮಾನ್ಯ ಮಂತ್ರಿಗಳು ಮತ್ತು ನಮ್ಮ ಸರ್ಕಾರ ವಿಶೇಷ ಗಮನ ಕೊಡಬೇಕು. ಅನೇಕ ಅಪವಾದಗಳನ್ನು ತಾವು ಕಳೆದ ಆರು ತಿಂಗಳಿಂದ ಕೇಳುತ್ತಿದ್ದೀರಿ. ಈಗ ವಕ್ಫ್ ಗ್ರ್ಯಾಂಟ್ ಬಗ್ಗೆ ತಾವು ಎಷ್ಟು ಕಡಿಮೆ ಮಾಡಿದ್ದೀರಿ, ಅದನ್ನು ನಾನು ಒಪ್ಪುವುದಿಲ್ಲ. ತಾವು ಜಾಸ್ತಿ ವಕ್ಫ್ ಗ್ರ್ಯಾಂಟ್‌ನ್ನು ಸರ್ಕಾರದಿಂದ ಪಡೆಯುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಈಗ ಏನು ೬೦ ಲಕ್ಷ ರೂಪಾಯಿ ಕೊಟ್ಟಿರುವುದು ಏನೂ ಸಾಲುವುದಿಲ್ಲ. ಒಂದು ಕೋಟಿಗಿಂತ ಜಾಸ್ತಿ ಹಣ ಪಡೆದು ಅರ್ಬನ್ ಏರಿಯಾಕ್ಕೆ ಮತ್ತು ಗ್ರಾಮಾಂತರ ಭಾಗಕ್ಕೆ ಹೆಚ್ಚುಹಣ ಖರ್ಚು ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಈ ಸಂದರ್ಭದಲ್ಲಿ ವಕ್ಫ್ ಬೋರ್ಡ್ ಮುಖಾಂತರ ಏನು ಕೇಸ್‌ಗಳು ಪೆಂಡಿಂಗ್ ಇವೆ ಎಂದು ತಾವು ತಮ್ಮ

ವರದಿಯಲ್ಲಿ ಹೇಳಿದ್ದೀರಿ. ಲೋಯರ್ ಕೋರ್ಟಿನಲ್ಲಿ ಸುಮಾರು ೭೫೨, ಹೈಕೋರ್ಟ್ ಲೆವಲ್‌ನಲ್ಲಿ ೫೨೦, ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ೨೬೭ ಇದೆ ಅಂತ ಹೇಳಿದ್ದೀರಿ. ಇದರ ಬಗ್ಗೆ ವಿಶೇಷ ಗಮನಕೊಟ್ಟು ಆದಷ್ಟು ಬೇಗನೆ ಇದನ್ನು ನಿರ್ಣಯ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ವರ್ಷಾನು ಗಟ್ಟಲೆ ಈ ಕೇಸ್‌ಗಳು ಪೆಂಡಿಂಗ್ ಇದ್ದರೆ ಅದು ವಕ್ಫ್ ಇನ್ಸ್ಟಿಟ್ಯೂಷನ್‌ಗಳಿಗೆ ಲಾಸ್ ಆಗುತ್ತದೆ. ಡಿಸ್‌ಪ್ಯೂಟ್‌ಗಳು ಹಾಗೆಯೇ ಉಳಿದರೆ ಅದನ್ನು ಡೆವಲಪ್‌ಮೆಂಟ್ ಮಾಡುವುದಕ್ಕೆ ಅವಕಾಶ ಸಿಗುವುದಿಲ್ಲ. ತಮ್ಮ ವಕೀಲರು ಇದ್ದಾರೆ, ಅವರ ಮೂಲಕ ಜಾಸ್ತಿ ಗಮನ ಕೊಟ್ಟು ಆದಷ್ಟು ಬೇಗ ಈ ಏನು ಕೇಸುಗಳು ಪೆಂಡಿಂಗ್ ಇವೆ, ಇವುಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ನಮ್ಮ ಕಡೆ ಪ್ರಾವಿಶನ್ ಇಲ್ಲದಿದ್ದರೆ ನೀವು ಕೇಂದ್ರ ಸರ್ಕಾರಕ್ಕೆ ಒತ್ತಾಯ ತಂದು ಒಂದು ಸ್ಪೆಶಲ್ ಟ್ರಿಬ್ಯುನಲ್ ರಚನೆ ಮಾಡಲು ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸಲಹೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಮತ್ತು ವಕ್ಫ್ ಬೋರ್ಡ್ ವತಿಯಿಂದಾಗಲೀ ಒಂದು ಹೊಸದಾಗಿ ಒಂದು ಮಂಡಲಿಯನ್ನು ರಚಿಸಿ, ಈ ಬಡವರಿಗೆ ವಿಶೇಷವಾಗಿ ಮೈನಾರಟೀಸ್‌ಗೆ ಒಂದು ಹೌಸಿಂಗ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ವಕ್ಫ್ ಬೋರ್ಡ್ ವತಿಯಿಂದ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಏಕೆಂದರೆ ಸ್ಲಮ್‌ಗಳಲ್ಲೇ ೯೦ ಪರ್ಸೆಂಟ್‌ನಷ್ಟು ಮೈನಾರಿಟೀಸ್ ಜನರು ವಾಸವಾಗಿರುವುದು. ಅವರಿಗೆ ಅಲ್ಲಿ ಯಾವುದೇ ಸೌಕರ್ಯ ಇಲ್ಲ ಯಾವುದೇ ಸಹಾಯ ಇಲ್ಲ. ಅದಕ್ಕೋಸ್ಕರ ವಕ್ಫ್‌ಬೋರ್ಡ್ ವತಿಯಿಂದಾಗಲೀ ಅಥವಾ ಬೇರೆ ಒಂದು ಮೈನಾರಿಟೀಸ್ ಹೌಸಿಂಗ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ರಚನೆ ಮಾಡಬೇಕೆಂದು ಒಂದು ಸಲಹೆ ಕೊಟ್ಟು ಈ ದಿವಸ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಉಪಾಧ್ಯಕ್ಷಿಣಿಯವರೇ, ನನಗೆ ತಾವು ಕೊನೆಯಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದು ನೋಡಿ ನನಗೆ ಕಾಲೇಜು ಜೀವನದ ನೆನಪು ಬರುತ್ತದೆ. ಆತ್ಮ ಕರೆದು ಬಹಳ ಕಷ್ಟಪಟ್ಟು ನಮಗೆ ಸಮಯ ಕೊಡುತ್ತಿದ್ದೀರಿ......

ಉಪಾಧ್ಯಕ್ಷರು.—ಏಳು ಗಂಟೆವರೆಗೂ ಸಮಯ ಇದೆಯಲ್ಲ ?

ಶ್ರೀ ಎಲ್. ಆರ್. ಶಿವರಾಮೇಗೌಡ.—ಕಾಲೇಜಿನಲ್ಲಿ ಹೇಗೆ ಎಂದರೆ ಕೊನೆಯ ಬೆಂಚಿನಲ್ಲಿ ಕುಳಿತವರನ್ನು ಪ್ರಿನ್ಸಿಪಾಲರು ನೋಡುವುದೇ ಕಷ್ಟ. ಇಲ್ಲಿ ಹಾಗೆ ಆಗಿದೆ ತಾವು ನಮ್ಮ ಕಡೆಗೂ ಸ್ವಲ್ಪ ಗಮನ ಕೊಟ್ಟು, ನಮ್ಮನ್ನು ರಕ್ಷಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇವತ್ತು ಸಹಕಾರದ ಉದ್ಯಮಗಳು, ವಿದ್ಯುತ್ ಯೋಜನೆಗಳು, ವಕ್ಫ್, ಚಿಕ್ಕಪುಟ್ಟ ಉದ್ಯಮಗಳು, ರೇಷ್ಮೆ ವ್ಯವಸಾಯ ಈ ಇಲಾಖಾ ಬೇಡಿಕೆಗಳಿಗೆ ನಮ್ಮ ಬೆಂಬಲವನ್ನು ಸೂಚಿಸಿ, ನನ್ನ ನಾಲ್ಕು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಇತ್ತೀಚೆಗೆ ರಾಜ್ಯದಲ್ಲಿ ಕೈಗಾರಿಕಾ ಚಟುವಟಿಕೆಗಳು ಡೆಡ್ ಆಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ೪,೭೦೦ ಕೋಟಿ ರೂಪಾಯಿ ಬಂಡವಾಳವನ್ನು ಹೂಡಿರತಕ್ಕ ನಾವು ಈ ಪಬ್ಲಿಕ್ ಸೆಕ್ಟರ್‌ಗಳಲ್ಲಿ, ಸುಮಾರು ೨೬–೨೭ ಕಂಪನಿಗಳು ಲಾಸ್‌ನಲ್ಲಿ ನಡೆಯುವುದನ್ನು ನಾವು ನೋಡುತ್ತಿದ್ದೇವೆ. ಎಷ್ಟು ಲಾಸ್ ಇದೆ ಎಂದು ಹೇಳಿದರೆ, ೯೦೦ ಕೋಟಿ ಲಾಸ್ ಇದೆ. ಯಾವುದಾದರೂ ಪ್ರೈವೇಟ್ ಕಂಪನಿ ಮಾಲೀಕ, ೧ ಲಕ್ಷ ಅಥವಾ ೨ ಲಕ್ಷ ಬಂಡವಾಳ ಹಾಕಿ, ಅದರಲ್ಲಿ ೧೦ ಸಾವಿರ ರೂಪಾಯಿ ಲಾಸ್ ಆದರೂ ಅವನು ಮುಳುಗಿ ಹೋಗುತ್ತಾನೆ. ಆದರೆ ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳಿಂದ ಇವತ್ತು ೯೦೦ ಕೋಟಿ ರೂಪಾಯಿಗಳ ಹೊಡೆತ ನಮ್ಮ ರಾಜ್ಯ ಸರ್ಕಾರದ ಮೇಲೆ ಬೀಳುತ್ತಿದೆ ಎಂದು ಹೇಳಿದರೆ, ತಪ್ಪಾಗುವುದಿಲ್ಲ. ಇದಕ್ಕೆ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಒಂದು ವಿಚಾರವನ್ನು ತಮ್ಮ ಮೂಲಕ ಸರ್ಕಾರದವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಹೊಸ ಇನ್‌ಸೆಂಟೀವ್ ಇಂಡಸ್ಟ್ರೀಸ್ ಸ್ಕೀಮನ್ನು ತಾವು ಮಾಡಬೇಕೆಂದು ನನ್ನ ವಾದ. ಸಬ್ಸಿಡಿ ಸ್ಕೀಮನ್ನು ಅಬಾಲಿಷ್ ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಏಕೆಂದರೆ, ೧೯೮೩ನೇ ಇಸವಿಯಿಂದ, ೧೯೮೯ನೇ ಇಸವಿಯವರೆಗೆ, ಸಬ್ಸಿಡಿ ನೋಡಿದರೆ, ಈ ರಾಜ್ಯದಲ್ಲಿ ೮೦ ಕೋಟಿ ಸಬ್ಸಿಡಿ ಕೊಡದೇ ಬಾಕಿ ಇದ್ದು, ಇದರ ನೆಪದಲ್ಲಿ ಎಷ್ಟೋ ಕೈಗಾರಿಕೆಗಳು ಕುಂಠಿತವಾಗಿರುವುದಕ್ಕೆ ಅಥವಾ ರೋಗಗ್ರಸ್ಥವಾಗಿರುವುದಕ್ಕೆ ಕಾರಣ ಎನ್ನುವುದನ್ನು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ನಮ್ಮ ಸರ್ಕಾರ ಬಂದಮೇಲೆ ಸುಮಾರು ೫೦ ಕೋಟಿ ರೂಪಾಯಿ ಬಿಡುಗಡೆ ಮಾಡಿದೆ, ಇನ್ನೂ ೩೦ ಕೋಟಿ ಬಿಡುಗಡೆ ಮಾಡಬೇಕು. ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ, ಈ ಕೈಗಾರಿಕೆಗಳು ಉಳಿಯಬೇಕಾದರೆ, ಈ ೩೦ ಕೋಟಿ ರೂಪಾಯಿಯನ್ನು ಶ್ರೀಮಂತರಿಗೆ ಕೊಡಬೇಕಾದ ದುಡ್ಡು ಅಲ್ಲ; ಗ್ರಾಮೀಣ ಪ್ರದೇಶದ ಕೈಗಾರಿಕೆಗಳಿಗೆ ಕೊಡಬೇಕಾದ ಹಣ. ಇದನ್ನು

ಸರ್ಕಾರ ಶೀಘ್ರವಾಗಿ ಬಿಡುಗಡೆ ಮಾಡಿ, ಆ ಕೈಗಾರಿಕೆಗಳ ಉಳಿವಿಗೆ ಬರಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಹೊಸ ಮಾದರಿ ವ್ಯವಸ್ಥೆ ಮಾಡಬೇಕು ; ಕಡಿಮೆ ದರದಲ್ಲಿ ನೀವು ಸಬ್ಸಿಡಿ ಕೊಡುವುದನ್ನು ನಿಲ್ಲಿಸಿ. ಸಬ್ಸಿಡಿ ಕೊಟ್ಟರೆ ಏನಾಗುತ್ತದೆಂದರೆ, ಸಬ್ಸಿಡಿ ಕೊಡುವಾಗಲೇ ಅಧಿಕಾರಿಗಳಿಗೆ ಅರ್ಧ ಕೊಡಬೇಕಾಗುತ್ತದೆ. ಯಾವ ಕಂಪನಿ, ಯಾವ ಹಂತದಲ್ಲಿ ಮಾಡುತ್ತದೆಯೋ ಅದರಲ್ಲಿ ಅರ್ಧ ಕೈಗಾರಿಕೆಗಳಿಗೆ ಕೊಡಬೇಕು. ಉಳಿದ ಅರ್ಧವನ್ನು ಸರ್ಕಾರದವರು ಎಷ್ಟರಮಟ್ಟಿಗೆ ಕೊಡುತ್ತಾರೆ ಎಂಬುದು ಗೊತ್ತಿದೆ. ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ನಿಧಾನವಾಗಿ ಕೊಡುತ್ತಾರೆ. ಆದ್ದರಿಂದ ಈ ಸಬ್ಸಿಡಿ ಸ್ಕೀಮ್ ಅಬಾಲಿಷ್ ಮಾಡಿ, ಕಡಿಮೆ ದರದಲ್ಲಿ ವಿದ್ಯುತ್ ಕೊಡಿ. ಕಡಿಮೆ ದರದಲ್ಲಿ ನೆಲ ಕೊಡಿ, ಕಡಿಮೆ ದರದಲ್ಲಿ ನೀರು ಕೊಡಿ ; ಕಡಿಮೆ ದರದಲ್ಲಿ ಬಡ್ಡಿ ಹಾಕಿ ಅವರಿಗೆ ಸಾಲ ಕೊಡತಕ್ಕ ವ್ಯವಸ್ಥೆ ಮಾಡಿದರೆ, ಬಹುಶಃ ಈ ಕೈಗಾರಿಕಾ ರಂಗ ಏನಾದರೂ ಪುನಶ್ಚೇತನವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ ೪೫ ಸಾವಿರ ಸಣ್ಣ ಕೈಗಾರಿಕೆಗಳು ಇವೆ. ಸುಮಾರು ೭೦ ಪರ್ಸೆಂಟ್ ಕೈಗಾರಿಕೆಗಳು ನಷ್ಟದಲ್ಲಿವೆ. ಯಾವ ಜಿಲ್ಲೆಯಲ್ಲಿ ನೋಡಿದರೂ. ಡಿ.ಐ.ಸಿ.ಸಲ್ಲಿ ೪ ಕಾರುಗಳು ಓಡಾಡುವುದನ್ನು ಬಿಟ್ಟರೆ ಬೇರೆ ಏನೂ ಆಗುತ್ತಿಲ್ಲ. ಜನರಲ್ ಮ್ಯಾನೇಜರ್‌ಗೆ ಒಂದು, ಅಸಿಸ್ಟೆಂಟ್ ಡೈರಕ್ಟರಿಗೆ ಒಂದು, ಇನ್ನು ಸಣ್ಣಪುಟ್ಟ ಅಧಿಕಾರಿಗಳಿಗೆ ಒಂದು ; ಇವರು ಕಾರಗಳಲ್ಲಿ ಓಡಾಡುವುದನ್ನು ಬಿಟ್ಟರೆ ಬೇರೆ ಯಾವ ಚಟುವಟಿಕೆಗಳೂ ನಡೆಯುತ್ತಿಲ್ಲ. ಇದರ ಬಗ್ಗೆ ಸರ್ಕಾರದವರು ತೀವ್ರವಾಗಿ ಪರಿಶೀಲನೆ ಮಾಡಬೇಕು. ಈ ಡಿ.ಐ.ಸಿ.ಗಳನ್ನು ಪುನಶ್ಚೇತನ ಮಾಡಿ, ಆದ್ಯತೆ ಮೇಲೆ ಅಲ್ಲಿ ಏನು ಕಚ್ಚಾವಸ್ತುಗಳು ಸಿಗುತ್ತವೆ, ಅದರ ಮೇಲೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡತಕ್ಕ ಮಟ್ಟಕ ತಾವು ಹೋಗಬೇಕೆಂದು ಹೇಳುತ್ತೇನೆ. ಇತ್ತೀಚೆಗೆ ಯಾವ ಜಿಲ್ಲೆಯಲ್ಲಿಯೂ ಒಳ್ಳೆಯ ಕೈಗಾರಿಕೆಗಳು ಮುಂದಕ್ಕೆ ಬರಲಿಲ್ಲ. ಸನ್ಮಾನ್ಯ ಯಾಹ್ಯಾರವರು ಹೊಸದಾಗಿ ಮಂತ್ರಿಯಾಗಿ ಬಂದಿದ್ದಾರೆ, ಅವರ ಕಾಲದಲ್ಲಿ ಏನಾದರೂ ಪ್ರಯತ್ನ ಮಾಡುತ್ತಾರೆಂದರೆ ಇದುವರೆಗೂ ಏನೂ ಕಾಣುತ್ತಾ ಇಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತು ಕೈಗಾರಿಕೆಯಲ್ಲಿ ಮಾರ್ಕೆಟಿಂಗ್ ಸಿಸ್ಟಂ ಸರಿ ಇಲ್ಲ, ಈ ಮಾರ್ಕೆಟಿಂಗ್ ಸಿಸ್ಟಂನ್ನು ಬದಲಾವಣೆ ಮಾಡಬೇಕು, ಆ ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ ಕೊಡುವುದು ಸರ್ಕಾರದವರಿಂದ ನಿಧಾನವಾಗಿರಬಹುದು, ಬ್ಯಾಂಕಿನವರ ಹೊಡೆತ, ಕೆ.ಎಸ್.ಎಫ್.ಸಿ.ಯವರ ಹೊಡೆತ, ಐ.ಡಿ.ಬಿ.ಯವರ ಹೊಡೆತ, ಕೆ.ಇ.ಬಿ.ಯವರ ಹೊಡೆತ, ಮಾರ್ಕೆಟ್ ಹೊಡೆತ, ಲೇಬರ್ ಹೊಡೆತ ಇವೆಲ್ಲಾ ಹೊಡೆತಗಳಿಂದ ಇವತ್ತು ಕೈಗಾರಿಕೆಗಳು ಪೂರ್ಣವಾಗಿ ಸ್ಥಗಿತವಾಗುತ್ತಿರುವುದನ್ನು ಕಣ್ಣಿಂದ ನೋಡುತ್ತಿದ್ದೇವೆ. ಇವತ್ತು ತಾವು ಪೀಣ್ಯ ಕಡೆ ಹೋಗಿ, ಅಲ್ಲಿ ಕೈಗಾರಿಕಾ ರಂಗ ಸ್ಮಶಾನ ಮೌನ ಆಚರಿಸಿದೆ. ಸ್ಮಶಾನದಲ್ಲಿ ಯಾವರೀತಿ ಕಾಣುತ್ತೇವೆ ಅದೇರೀತಿ ಅಲ್ಲಿ ಕೈಗಾರಿಕೆಗಳು ಮೌನ ಆಚರಿಸುತ್ತಿವೆ. ತಾವು ಆ ಕಡೆ ಗಮನಹರಿಸಬೇಕು ; ತಾವು ತುಮಕೂರು ಕಡೆ ಹೋಗುವಾಗಲೋ ಅಥವಾ ಮಂಗಳೂರು ಕಡೆ ಹೋಗುವಾಗಲೋ ಸ್ವಲ್ಪ ಆ ಕಡೆ ಒಳಗಡೆ ಹೋದರೆ ಗೊತ್ತಾಗುತ್ತದೆ. ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ವೀಡಿಯೋ ಫ್ಯಾಕ್ಟರಿಗಳನ್ನು ನೋಡಿಕೊಂಡು ಹೋದರೆ ಗೊತ್ತಾಗುವುದಿಲ್ಲ. ಒಳಗೆ ಹೋದಾಗ ಕೈಗಾರಿಕೆಗಳ ಪರಿಸ್ಥಿತಿ ಏನಿದೆ ಎನ್ನುವುದು ಗೊತ್ತಾಗುತ್ತದೆ, ಯಾವ ಕೈಗಾರಿಕೆಗಳು, ಯಾವ ಮಟ್ಟಕ್ಕೆ ಇವೆ ಎನ್ನುವುದನ್ನು ತಾವು ಪರಿಶೀಲನೆ ಮಾಡಿ, ಒಂದೇ ಒಂದು ಉದಾಹರಣೆಯನ್ನು ತಮ್ಮ ಗಮನಕ್ಕೆ ತರುತ್ತೇನೆ, ಪೀಣ್ಯ ಭಾಗದ ಒಂದು ಫ್ಯಾಕ್ಟರಿಯ ಕ್ಲೋಸಿಂಗ್ ಸೆರಮನಿಯ ಇನ್‌ವಿಟೇಷನ್ ತಂದಿದ್ದೇನೆ, ತಮಗೆ ಕೊಡುತ್ತೇನೆ, ಇವೊತ್ತು ಯಾರಾದರೂ ಕರ್ನಾಟಕ ರಾಜ್ಯದಲ್ಲಿ ಕೈಗಾರಿಕೆ ಮಾಡುತ್ತೇವೆ ಎಂದು ಮುಂದೆ ಬಂದರೆ, ಮಾರವಾಡಿ ಸಿಂಧಿಗಳು ಹೊರರಾಜ್ಯದವರು ಬಂದರೆ,......

ಶ್ರೀ ಎಂ. ವೀರಪ್ಪಮೊಯಿಲಿ.—ಬೆಸ್ಟ್ ಕೈಗಾರಿಕೆ ಎಂದರೆ ಹೌಸಿಂಗ್ ಸೊಸೈಟಿ ಮತ್ತು ಮೆಡಿಕಲ್ ಕಾಲೇಜು.

ಶ್ರೀ ಎಲ್. ಆರ್. ಶಿವರಾಮೇಗೌಡ.—ಇಲ್ಲಿ ಕೈಹಾಕಿದರೆ ಗ್ರಾನೈಟ್‌ಗೆ ಕೈಹಾಕಬಹುದು. ಕಲ್ಲುಗಳು ಸಿಗುತ್ತವೆ. ಅದನ್ನು ಬಿಟ್ಟರೆ ಡಿಸ್ಟಿಲರಿ—ಎಕ್ಸೈಸ್‌ಗೆ ಕೈಹಾಕಬಹುದು. ಇನ್ನು ಯಾವ ಕೈಗಾರಿಕೆಗಳಿಗೂ ಸಹ ಯಾರೂ ಸಹ ಕೈಹಾಕುವುದಕ್ಕೆ ಆಗುವುದಿಲ್ಲ. ವಿಶ್ವೇಶ್ವರಯ್ಯನವರ ಕಾಲದಲ್ಲಿ ಭದ್ರಾವತಿಯಲ್ಲಿ ಒಂದು ಕಬ್ಬಿಣದ ಕೈಗಾರಿಕೆ ಪ್ರಾರಂಭ ಆಯಿತು, ಮೈಸೂರು ಬ್ಯಾಂಕ್ ಆಯಿತು, ಕೆ.ಆರ್.ಎಸ್. ಆಯಿತು. ಇಂತಹ ಬಹಳ ಪ್ರಸಿದ್ಧವಾಗಿರತಕ್ಕಂಥವುಗಳನ್ನು ಅವರ ಕಾಲದಲ್ಲಿ ಮಾಡಿದರು. ಇದಾದಮೇಲೆ ದೇವರಾಜ ಅರಸು ಅವರ ಕಾಲದಲ್ಲಿ ವಿಕ್ರಾಂತ್ ಟೈರ್ಸ್ ಮತ್ತು ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಜರ್ಸ್ ಇಂತಹ ಒಂದೆರಡು ಕೈಗಾರಿಕೆಗಳನ್ನು ನೋಡಿದೆವು. ಇತ್ತೀಚಿನ ದಿನಗಳಲ್ಲಿ ನಮ್ಮ ರಾಜ್ಯದಲ್ಲಿ ಕೈಗಾರಿಕೆ ಸಂಪೂರ್ಣವಾಗಿ ನಾಶವಾಗಿದೆ ಎಂಬ ಮಾತನ್ನು

ತಾವು ಒಪ್ಪಿಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಎನ್.ಆರ್.ಐ.ಗಳು ಬಹಳ ಕೈಗಾರಿಕೆಗಳನ್ನು ಮಾಡುತ್ತಾರೆ ಎಂದು ತಿಳಿದುಕೊಂಡು ಅವರನ್ನು ಕರೆದುಕೊಂಡು ಬರುವುದಕ್ಕೆ ಹೋಗಿದ್ದರು. ಇವತ್ತು ಬೆಳಗ್ಗೆ ಇದರ ಬಗ್ಗೆ ಕೈಗಾರಿಕಾ ಮಂತ್ರಿಗಳು ಇದರ ಬಗ್ಗೆ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ೯೦ ಜನ ಎನ್.ಆರ್.ಐ.ಗಳು ಬಂದಿದ್ದು ಅದರಲ್ಲಿ ೪೫ ಈಚೆಗೆ ಬರುತ್ತಿದೆ ಎಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅವು ಎಷ್ಟರಮಟ್ಟಿಗೆ ಬರುತ್ತವೋ ನೋಡಬೇಕಾಗಿದೆ. ಹೇಗೆ ಕೈಗಾರಿಕೆ ನಡೆಸುವುದಕ್ಕೆ ಸಾಧ್ಯ, ಎಷ್ಟು ಹಣ ಕೊಡುತ್ತಾರೆ, ಯಾವ ರೂಪದಲ್ಲಿ ಕೊಡುತ್ತಾರೆ, ಕೈಗಾರಿಕೋದ್ಯಮಿಗಳ ಕಥೆ ಏನು ಎನ್ನುವುದಕ್ಕೆ ಒಂದು ಉದಾಹರಣೆ ತಂದಿದ್ದೇನೆ. ೩೧-೫-೧೯೮೮ರಲ್ಲಿ ಪೀಣ್ಯದಲ್ಲಿ 'ಸಾಯಿ ಕಾಯರ್' ಎಂಬ ಒಂದು ಕೈಗಾರಿಕೆ ಪ್ರಾರಂಭವಾಯಿತು. ಅದಕ್ಕೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯವರು ೬೦ ಲಕ್ಷ ರೂಪಾಯಿಗಳ ಸಾಲವನ್ನು ಕೊಟ್ಟಿದ್ದಾರೆ. ಕೆ.ಎಸ್.ಎಫ್.ಸಿ. ಯವರು ಮಾತ್ರ ಹಣ ಕೊಟ್ಟುಬಿಡುತ್ತಾರೆ. ನನ್ನದೂ ಒಂದು ಸಣ್ಣ ಕೈಗಾರಿಕೆ ಇದೆ. ನಾನೂ ಅಲ್ಲಿಂದ ದುಡ್ಡು ತೆಗೆದುಕೊಂಡು ಕೈ ಸುಟ್ಟಿಕೊಂಡಿದ್ದೇನೆ. ಅವರು ಸಡನ್ ಆಗಿ ದುಡ್ಡು ಕೊಟ್ಟುಬಿಡುತ್ತಾರೆ. ಬ್ಯಾಂಕ್‌ನವರು ಕೊಡುತ್ತಾರೋ ಇಲ್ಲವೋ ಸಬ್ಸಿಡಿ ಕೊಡುತ್ತಾರೋ ಇಲ್ಲವೋ, ಬೇರೆ ಯಾರು ಯಾರು ಡೆವೆಲಪ್‌ಮೆಂಟ್ ಲೋನ್ಸ್ ಕೊಡುತ್ತಾರೋ ಇಲ್ಲವೋ ಎಂಬ ಗೋಜಿಗೇ ಇವರು ಹೋಗುವುದಿಲ್ಲ. ಪ್ರಯತ್ನಗಳು ಮಾಡುತ್ತಾರೆ, ಆಗಲಿಲ್ಲ ಎಂದರೆ ಅದರ ಆಫೀಸರ್ಸ್ ಬಂದು ಬೀಗ ಹಾಕುತ್ತಾರೆ. ಕೆ.ಎಸ್.ಎಫ್.ಸಿ.ಯವರು ಎಷ್ಟೋ ಕೈಗಾರಿಕೆಗಳಿಗೆ ಬೀಗ ಹಾಕಿದ್ದಾರೆ. ಕೆಲವರು ನಿಮ್ಮ ಹೆಂಗಸರ ಮಾಂಗಲ್ಯ ತಂದು ಕೊಡಿರಿ ಎಂದು ಹೇಳತಕ್ಕ ಅಧಿಕಾರಿಗಳು ಇದ್ದಾರೆ. ಕೈಗಾರಿಕೆಗಳಿಗೆ ಬೀಗ ಹಾಕತಕ್ಕಂಥ ಮಟ್ಟಕ್ಕೆ ಕೆ.ಎಸ್.ಎಫ್.ಸಿ ಅಧಿಕಾರಿಗಳು ಹೋಗಿದ್ದಾರೆ. ಇದರ ಬಗ್ಗೆ ತೀವ್ರವಾಗಿ ಯೋಚನೆ ಮಾಡಬೇಕು. ಒಂದು ಕಡೆ ಸಾವಿರ ಕೈಗಾರಿಕೆ ಮಾಡುತ್ತೇವೆ ಎಂದು ಹೇಳುವುದು ಮುಖ್ಯ ಅಲ್ಲ. ಕೈಗಾರಿಕೆಗಳನ್ನು ಸ್ಥಾಪನೆ ಮಾಡಿರುವವರಿಗೆ ಅದರ ಕಷ್ಟ ಗೊತ್ತಿದೆ. ಇವತ್ತು ಕಣ್ಣಲ್ಲಿ ನೀರು ಬರುವುದಿಲ್ಲ, ರಕ್ತ ಬರುತ್ತದೆ. ಇದರದ್ದು ಏನಾಗಿದೆ ಎಂದು ಕಥೆ ಹೇಳುತ್ತೇನೆ. ಹಳ್ಳಿಗಳ ಕಡೆ ಒಂದು ಗಾದೆ ಹೇಳುತ್ತಾರೆ. ಒಂದು ಮದುವೆಯಾಗುವುದೇ ಕಷ್ಟ, ಇನ್ನು ಎರಡನೇ ಮದುವೆಯಾದರಂತೂ ಬಹಳ ಕಷ್ಟ. ಏನು ಮಾಡಿದರೂ ಬಿಡುವಹಾಗೇ ಇಲ್ಲ. ಕಟ್ಟಿಕೊಳ್ಳುವ ಹಾಗೂ ಇಲ್ಲ. ಕೈಗಾರಿಕೆಗೆ ತಗಲು ಹಾಕಿಕೊಂಡರೆ ಎರಡನೇ ಮದುವೆ ಆದಹಾಗೆ. ಯಾವ ಕಾರಣಕ್ಕೂ ಬಿಡುವಹಾಗೆ ಇಲ್ಲ. ಬಿಡುವುದಕ್ಕೂ ಆಗುವುದಿಲ್ಲ, ಪ್ರಾಮಾಣಿಕವಾಗಿ ಕೈಗಾರಿಕೆ ಮಾಡುವುದಕ್ಕೆ ಹೋದರೆ ಅವರಪರಿಸ್ಥಿತಿ ಏನಾಗುತ್ತದೆ ಎಂದು ಗಮನಹರಿಸಬೇಕೆಂದು ಇದನ್ನು ಹೇಳುತ್ತೇನೆ. ಸಾಯಿ ಕಾಯರ್ಸ್ ಎಂಬುದು ಎರಡು ವರ್ಷದ ಹಿಂದೆ ಪ್ರಾರಂಭವಾದ ಕೈಗಾರಿಕೆ ೩೧-೫-೧೯೮೮ರಲ್ಲಿ ಇದರ ಬಗ್ಗೆ ಎಲ್ಲಾ ದಿನಪತ್ರಿಕೆಗಳಲ್ಲೂ ಪ್ರಕಟಮಾಡಿ ಬಹಳ ಜೋರಾಗಿ ಪ್ರಾರಂಭಮಾಡಿದರು. ಇದರ ಮಾಲೀಕರು ೩೬ ಲಕ್ಷ ರೂಪಾಯಿ ಬಂಡವಾಳ ಹಾಕಿದ್ದಾರೆ. ಮನೆ ಮಠ ಎಲ್ಲಾ ಮಾರಿ ಹಾಕಿದ್ದಾನೆ. ಇವಕ್ಕೆ ೬೦ ಲಕ್ಷ ರೂಪಾಯಿಗಳನ್ನು ಕೆ.ಎಸ್.ಎಫ್.ಸಿ.ಯವರು ಕೊಟ್ಟಿದ್ದಾರೆ. ಬ್ಯಾಂಕ್‌ನವರು ವರ್ಕಿಂಗ್ ಕ್ಯಾಪಿಟಲ್ ಕೊಡಲಿಲ್ಲ. ಎಲ್ಲಾ ತರಹದ ವ್ಯವಸ್ಥೆ ಮಾಡಿದರು, ಲಂಚ ಕೊಡುವುದಕ್ಕೆ ಮುಂದೆ ಬಂದರು ; ಆದರೂ ಅದನ್ನು ನಡೆಸುವುದಕ್ಕೆ ಆಗದೆ ಅವರು ಕೊನೆಗೆ ಯಾವ ಮಟ್ಟಕ್ಕೆ ಹೋಗಿದ್ದಾರೆ ಎಂದರೆ ಕ್ಲೋಸಿಂಗ್ ಸರೆಮನಿ ಇನ್‌ವಿಟೇಷನ್ ಮಾಡಿದ್ದಾರೆ. ಇನ್‌ವಿಟೇಷನ್‌ನ್ನು ಸನ್ಮಾನ್ಯ ಕೈಗಾರಿಕಾ ಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದಾರೆ. ರೆಪ್ರೆಸೆಂಟೇಷನ್ ಕೊಟ್ಟಿದ್ದಾರೆ. ಏನಾದರೂ ರೆಪ್ರೆಸೆಂಟೇಷನ್ ತಮಗೆ ಸರಿಯಾಗಿ ತಲುಪದೇ ಇದ್ದರೆ ತಮಗೆ ನಾನು ಕಳುಹಿಸಿಕೊಡುತ್ತೇನೆ, ತಮಗೇ ಅಡ್ರೆಸ್ ಮಾಡಿದ್ದಾರೆ ಇದನ್ನು ತಾವು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಮುಖ್ಯಮಂತ್ರಿಗಳಿಗೆ ಒಂದು ಮತ್ತು ನಿಮಗೆ ಒಂದು ಕಳುಹಿಸಿಕೊಟ್ಟಿದ್ದಾರೆ. ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದನ್ನು ಅವರ ಪರವಾಗಿ ಕೈಗಾರಿಕಾ ಡೆಪ್ಯುಟಿ ಮಿನಿಸ್ಟರ್‌ರವರಿಗೆ ಕೊಡುತ್ತೇನೆ.

"Cordially invite you to the closing ceremony of their newly opened unit.

Prof. Madhu Dhandavate, Hon. Minister for Finance, Government of India, will preside.

Mr. Y. S. Hegde, Chairman, Corporation Bank will close the unit and hand over the key to the Managing Director, K. S. F. C.

Mr. Y. K. Puttaswamy Gowda, Managing Director, KSFC will take over the possession of the Unit.

CHIEF GUEST

Mr. Srikanta Jena, Hon. Minister of State for Small Scale Industries, Government of India.

Mr. Ramakrishna Hegde, Deputy Chairman, Planning Commission, New Delhi.

Mr. Veerendra Patil, Hon. Chief Minister, Government of Karnataka.

Mr. S. M. Yahya, Minister for Industries.

Mrs. Suma Vasanth, Dy. Minister for Industries and Commerce.

Since the Corporation Bank is primarily responsible for closing the Unit, its Chairman, Mr. Y. S. Hegde, has been invited to deliver the key to the Managing Director, KSFC.

Date and time will be decided as per the convenience of the above dignitaries after the approval.

ಎಂದು ಹೇಳಿದ್ದಾರೆ. ದಯಮಾಡಿ ಈ ಸದನದಲ್ಲಿ ಅವರಿಗೆ ಟೈಮ್ ಕೊಡಬೇಕು. ಈ ಕೈಗಾರಿಕೆಯಲ್ಲಿ ಮಾಲೀಕರು ಮೋಸ ಮಾಡಿದ್ದಾರೆಯೋ ಇಲ್ಲವೇ ಈ ಕೈಗಾರಿಕೆಗೆ ಹಣಕಾಸಿನ ಸಂಸ್ಥೆಯವರು ತಪ್ಪಿದೆಯೋ ತಪ್ಪು ಇಲ್ಲಿ ಯಾರಿಂದ ಆಗಿದೆ? ಇದು ಬಹಳ ಗಂಭೀರವಾದ ವಿಚಾರ ಎಂದು ಮಾನ್ಯ ಮಂತ್ರಿಗಳು ಪರಿಗಣಿಸಿ ಇದರ ಬಗ್ಗೆ ಒಂದು ಎನ್‌ಕ್ವೈರಿ ಆಗುವಂತಹ ವ್ಯವಸ್ಥೆ ಮಾಡಬೇಕು. ಕರ್ನಾಟಕ ರಾಜ್ಯ ಹಣಕಾಸಿನ ಸಂಸ್ಥೆಯವರು ಹಣ ಕೊಟ್ಟಿದ್ದಾರೆ. ಆದರೆ ಬ್ಯಾಂಕ್‌ನಿಂದ ಅವರಿಗೆ ಬರಬೇಕಾಗಿದ್ದಂತಹ ವರ್ಕಿಂಗ್ ಕ್ಯಾಪಿಟಲ್ ಹಣ ಬಿಡುಗಡೆ ಮಾಡಿರದಿದ್ದರೆ ತಾವು ಬ್ಯಾಂಕ್‌ನವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇದರಲ್ಲಿ ಸುಮಾರು ೩೬ ಲಕ್ಷ ರೂಪಾಯಿಗಳಷ್ಟು ಆ ಮಾಲೀಕನ ಬಂಡವಾಳ ಕೂಡ ಇದೆ. ಈಗ ಸುಮಾರು ೯೦೦ ಕೋಟಿ ರೂಪಾಯಿಗಳು ಈ ಸರ್ಕಾರದ ಕೈಗಾರಿಕೆಗಳಿಂದ ರಾಜ್ಯಕ್ಕೆ ನಷ್ಟವಾಗುತ್ತಿದೆ; ಆದ್ದರಿಂದ ಇದರ ಬಗ್ಗೆ ಚಿಂತೆ ಇಲ್ಲ. ಏಕೆಂದರೆ ಸರ್ಕಾರದ್ದು ೬೦ ಲಕ್ಷ ರೂಪಾಯಿಗಳು ಮಾತ್ರ ಹೋಗುತ್ತದೆ. ಇನ್ನುಳಿದ ೩೬ ಲಕ್ಷ ರೂಪಾಯಿಗಳನ್ನು ಆತ ತನ್ನ ಮನೆ ಮಠ ಮಾರಿ ಇದರಲ್ಲಿ ತೊಡಗಿಸಿರತಕ್ಕಂಥಾದ್ದು ಇದೆ. ಈಗ ಆತನ ಗತಿ ಏನು? ಇದನ್ನೆಲ್ಲಾ ಮಾನ್ಯ ಮಂತ್ರಿಗಳು ಗಮನಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇದಾದ ಮೇಲೆ ನಮ್ಮ ಪಬ್ಲಿಕ್ ಸೆಕ್ಟರ್‌ನಲ್ಲಿರತಕ್ಕಂಥ ಕೈಗಾರಿಕೆಗಳ ಬಗ್ಗೆ ತಮ್ಮ ಗಮನಹರಿಸಬೇಕಾಗುತ್ತದೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ವಿಕ್ರಾಂತ್ ಟೈರ್ಸ್ ಫ್ಯಾಕ್ಟರಿ ಮೈಸೂರಿನಲ್ಲಿ ಇದೆ. ಇದು ನಮ್ಮ ಮಾನ್ಯ ದಿವಂಗತ ದೇವರಾಜು ಅರಸ್‌ರವರ ಹೆಮ್ಮೆಯ ಕೈಗಾರಿಕೆ. ಈ ಕಂಪನಿಯಲ್ಲಿ ಎಷ್ಟು ಅವ್ಯವಹಾರ ನಡೆದಿದೆ ಎಂದರೆ ಹೇಳುವುದಕ್ಕೇ ತೀರದು. ಇದು ಜಾಯಿಂಟ್ ಸೆಕ್ಟರ್ ಕಂಪನಿ ಎಂದು ನಾವು ಕರೆಯುತ್ತೇವೆ. ಇದರಲ್ಲಿ ನಮ್ಮ ಸರ್ಕಾರದ್ದು ೩೬ ಪರ್ಸೆಂಟ್ ಶೇರು ಇದೆ. ಹೊರಗಡೆಯುವರ ಶೇರು ಸಹ ಇದೆ. ಇತ್ತೀಚೆಗೆ ಅಲ್ಲಿಗೆ ಒಬ್ಬ ಹೊಸ ಎಂ.ಡಿ. ಬಂದಿದ್ದಾರೆ. ನಾನು ಅವರ ಹೆಸರು ಇಲ್ಲಿ ಹೇಳಬೇಕಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಹೇಳಿದಹಾಗೆ ನಾವು ಚಳುವಳಿ ಪ್ರಾರಂಭ ಮಾಡಬೇಕಾಗುತ್ತದೆ. ಆ ಎಂ.ಡಿ.ಯವರು ಕರ್ನಾಟಕ ಋಣ ತಿನ್ನುತ್ತಿದ್ದಾರೆ. ಅಲ್ಲಿ ಸುಮಾರು ೩೦೦ ರಿಂದ ೫೦೦ ಜನರಿಗೆ ಕೆಲಸ ಕೊಟ್ಟಿದ್ದಾರೆ. ೫೦೦ ಜನರಿಗೆ ಕೆಲಸ ಕೊಡತಕ್ಕಂಥ ಸಂದರ್ಭದಲ್ಲಿ ಭ್ರಷ್ಟಾಚಾರ ಬಹಳ ಚೆನ್ನಾಗಿ ಮಾಡಿದ್ದಾರೆ. ಅದರಲ್ಲಿ ಯಾವುದೇ ಅನುಮಾನ ಇಲ್ಲ. ಜನಜನಿತವಾಗಿದೆ. ಮೈಸೂರು ನಗರದಲ್ಲಿ ಯಾರು ಬೇಕಾದರೂ ಮಾತನಾಡಿಕೊಳ್ಳುವುದನ್ನು ನೀವುನಾವು ಎಲ್ಲರೂ ಕೇಳಬಹುದು. ಏನೆಂದರೆ, ದುಡ್ಡು ತೆಗೆದುಕೊಂಡು ವಿಕ್ರಾಂತ್ ಟೈರ್ ಫ್ಯಾಕ್ಟರಿಗೆ ಹೋದರೆ ಕೆಲಸ ಸಿಗುತ್ತದೆಂದು. ಸುಮಾರು ೧೫–೨೦ ಸಾವಿರ ರೂಪಾಯಿ ಡಿಪ್ಲೋಮೋ ಇಂಜನೀಯರ್‌ಗೆ ೨೫–೩೦ ಸಾವಿರ ರೂಪಾಯಿಗಳು ಬಿ.ಇ. ಇಂಜನೀಯರ್‌ಗೆ ತೆಗೆದುಕೊಂಡು ಕೆಲಸ ಕೊಡುತ್ತಿದ್ದಾರೆ. ಅದೂ ಕರ್ನಾಟಕ ರಾಜ್ಯದವರಿಗೆ ಯಾರಿಗೂ ಕೆಲಸ ಕೊಡುತ್ತಿಲ್ಲ. ಕರ್ನಾಟಕ ರಾಜ್ಯದ ನೆಲ, ಕರ್ನಾಟಕ ರಾಜ್ಯದ ದುಡ್ಡು ಕರ್ನಾಟಕ ರಾಜ್ಯದ ನೀರು ಕರ್ನಾಟಕದಲ್ಲಿರುವ ಒಬ್ಬರು ಎಮ್. ಡಿ. ಇವರು

ತಮಿಳುನಾಡಿನ ಜನರಿಗೆ ಕೆಲಸ ಕೊಡತಕ್ಕಂಥಾ ಒಂದು ದಿಟ್ಟ ಕೆಲಸ ಮಾಡುತ್ತಿದ್ದಾರೆ. ನಮ್ಮ ಸರ್ಕಾರ ಕಣ್ಣು ಮುಚ್ಚಿಕೊಂಡಿದೆ ಏನು ? ನಮ್ಮ ಮಾನ್ಯ ಮಂತ್ರಿಗಳಾದ ಎಸ್. ಎಂ. ಯೂಹಾ ಅವರು ತಮಿಳುನಾಡಿನವರು ಅಲ್ಲ. ಅವರು ಕರ್ನಾಟಕ ರಾಜ್ಯದವರು ಇದರ ಬಗ್ಗೆ ಅವರು ಗಮನಹರಿಸಬೇಕು. ಮುಖ್ಯವಾದ ಎಲ್ಲಾ ಕೆಲಸಗಳನ್ನು ತಮಿಳುನಾಡಿನವರಿಗೆ ಕೊಡುತ್ತಿದ್ದಾರೆ. ಆದರೆ ಇಲ್ಲಿ ಮಣ್ಣಿನ ಮಕ್ಕಳಿಗೆ ಕೆಲಸ ಇಲ್ಲ. ಕರ್ನಾಟಕ ರಾಜ್ಯದವರು ತಮಿಳುನಾಡಿನ ಫ್ಯಾಕ್ಟರಿಗಳಿಗೆ ಹೋದರೆ ಅವರು ಕೆಲಸ ಕೊಡುತ್ತಾರೇನು ? ಅಲ್ಲಿ ನಮಗೆ ಹೋಟೆಲ್‌ನಲ್ಲಿ ಲೋಟ ತೊಳೆಯುವ ಕೆಲಸ ಬಿಟ್ಟರೆ ಬೇರೆ ಯಾವ ಕೆಲಸವನ್ನು ಕರ್ನಾಟಕ ರಾಜ್ಯದವರಿಗೆ ಕೊಡುವುದಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಬೇಕು. ಇನ್ನೊಂದು ವಿಷಯವನ್ನು ನಾನು ತಮ್ಮ ಗಮನಕ್ಕೆ ತರುವುದಾದರೆ ೧೯೮೧ನೇ ಇಸವಿಯಲ್ಲಿ ವಿಕ್ರಾಂತ್ ರೇಡಿಯಲ್ ಟೈರ್ ಎಂಬ ಟೈರು ಮಾರುಕಟ್ಟೆಗೆ ಬರಬೇಕಾಗಿತ್ತು. ಮಾನ್ಯ ಅಧ್ಯಕ್ಷಣೀಯವರೇ, ತಾವು ಸಹ ಕಾರು ಇಟ್ಟುಕೊಂಡಿರುವವರು. ಈಗ ಹೊಸ ಕಾರಿನಲ್ಲಿ ಕುಳಿತು ಓಡಾಡುತ್ತಿದ್ದೀರಿ. ಈ ಕಾರುಗಳಿಗೆ ವಿಕ್ರಾಂತ್ ರೇಡಿಯೇಟರ್ ಟೈರ್ ೧೯೮೧ನೇ ಇಸವಿಯಲ್ಲಿ ಮಾರುಕಟ್ಟೆಗೆ ಬರಬೇಕಾಗಿತ್ತು. ಆದರೆ ನಿಮ್ಮ ಕಾರ್ಖಾನೆಯಿಂದ ಏತಕ್ಕೆ ಇದುವರೆವಿಗೂ ಬರಲಿಲ್ಲ ? ಒಂದು ಸಿವಿಲ್ ಇಂಜನೀಯರಿಂಗ್ ಕೆಲಸಕ್ಕೆ ಎರಡು ಕೋಟಿ ರೂ.ಗಳದ್ದು ಏನಿದೆ, ಅದನ್ನು ನ್ಯಾಷನಲ್ ಬಿಲ್ಡಿಂಗ್ ಕಾರ್ಪೊರೇಷನ್‌ನವರಿಗೆ ವಹಿಸಿದ್ದೀರಿ ನ್ಯಾಷನಲ್ ಬಿಲ್ಡಿಂಗ್ ಕಾರ್ಪೊರೇಷನ್‌ಗೆ ವಹಿಸಿದ ಮೇಲೆ ಕಾನೂನು ಪ್ರಕಾರ ಸಬ್‌ಲೀಜ್‌ಗೆ ಕೊಡುವಂತೆ ಇಲ್ಲ. ಆದರೆ ಅವರು ಬೇರೆಯವರಿಗೆ ಸಬ್‌ಲೀಜ್ ಕೊಟ್ಟು ಅದರಲ್ಲಿ ಒಬ್ಬ ಕಂಟ್ರಾಕ್ಟ್‌ದಾರರು ಮತ್ತು ನಿಮ್ಮ ಇಲಾಖೆಯವರು ಅಂದರೆ ವಿಕ್ರಾಂತ್ ಟೈರ್ಸ್‌ನವರು ಶಾಮೀಲಾಗಿ ಮಾರುಕಟ್ಟೆಗೆ ಅದು ಬರುವುದಕ್ಕೆ ತಡ ಮಾಡಿದ್ದಾರೆ. ಒಂದು ಸಾರಿ ಇದು ಆಡಳಿತ ಮಂಡಲಿಯಲ್ಲಿ ಒಂದು ಚರ್ಚೆ ಸಹ ಮಾಡಿದ್ದಾರೆ. ಇದರ ಬಗ್ಗೆ ತಾವು ದಯಮಾಡಿ ಉತ್ತರ ಕೊಡುವ ಸಂದರ್ಭದಲ್ಲಿ ನನಗೆ ಉತ್ತರ ಕೊಡಬೇಕು. ವಿಕ್ರಾಂತ್ ರೇಡಿಯಲ್ ಟೈರ್ ಬರುವುದಕ್ಕೆ ಏತಕ್ಕೆ ತಡ ಆಯಿತು. ಎನ್ನುವ ಬಗ್ಗೆ ಮಾಹಿತಿ ಕೊಡಬೇಕು. ಈ ಬಗ್ಗೆ ವಿಚಾರಣೆ ಆಗಬೇಕು. ಆಮೇಲೆ ಎನ್‌ಬಿಸಿ ಯವರಿಗೆ ಬಿಲ್ಡಿಂಗ್ ಕಾರ್ಪೊರೇಷನ್‌ಗೆ ಕೊಟ್ಟದ್ದನ್ನು ಸಬ್ ಲೀಜ್ ಕೊಡುವುದಕ್ಕೆ ಪ್ರಾವಿಜನ್ ಇದೆಯೋ ? ಇಲ್ಲದಿದ್ದರೆ ಆ ಅಧಿಕಾರಿಗಳ ಮೇಲೆ ನೀವು ಏನು ಕ್ರಮ ಕೈಗೊಂಡಿದ್ದೀರಿ ? ಇದರ ಬಗ್ಗೆ ಖಡಾಖಂಡಿತವಾಗಿ ಹೇಳಬೇಕು ಮತ್ತು ಇದರ ಬಗ್ಗೆ ಸಮಗ್ರವಾದ ಒಂದು ತನಿಖೆ ಆಗಬೇಕು. ಇದು ಈಗಾಗಲೇ ಮೊಲ್ಮನೆಯಲ್ಲಿ ಚರ್ಚೆ ಆಗಿದೆ. ತಮಿಳುನಾಡಿನವರಿಗೆ ಕೆಲಸ ಕೊಟ್ಟಿರುವ ಬಗ್ಗೆ ಸಹ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು. ಆಮೇಲೆ ವಿಕ್ರಾಂತ್ ಟೈರ್ಸ್‌ನಲ್ಲಿರುವ ಎಂ.ಡಿ ಯವರ ಮನೆಯವರ ಹೆಸರಿನಲ್ಲಿ ಒಂದು ಟೈರ್ ಫ್ಯಾಕ್ಟರಿಯನ್ನು ಹುಬ್ಬಳ್ಳಿಯಲ್ಲಿ ಪ್ರಾರಂಭ ಮಾಡಿದ್ದಾರೆ. ಅಲ್ಲಿಗೆ ಈ ಫ್ಯಾಕ್ಟರಿ ಸ್ಪೇರ್ ಪಾರ್ಟ್ಸ್ ಹೋಗುತ್ತವೋ ಅಥವಾ ಅಲ್ಲಿ ತಯಾರಾದ ಟೈರ್ಸ್ ಇಲ್ಲಿಗೆ ಬಂದು ವ್ಯಾಪಾರ ಆಗುತ್ತವೆಯೋ ಏನೋ ಗೊತ್ತಿಲ್ಲ. ಇದರ ಬಗ್ಗೆ ತಾವು ಸುದೀರ್ಘವಾಗಿ ತನಿಖೆ ಮಾಡಿಸಿ ತಪ್ಪು ಮಾಡಿದ ಅಧಿಕಾರಿಗಳನ್ನು ಬಲಿ ಹಾಕದಿದ್ದರೆ ನಿಜವಾಗಿಯೂ ಕರ್ನಾಟಕ ರಾಜ್ಯದ ಕೈಗಾರಿಕೆಗಳಿಗೆ ಕೊಟ್ಟ ಎಲ್ಲಾ ಹಣವನ್ನು ಲೂಟಿ ಮಾಡುತ್ತಾರೆ. ಮತ್ತು ವಿಕ್ರಾಂತ್ ಟೈರ್ಸ್‌ನಲ್ಲಿರುವ ಎಂ ಡಿ. ಯನ್ನು ಬದಲಾವಣೆ ಮಾಡಿ. ಅಲ್ಲಿ ಬೇರೆಯವರನ್ನು ಹಾಕಿ, ಕೆಲಸ ಕೊಡುವುದಿದ್ದರೆ ಕನ್ನಡ ನಾಡಿನ ಮಕ್ಕಳಿಗೆ ಕೆಲಸ ಕೊಡಿ; ಮಾನ್ಯ ವಾಟಾಳ್ ನಾಗರಾಜ್‌ರವರು ಮೊನ್ನೆ ಒಬ್ಬ ಎಂ.ಡಿ.ಗೆ ಫೋನ್ ಮಾಡುತ್ತಿದ್ದರು. ಅವರು ಯಾವುದೋ ಒಂದು ಸಂಸ್ಥೆ ಛೇರ್ಮನ್. ಅವರು ಹೇಳಿದರಂತೆ ಇನ್ನು ಎರಡು ಮೂರು ವರ್ಷಗಳಿಗ ನಾನು ಸಹ ರಾಜಕೀಯಕ್ಕೆ ಬರುತ್ತೇನೆಂದು ಹೇಳಿದರಂತೆ. ಅಲ್ಲಿ ಶಿಲ ವರ್ಷದ ತನಕ ಮಜಾ ಮಾಡಿ ಇಲ್ಲಿಗೂ ಸಹ ಬರುತ್ತೀರಾ. ಎಂದು ಇವರು ಹೇಳುತ್ತಿದ್ದರು ಹಾಗೂ ರಾಜಕೀಯ ಎಂಬುದು ಉಕ್ಕಿನ ಕಡಲೆ, ಪಾಪ ನಿಮ್ಮಂತಹವರು ಇಲ್ಲಿಗೆ ಬರಬಾರದು ಎಂದು ಹೇಳಿದರು. ಈ ಮಾತನ್ನು ನನ್ನ ಮುಂದೆಯೇ ಹೇಳಿದರು. ಈಗ ಇಂತಹವರು ಅಲ್ಲಿರುವವರೆಗೆ ಇವರ ಸೋಗು ಅಲ್ಲಿ ನಡೆಯುತ್ತದೆ. ಅಲ್ಲಿ ಮುಗಿಸಿಕೊಂಡು ನಂತರ ಈ ಕಡೆಗೆ ತಿರುಗುತ್ತಾರೆ. ವಾಲಂಟರಿ ರಿಟೈರ್‌ಮೆಂಟ್ ತೆಗೆದುಕೊಂಡಾದರೂ ಈ ಕಡೆಗೆ ಬರುತ್ತಾರೆ. ಈಗ ಸರ್ಕಾರದವರು ಒಂದು ಕಾನೂನು ಮಾಡಿದ್ದಾರೆ. ೧೫ ವರ್ಷಕ್ಕೆ ವಾಲೆಂಟರಿ ರಿಟೈರ್‌ಮೆಂಟ್ ತೆಗೆದುಕೊಳ್ಳಬಹುದು ಎಂದು ;

ಆದ್ದರಿಂದ ಅಲ್ಲಿ ಮುಗಿದ ಮೇಲೆ ಇಲ್ಲಿ ಸುರು ಮಾಡಿಕೊಳ್ಳೋಣ ಎಂದು ಈ ಕಡೆ ಬರುತ್ತಾರೆ. ಅದಕ್ಕೆ, ತಮಗೆ ಈ ಸಂದರ್ಭದಲ್ಲಿ ಈ ಸದನದ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಈ ನಿವೃತ್ತ ಐ. ಎ ಎಸ್. ಅಧಿಕಾರಿಗಳನ್ನು ರಾಜಕಾರಣಕ್ಕೆ ತರುವುದು ಬೇಡ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅವರಿಗೆ ಪ್ರೋತ್ಸಾಹ ಮಾಡುವುದೂ ಬೇಡ.

ಅವರು ಇಲ್ಲಿಗೆ ಬರುವುದೂ ಬೇಡ. ಅವರನ್ನು ಕರೆದುಕೊಂಡು ಬರುವುದಕ್ಕೂ ಒಂದು ವರ್ಗ ಇದೆ. ಅವರು ಯಾವ ಎಕ್ಸ್‌ಪ್ಯಾನ್ಷನ್ ಬೇಕಾದರೂ ಮಾಡುತ್ತಾರೆ, ಯಾವ ಟೈರ್ ಬೇಕಾದರೂ ಮಾಡುತ್ತಾರೆ. ಯಾವ ಟೈರ್ ಬೇಕಾದರೂ ಕೊಡುತ್ತಾರೆ. ಅವರ ಮನೆ ವ್ಯವಹಾರ ಮಾಡಿದ ಹಾಗೆ ಮಾಡುತ್ತಾರೆ, ಅದಕ್ಕೆ ಕಡಿವಾಣ ಹಾಕಬೇಕು ಎನ್ನತಕ್ಕಂಥದ್ದು ನನ್ನ ವಿನಂತಿ. ಮತ್ತೆ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ನಾವು ಬಾಂಬೆಯಲ್ಲಿ ಇರಲಿ, ದೆಲ್ಲಿಯಲ್ಲಿ ಇರಲಿ ಮೈಸೂರು ಸ್ಯಾಂಡಲ್ ಸೋಪು ಅಂದರೆ ಒಂದು ತರಹ ಸುಗಂಧದ ವಾಸನೆ ಅಲ್ಲಿಗೇ ಹೊಡೆಯುತ್ತದೆ. ಅಂಥಾ ಸಂಪತ್‌ಭರಿತವಾದಂಥ, ಸುಂದರವಾದಂಥ, ಕನ್ನಡ ನಾಡಿನ ಹೆಮ್ಮೆಯ ಹಿರಿಮೆಯ ಫ್ಯಾಕ್ಟರಿಯಲ್ಲಿ ತಯಾರಾದಂಥ ಈ ಸೋಪು. ಇವತ್ತು ಆ ಸೋಪಿನ ಪರಿಸ್ಥಿತಿ ಹೇಗಾಗಿದೆ ಎಂದರೆ ಯಾವ ಸರ್ಕಾರ ಬಂದರೂ ಈ ಕಾರ್ಖಾನೆಯನ್ನು ಉಳಿಸುವುದಕ್ಕಾಗುವುದಿಲ್ಲ; ಕಂಪ್ಲೀಟ್ ಹೋಗಿಬಿಡಬೇಕು ಆ ಮಟ್ಟಕ್ಕೆ ಅದು ಬಂದಿದೆ. ಈಗ ಎರಡು ಮೂರು ವರ್ಷಗಳ ಹಿಂದೆ ಆ ಫ್ಯಾಕ್ಟರಿಗೆ ಬಣ್ಣ ಗಿಣ್ಣ ಹೊಡೆಸಿದ್ದರು ಬಹಳ ಚೆನ್ನಾಗಿ ಕಾಣುತ್ತಿತ್ತು. ಇವತ್ತು ಅದು ಕಪ್ಪು ಹಿಡಿದಿದೆ. ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ಸುಂದರವಾದ ಕಲಾಕೃತಿಗಳನ್ನು ಮಾಡಿಸಿ ಫ್ಯಾಕ್ಟರಿಯ ಗೋಡೆ ಮೇಲೆ ಹಾಕಿಸಲಾಗಿತ್ತು. ಮೈಸೂರು ಸ್ಯಾಂಡಲ್ ಸೋಪ್ ಎಂದೂ ಬರೆಸಲಾಗಿತ್ತು. ಆದರೆ ಇವತ್ತು ಅದಕ್ಕೆಲ್ಲಾ ಹೊಗೆ ತುಂಬಿದೆ. ಆ ಫ್ಯಾಕ್ಟರಿಗೂ ಹೊಗೆ ತುಂಬಿದೆ. ಮತ್ತು ಮ್ಯಾನೇಜ್ ಮೆಂಟಿಗೂ ಹೊಗೆ ತುಂಬಿದೆ. ಇದು ಯಶವಂತಪುರದಲ್ಲಿರತಕ್ಕಂಥ ಫ್ಯಾಕ್ಟರಿ. ಈ ಫ್ಯಾಕ್ಟರಿಯಲ್ಲಿ ಇವತ್ತು ೫೫ ಕೋಟಿ ರೂಪಾಯಿಗಳ ಲಾಸ್ ಆಗಿದೆ. ೫೫ ಕೋಟಿ ಎಂದರೆ ನಮ್ಮ ಎರಡು ಮೂರು ತಾಲ್ಲೂಕುಗಳನ್ನು ಖರೀದಿಕೊಳ್ಳಬೇಕು. ಈ ಫ್ಯಾಕ್ಟರಿಯನ್ನು ಪುನಶ್ಚೇತನ ಮಾಡಬೇಕೆನ್ನುವ ವಿಷಯ ಕ್ಯಾಬಿನೆಟ್‌ನಲ್ಲಿ ಬಂದಿತ್ತೆಂದು ನನಗೆ ತಿಳಿದು ಬಂದಿದೆ. ಮಾನ್ಯ ಪಾಟೀಲ್ ನಾಗರಾಜ್ ರವರ ಕನ್ನಡ ಶಬ್ದಕೋಶದ ಪ್ರಕಾರ ಕಾಯಕಲ್ಪ ಕೊಡಲಿಕ್ಕೆ ಹೊರಟಿದ್ದಾರೆ. ಈ ಕಾಯಕಲ್ಪವನ್ನು ಮಾಡುವುದಕ್ಕೆ ೯ ಕೋಟಿ ರೂಪಾಯಿಗಳನ್ನು ಕೊಡಲು ಐ.ಡಿ.ಬಿ.ನವರು ಐ.ಎಫ್.ಸಿ.ನವರು ಒಪ್ಪಿಕೊಂಡಿದ್ದಾರೆ. ಎಲ್ಲಾ ಫೈನಾನ್ಸ್ ಇನ್ಸ್ಟಿಟ್ಯೂಷನ್‌ನವರು ಒಪ್ಪಿಕೊಂಡಿದ್ದಾರೆ, ಒಂದು ಕೋಟಿ ರೂಪಾಯಿಯನ್ನು ನಮ್ಮ ರಾಜ್ಯ ಸರ್ಕಾರ ಮೇ ತಿಂಗಳಲ್ಲಿಯೇ ಬಿಡುಗಡೆ ಮಾಡಬೇಕಾಗಿತ್ತು. ಇನ್ನೂ ಬಿಡುಗಡೆ ಮಾಡಿಲ್ಲ. ತಮಗೆ ವಿನಂತಿ ಮಾಡುತ್ತೇನೆ, ಈಗ ಬಿಡುಗಡೆ ಮಾಡಿದ್ದರೆ ಅದು ನನಗೆ ಗೊತ್ತಿಲ್ಲ. ನನಗೆ ಬಂದಿರತಕ್ಕ ಸುದ್ದಿ ಪ್ರಕಾರ ಇನ್ನೂ ಬಿಡುಗಡೆ ಮಾಡಿರಲಿಲ್ಲ, ಇಂಡಸ್ಟ್ರೀಸ್ ಬಗ್ಗೆ ಚರ್ಚೆ ಮೊನ್ನೆ ದಿವಸವೇ ಬರುತ್ತದೆಂದು ನಾನು ಎಲ್ಲಾ ರೆಡಿಮಾಡಿಕೊಂಡಿದ್ದೆ. ಈಗ ಏನಾಗಿದೆ ಎಂದರೆ, ನಮ್ಮ ರಾಜ್ಯದಲ್ಲಿ ಇಂಡಸ್ಟ್ರೀಸ್‌ದೇ ಒಂದು ಲಾಬಿ ಇದೆ. ನಮ್ಮ ಐ. ಎ. ಎಸ್. ಅಧಿಕಾರಿಗಳಿದ್ದಾರಲ್ಲ, ಇವರು ಏನು ತಿಳಿದುಕೊಂಡಿದ್ದಾರೆ, ನಾವು ಇಂದ್ರಲೋಕದಿಂದಲೋ, ಸುಂದರ ಲೋಕದಿಂದಲೋ ಬಂದುಬಿಟ್ಟಿದ್ದೇವೆಂದು ಹೇಳಿ ಅವರು ಎಲ್ಲಾ ಕಡೆ ಸೇರಿಕೊಂಡು ಏನು ಮಾಡುತ್ತಿದ್ದಾರೆಂದರೆ ಮೊದಲು ಫ್ಯಾಕ್ಟರಿಗಳನ್ನು ಲಾಸ್ ಮಾಡುವುದು, ಇವರದ್ದು ಇದೇ ಕೆಲಸ. ಇವರದೇ ಒಂದು ವರ್ಗ ಇದೆ. ಪಾಪ ಎಲ್ಲಾ ಐ.ಎ.ಎಸ್. ಆಫೀಸರ್‌ಗಳ ಮೇಲೂ ಈ ದೂರು ಮಾಡುತ್ತಿಲ್ಲ, ಕೆಲವರು ಇದ್ದಾರೆ. ಆದರೆ ಅವರು ಬೆರಳಲ್ಲಿ ಎಣಿಸತಕ್ಕಂಥವರು. ಆದರೆ ಹೆಚ್ಚಿನವರು ಈ ರಾಜ್ಯವನ್ನು ನುಂಗುವುದಕ್ಕೆ ಬಂದಿರತಕ್ಕವರು; ಈ ರಾಜ್ಯವನ್ನು ಹಾಳು ಮಾಡುವುದಕ್ಕೆ ಬಂದಿರತಕ್ಕವರು. ಅವರಮೇಲೆ ಸರ್ಕಾರ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳದಿದ್ದರೆ ಈ ಕೈಗಾರಿಕೆಗಳು ಉಳಿಯುವುದಿಲ್ಲ. ಈ ರಾಜ್ಯವೂ ಉಳಿಯುವುದಿಲ್ಲವೆನ್ನತಕ್ಕ ಮಾತನ್ನು ನಾನು ಹೇಳುತ್ತೇನೆ. ಇದರ ಬಗ್ಗೆ ಸರ್ಕಾರ ಎಚ್ಚರ ವಹಿಸಬೇಕು. ಅವರು ಏನು ಮಾಡುತ್ತಾರೆಂದರೆ ಫಸ್ಟ್ ಲಾಸ್ ಮಾಡುತ್ತಾರೆಂದರೆ, ಫಸ್ಟ್ ಲಾಸ್ ಮಾಡುತ್ತಾರೆ. ಹೇಗೆ ಲಾಸ್ ಮಾಡಬೇಕೆಂದು ಅವರಿಗೆ ಚೆನ್ನಾಗಿ ಗೊತ್ತು. ಒಂದು ಮಾತು ಹೇಳಬೇಕಾಗುತ್ತದೆ. ನಮ್ಮ ರೇಣುಕಾರಾಜೇಂದ್ರನ್ ರವರು ಹೊರಟುಹೋದರೋ ಏನೋ ಗೊತ್ತಾಗಲಿಲ್ಲ. ಅವರು ದುಡ್ಡು ತೆಗೆದುಕೊಂಡರೋ ಏನೋ ಗೊತ್ತಿಲ್ಲ. ರೇಣುಕಾರಾಜೇಂದ್ರನ್ ಮಂತ್ರಿಗಳಾಗಿದ್ದಾಗ ಒಂದೇ ಒಂದು ಚೆಕ್ ತೆಗೆದುಕೊಂಡಿದ್ದರು, ೨೫ ಸಾವಿರ ರೂಪಾಯಿಗಳದ್ದು ಯಾವನಿಗೋ ಒಬ್ಬ ಹುಡುಗನಿಗೆ ಕೆಲಸ ಕೊಡುತ್ತೇವೆಂದು ಹೇಳಿ. ಆದರ ತೆಗೆದುಕೊಂಡಿಲ್ಲವೆಂದು ವರದಿಯಲ್ಲಿ ಗೊತ್ತಾಗಿದೆ. ಆಗ ರಾಜಕೀಯ ಒತ್ತಡ ತಂದು ಅವರ ಮಂತ್ರಿಗಿರಿಯನ್ನು ಕಿತ್ತುಕೊಂಡು ಅವರನ್ನು ಆಚೆಗೆ ಕಳುಹಿಸಿಬಿಟ್ಟರು. ಇಷ್ಟು ಕೋಟಿ ಲಾಸ್ ಆಗಿದೆ ಇವತ್ತು. ೬೦ ಕೋಟಿ ಲಾಸ್ ಆಗಿರುವ ಹಣಕ್ಕೆ ಯಾರು ಹೊಣೆ ? ನೀವು ಏನಾದರೂ ಒಬ್ಬ ಅಧಿಕಾರಿಯನ್ನು, ನೀನು ಇಷ್ಟು ಲಾಸ್ ಮಾಡಿದ್ದೀಯಾ ಈ ಕಂಪನಿಯಲ್ಲಿ, ನಿನ್ನನ್ನು ಬಲಿ ಹಾಕುತ್ತೇವೆಂದು ಏನಾದರೂ ತೀರ್ಮಾನ ತೆಗೆದುಕೊಂಡಿರತಕ್ಕದ್ದು ಇದೆಯೇ ? ಯಾವ ಮಂತ್ರಿಗಳಿಗೂ ಇಲ್ಲ. ಈ ಸರ್ಕಾರ ಅಲ್ಲ, ಹಿಂದಿನ ಸರ್ಕಾರವಾಗಲೀ, ಅದರ ಆಚಿನ

ಸರ್ಕಾರವಾಗಲೀ ಯಾವ ಸರ್ಕಾರವಾಗಲೀ ಆ ಕೆಲಸವನ್ನು ಮಾಡಲೇ ಇಲ್ಲ, ನೀವುಗಳು ಏಕೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೆದರುತ್ತೀರಿ ? ಅದರಲ್ಲೂ ನಮ್ಮ ವಿರೇಂದ್ರಪಾಟೀಲರ ಸರ್ಕಾರದಲ್ಲಿ ೧೭೭ ಜನ ಶಾಸಕರಿದ್ದಾರೆ. ಯಾರನ್ನೂ ಕೇಳಬೇಕಾಗಿಲ್ಲ. ಹೇಳಬೇಕಾಗಿಲ್ಲ. ಯಾರನ್ನು ಬೇಕಾದರೂ ಮಟ್ಟ ಹಾಕಬಹುದು. ನಾವೂ ಸೇರಿಕೊಂಡು ೧೮೫ ಇದ್ದೇವೆ. ನಮಗೆ ಚಿಂತೆ ಇಲ್ಲ. ನಾವು ಏನು ಮಂತ್ರಿಗಿರಿ ಕೇಳಲಿಲ್ಲ. ಇನ್ನೊಂದಂ ಕೇಳಲಿಲ್ಲ. ದುಡ್ಡು ಕೇಳಲಿಲ್ಲ ; ಆದ್ದರಿಂದ...

ಶ್ರೀ ವಾಟಾಳ್ ನಾಗರಾಜ್.—ಕೊಟ್ಟರೆ ತೆಗೆದುಕೊಳ್ಳುತ್ತಾರೆ, ಆದರೆ ಕೊಡಂವಂತಿಲ್ಲ.

ಉಪಾಧ್ಯಕ್ಷರು :—ತಾವು ೧೫ ನಿಮಿಷಗಳಲ್ಲಿ ಮುಗಿಸಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—೫-೪೫ಕ್ಕೆ ಮುಗಿಸಿಬಿಡುತ್ತೇನೆ. ಕೆಲವು ಪ್ರಮುಖವಾದ ವಿಚಾರಗಳನ್ನು ಹೇಳಬೇಕಾಗಿದೆ. ಮುಖ್ಯವಾಗಿ...

೬-೧೫ ಪಿ. ಎಂ.

ಇವೊತ್ತು ನನಗೆ ತಿಳಿದುಬಂದ ಪ್ರಕಾರ ನಮ್ಮ ರಾಜ್ಯದ ಪ್ರತಿಷ್ಠಿತ ಕೈಗಾರಿಕೆ ಅದ ಈ ಕೆಎಸ್‌ಡಿಎಲ್‌ನ್ನು ಖಾಸಗಿಯವರಿಗೆ ಕೊಡಂವುದಕ್ಕೆ ವ್ಯವಸ್ಥೆ ನಡೆಯುತ್ತಾ ಇದೆ. ಇಂಥ ವಿಷಯಗಳು ಬಂದಾಗ ನಮ್ಮ ಮಿತ್ರರು ಚಳುವಳಿ ಮಾರ್ಗದ ಬಗ್ಗೆ ಏನು ಮಾತನಾಡುತ್ತಾರೆ. ಅದಕ್ಕೆ ನಾವೂ ಕೂಡ ಅವರ ಜೊತೆಯಲ್ಲಿ ಸೇರಿಕೊಳ್ಳಬೇಕಾಗುತ್ತದೆ. ಏನಿದ್ದರೂ ಇಂಥದ್ದಕ್ಕೆ ಅವಕಾಶ ಕೊಡಬಾರದು. ಖಾಸಗಿಯವರಿಗೆ ಕೊಡುವುದಕ್ಕೆ ಬಿಟ್ಟು ಅದಕ್ಕೆ ಪುನಃಶ್ಚೇತನವನ್ನು ಕೊಡುವ ಕೆಲಸವನ್ನು ಮಾಡಬೇಕು. ಇದನ್ನು ಪುನಃಶ್ಚೇತನಗೊಳಿಸಲು ರಿಸರ್ವ್ ಬ್ಯಾಂಕಿನವರು, ಐಡಿಬಿಐನವರು ಒಪ್ಪಿಕೊಂಡಿರುವುದರಿಂದ ಶೀಘ್ರಗತಿಯಲ್ಲಿ ಅವರ ಸಹಾಯ ಬಳಸಿಕೊಂಡು ಅದರ ಪುನರ್‌ನಿರ್ಮಾಣ ಕಾರ್ಯವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಈ ಒಂದು ಕಂಪನಿಗೆ ಸಂಬಂಧಪಟ್ಟಂತೆ ಶಿವಮೊಗ್ಗದಲ್ಲಿ ಮತ್ತು ಮೈಸೂರಿನಲ್ಲಿ ಎರಡು ಗಂಧದ ಎಣ್ಣೆಯ ಕಾರ್ಖಾನೆಗಳು ಇವೆ. ಒಂದು ವರ್ಷಕ್ಕೆ ಸುಮಾರು ೧೩ ಟನ್ ಎಣ್ಣೆಯನ್ನು ತಯಾರು ಮಾಡತಕ್ಕಂಥ ಸಾಮರ್ಥ್ಯವನ್ನು ಅವುಗಳು ಹೊಂದಿವೆ. ಇದರಲ್ಲಿ ತಯಾರಾದ ಉತ್ಪಾದನೆಗೆ ವಿಶ್ವವಿಖ್ಯಾತಿ ಇದ್ದರೂ ಕೂಡ ಇವೊತ್ತು ಇದನ್ನು ಸಹ ಮುಚ್ಚಬೇಕು, ಮಾರಾಟ ಮಾಡಬೇಕು ಎಂಬ ವಿಚಾರದಲ್ಲಿ ಇದ್ದಾರೆ. ಫೈನಾನ್ಸ್‌ಗೆ ಸಂಬಂಧಪಟ್ಟವರು, ಇಂಡಸ್ಟ್ರೀಗೆ ಸಂಬಂಧಪಟ್ಟವರು ಬಹಳ ಮುಖ್ಯ ಅಧಿಕಾರಿಗಳು ಇದ್ದಾರೆ. ಇವರೂ ಸಹಿತ ಈ ಸಂಚಿನಲ್ಲಿ ಶಾಮೀಲಾಗಿದ್ದಾರೆ. ಅಂಥವರಲ್ಲಿ ರಿಟೈರ್ಡ್ ಆಗಿರುವ ತಂಗಪ್ಪ ಎಂಬುವರು ಒಬ್ಬರು ಆತನು ನಿವೃತ್ತನಾದರೂ ಅಲ್ಲಿಯೇ ಕೆಲಸ ಮಾಡಿಕೊಂಡು ಮುಂದುವರಿಯತಕ್ಕಂಥ ಒಂದು ವಾಡಿಕೆಯನ್ನು ನಮ್ಮಲ್ಲಿ ಕಾಣಬಹುದು. ಇವರುಗಳೆಲ್ಲಾ ಸೇರಿಕೊಂಡು ಇದನ್ನು ಮಾರಾಟ ಮಾಡಂವುದಕ್ಕೆ ಒಂದು ಸಂಚನ್ನು ಮಾಡಿಕೊಳ್ಳುತ್ತಾ ಇದ್ದಾರೆ. ಅದಕ್ಕೆ ಅವಕಾಶ ಕೊಡದೆ ಅಂಥ ಸಂಚನ್ನು ನಿಲ್ಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಎಂಎಸ್‌ಐಎಲ್‌ನವರಿಗೆ ಕೆಎಸ್‌ಡಿಎಲ್‌ನವರ ಪರವಾಗಿ ಲಂಡನ್ ನಗರದಲ್ಲಿ ಒಂದು ಕಚೇರಿ ಇದೆ. ಇಂಥಾ ವೈಭವ ನಮಗೆ ಬೇಕೆ ? ೫೫ ಕೋಟಿ ರೂಪಾಯಿಗಳನ್ನು ನಾವು ನಷ್ಟ ಅನುಭವಿಸುತ್ತಿರುವಾಗ ಇಂಥ ಭವ್ಯತೆಯ ಅವಶ್ಯಕತೆ ಇದೆಯೇ ? ಇದನ್ನು ಇನ್ನಾದರೂ ಸ್ವಲ್ಪಕಾಲ ಮುಚ್ಚಬೇಕಾಗುತ್ತದೆ. ಪೋಲಾಗುತ್ತಿರುವ ಹಣವನ್ನು ತಡೆಗಟ್ಟಿ ಮುಂದೆ ನಡೆದರೆ ಮಾತ್ರ ಇಂಥ ಒಂದು ಉದ್ಯಮವನ್ನು ನಾವು ಉಳಿಸಿಕೊಳ್ಳಬಹುದಾಗಿದೆ. ಇಂಥಾದ್ದಕ್ಕೆಲ್ಲಾ ಮಾನ್ಯ ಸಚಿವರು ಕಡಿವಾಣ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ಈ ರೀತಿಯಲ್ಲಿ ನಷ್ಟದಲ್ಲಿ ನಡೆಯುವಲ್ಲಿ ಯಾರು ಜವಾಬ್ದಾರರು ಎಂದು ನೋಡಬೇಕು ಅಂಥವರನ್ನು ವಿಚಾರಣೆಗೆ ಒಳಪಡಿಸಬೇಕು. ಹಿಂದಿನ ಸರ್ಕಾರದವರು ಈ ಬಗ್ಗೆ ನ್ಯಾಯಾಂಗ ತನಿಖೆಗೆ ಒಳಪಡಿಸುತ್ತೇವೆ ಎಂದು ವಾಗ್ದಾನ ಕೊಟ್ಟಿದ್ದರು, ಬಹುಶಃ ಅವರು ಜಡ್ಜ್‌ರವರಿಗಾಗಿ ಹುಡುಕಾಟ ಮಾಡಿದರಂತೆ ಆದರೆ ಅವರಿಗೆ ಯಾರೂ ಸಿಗಲಿಲ್ಲ ಎಂದು ಕಾಣುತ್ತದೆ. ಈ ವಿಚಾರದಲ್ಲಿ ನ್ಯಾಯಾಂಗ ಏನಾದರೂ ತನಿಖೆ ಆಗಿದೆಯೇ ? ಆಗಿದ್ದಲ್ಲಿ ಅದರ ಪರಿಣಾಮಗಳು ಏನು ಎಂಬುದರ ಬಗ್ಗೆ ದಯಮಾಡಿ ಸದನಕ್ಕೆ ತಿಳಿಸಬೇಕೆಂದು ಕೋರುತ್ತೇನೆ. ಇವೊತ್ತು ನಮ್ಮ ಕಂಪನಿಗಳು ಚೆನ್ನಾಗಿ ಕೆಲಸ ಮಾಡಬೇಕಾದರೆ, ಲಾಭವನ್ನು ಗಳಿಸಬೇಕಾದರೆ, ಶೇಕಡಾ ೭೦-೮೦ರಷ್ಟು ಪ್ರೊಡಕ್ಷನ್ ಆಗಬೇಕು. ನಿಮ್ಮ ಟಾರ್ಗೆಟ್ ಏನಿದೆ ಅದರಲ್ಲಿ ಶೇಕಡಾ ೭೦ ರಿಂದ ೮೦ರ ವರೆಗೆ ಉತ್ಪಾದನೆ ಆದರೆ ಮಾತ್ರ ನಿಮ್ಮ ಕಂಪನಿಗಳು ಉಳಿಯುತ್ತವೆಯೇ ಹೊರತು ಇಲ್ಲವಾದಲ್ಲಿ ನಡೆಯುವುದಿಲ್ಲ. ಆದರೆ ಇವೊತ್ತು ನಿಮ್ಮಲ್ಲಿ ೩೦ ಪರ್ಸೆಂಟ್‌ನಷ್ಟು ಪ್ರೊಡಕ್ಷನ್‌ನಲ್ಲಿ ನಡೆಯುತ್ತವೆ. ಹೀಗಾದರೆ ನಷ್ಟವನ್ನು ಅನುಭವಿಸದೆ ಗತ್ಯಂತರವಿಲ್ಲ ಎಂದು ಹೇಳಬೇಕಾಗುತ್ತದೆ. ಆದ್ದರಿಂದ ಪ್ರೊಡಕ್ಷನ್‌ನ್ನು ಹೆಚ್ಚಿಗೆ ಮಾಡಿಕೊಳ್ಳಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ನಿರ್ದಿಷ್ಟವಾದ ಕಾರ್ಯಕ್ರಮವನ್ನು

ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಎಂ.ಸಿ.ಎಫ್. ಕಂಪನಿಯು ಲಾಭದಲ್ಲಿ ನಡೆಯುತ್ತಿದೆ ಎಂದು ಕೇಳಿದ್ದೇನೆ. ಆದರೂ ಈ ಕಂಪನಿಯನ್ನು ಸಹ ಯುಬಿ ಕಂಪನಿಯ ಮಾಲೀಕ ಮಲ್ಯರಿಗೆ ಕೊಡುವ ಬಗ್ಗೆ ವ್ಯಾಪಾರದ ಸಂಚು ನಡೆಯುತ್ತಿದೆ ಎಂದು ಕೇಳಿಬರುತ್ತಿದೆ. ಆ ಬಗ್ಗೆ ಎಲ್ಲಾ ಸಿದ್ಧತೆಗಳು ನಡೆದಿವೆ ಎಂದು ತಿಳಿದು ಬರುತ್ತದೆ, ಈ ಕಂಪನಿಯನ್ನು ಯಾವುದೇ ಸಂದರ್ಭದಲ್ಲಿ ಮಾರತಕ್ಕಂಥಾದ್ದಲ್ಲ ಎಂಬ ವಿಚಾರವನ್ನು ಒತ್ತಾಯಪೂರ್ವಕವಾಗಿ ಹೇಳಬಯಸುತ್ತೇನೆ.

ಶ್ರೀ ಗೋಪಿನಾಥ್ ಆರ್. ಸಾಂಡ್ರಾ.—ಎಂಸಿಎಫ್ ಹಾನಿಯಲ್ಲಿ ನಡೆಯುತ್ತಿದೆ ಎಂದು ಅಧಿಕಾರಿಗಳು ಮತ್ತು ಸರಕಾರದವರು ಈಗಾಗಲೇ ಅದನ್ನು ಬೇರೆಯವರಿಗೆ ಕೊಡಬೇಕೆಂದು ನಿರ್ಣಯ ಮಾಡಿದ್ದಾರೆ ಎಂದು ನನಗೆ ತಿಳಿದು ಬಂದಿದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಹೌದು, ಮಲ್ಯರಿಗೆ ಕೊಡಬೇಕೆಂದು ತೀರ್ಮಾನ ನಡೆಯುತ್ತಿದೆ. ಆ ವ್ಯಕ್ತಿ ಈಗಾಗಲೇ ಏರ್‌ಪೋರ್ಟ್ ತನಕ ಹೋಗಿದ್ದಾರೆ. ನನಗೆ ಅವರ ಮೇಲೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಕೈಗಾರಿಕೆಯಲ್ಲಿ ಬಹಳ ಮುಂದೆ ಬಂದಂಥ ಒಬ್ಬ ಕೈಗಾರಿಕೋದ್ಯಮಿ ಅವರು, ಅದು ಹೆಮ್ಮೆ ಪಡಬೇಕಾದ ವಿಚಾರವೇ. ಆದರೆ ನಮಗೆ ಇರುವ ಕಳಕಳಿ ನಮ್ಮ ಉದ್ದಿಮೆಗಳ ಬಗ್ಗೆ. ಆದ್ದರಿಂದ ನಮ್ಮ ರಾಜ್ಯದ ಹೆಮ್ಮೆಯ ಕೈಗಾರಿಕೆಗಳನ್ನು ಖಾಸಗಿಯವರಿಗೆ ಬಿಡಬಾರದು. ಏಕೆಂದರೆ ಮಾನ್ಯ ದೇವರಾಜ ಅರಸ್‌ರವರ ಕಾಲವನ್ನು ಬಿಟ್ಟರೆ ಆಮೇಲೆ ನಮ್ಮಲ್ಲಿ ಯಾವುದೇ ಒಂದು ಕೈಗಾರಿಕೆಗಳನ್ನು ಮಾಡಲಿಲ್ಲ. ಇತರ ರಾಜ್ಯಗಳನ್ನು ನೋಡಿದರೆ ಅವರು ಕೈಗಾರಿಕೆಗಳಲ್ಲಿ ಸಾಕಷ್ಟು ಮುಂದೆ ಬಂದಿದ್ದಾರೆ. ಆಂಧ್ರಪ್ರದೇಶದಲ್ಲಿ ನಾಗಾರ್ಜುನ ಗ್ರೂಪ್ ಕೈಗಾರಿಕೆಗಳು, ತಮಿಳುನಾಡಿನಲ್ಲಿ ಟಿಟಿಕೆ ಗ್ರೂಪ್ ತಯಾರಿಕೆಗಳು ಮತ್ತು ಉತ್ಪಾದನೆಗಳನ್ನು ನಾವು ಇವೊತ್ತು ನೋಡುತ್ತಾ ಇದ್ದೇವೆ. ಅವುಗಳು ಜನಪ್ರಿಯವಾಗಿವೆ. ರಾಷ್ಟ್ರೀಯ ಪ್ರಖ್ಯಾತಿಯನ್ನು ಗಳಿಸಿಕೊಂಡಿವೆ. ನಮ್ಮಲ್ಲಿ ಒಂದೂ ಕೂಡ ಅಂಥ ಉದ್ಯಮಗಳು ದೇವರಾಜ ಅರಸ್‌ರವರ ಕಾಲಾನಂತರ ಬರಲೇ ಇಲ್ಲ. ಆದುದರಿಂದ ನಮಗೆ ಇರತಕ್ಕಂಥ ಕೈಗಾರಿಕೆಗಳ ಸ್ಥಿತಿಗಳನ್ನು ನೋಡಿ ನೋವು ಉಂಟಾಗಿದೆ. ಇಂಥವುಗಳ ಬಗ್ಗೆ ನಾವು ತೀವ್ರ ಗಮನಹರಿಸಬೇಕು. ಇಲ್ಲವಾದಲ್ಲಿ ಅವುಗಳು ಉಳಿಯುವುದು ಕಷ್ಟಸಾಧ್ಯ. ಎಂಸಿಎಫ್‌ನಲ್ಲಿ ಹೈಡ್ರೋಫೊಟ್ಯಾಶ್ ಎಕ್ಸ್‌ಪ್ಯಾನ್‌ಷನ್ ಸಮಯದಲ್ಲಿ ನನಗೆ ತಿಳಿದಿರುವ ಹಾಗೆ ಲಕ್ಷಾಂತರ ರೂಪಾಯಿಗಳ ಭ್ರಷ್ಟಾಚಾರ ನಡೆದಿದೆ. ಈ ಘಟಕವನ್ನು ಪ್ರಾರಂಭ ಮಾಡತಕ್ಕಂಥ ಸಮಯದಲ್ಲಿ ಜನರೇಟರ್ ತಂದು ಅಳವಡಿಸತಕ್ಕಂಥ ಸಂದರ್ಭದಲ್ಲಿ ಭ್ರಷ್ಟಾಚಾರ ನಡೆದಿದೆ. ಈ ರಾಜ್ಯದ ಮುಖ್ಯ ಕಾರ್ಯದರ್ಶಿ ಆಗಿದ್ದವರು ಅಲ್ಲಿ ಚೇರ್‌ಮನ್ ಆಗಿದ್ದರು, ಅವರು ಎಷ್ಟು ಅಲ್ಲಿ ಆಸಕ್ತರಾಗಿದ್ದರು ಅಂದರೆ, ಮುಖ್ಯ ಕಾರ್ಯದರ್ಶಿ ಹುದ್ದೆಯನ್ನು ಬಿಡುವುದಕ್ಕೆ ಸಿದ್ಧರಾಗಿದ್ದರು. ಆದರೆ ಎಂಸಿಎಫ್ ಬಿಡುವುದಕ್ಕೆ ತಯಾರಾಗಿರಲಿಲ್ಲ. ಇದರಿಂದ ಎಂಸಿಎಫ್ ಎಂಥ ಸೋರ್ಸ್ ಇತ್ತು ಎಂದು ಎಲ್ಲರಿಗೂ ಅರ್ಥವಾಗಬೇಕು. ಇದಕ್ಕೆ ಮಾನ್ಯ ಸಚಿವರು ಬಿಗಿ ಕಡಿವಾಣ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ,

ಇನ್ನು ಮೈಸೂರ್ ಲ್ಯಾಂಪ್ಸ್ ಬಗ್ಗೆ ಹೇಳುವುದಾದರೆ, ಅಲ್ಲಿ ಕಳೆದ ನಾಲ್ಕಾರು ವರ್ಷಗಳಿಂದ ನೇಮಕಾತಿಯಲ್ಲಿ ಭ್ರಷ್ಟಾಚಾರ ನಡೆದಿದೆ. ಅಲ್ಲಿ ಎಕ್ಸ್‌ಪಾನ್‌ಷನ್ ಯುನಿಟ್‌ಗಳು ಕಡಿಮೆ ಇರುವುದರಿಂದ ನೇಮಕಾತಿಯಲ್ಲಿ ಬೇಕಾದಷ್ಟು ಭ್ರಷ್ಟಾಚಾರ ನಡೆಯುತ್ತಿದೆ. ಅಲ್ಲಿ ಒಂದು ರೀತಿ ಗುಟ್ಟಿನ ವ್ಯವಹಾರ ನೇಮಕಾತಿಯಲ್ಲಿ ನಡೆಯುತ್ತಿರುತ್ತದೆ. ಸೇಲ್ಸ್ ಮತ್ತು ಪರ್‌ಚೇಸ್‌ನಲ್ಲಿ ಒಳಗೊಳಗೆ ಲಂಚದ ವ್ಯವಹಾರ ಆಗುತ್ತದೆ. ಇದು ಸರಕಾರದ ಗಮನಕ್ಕೆ ಬಂದಿಲ್ಲವೇ ? ಹಿಂದೆ ಮೇಲ್ಮನೆಯಲ್ಲಿ ಇಲ್ಲಿನ ಅವ್ಯವಹಾರದ ಬಗ್ಗೆ ಶಾಸಕರೊಬ್ಬರು ಪ್ರಸ್ತಾಪ ಮಾಡಿದಾಗ ಸಂಬಂಧಪಟ್ಟ ಸಚಿವರು ಅದರ ಬಗ್ಗೆ ತನಿಖೆ ಮಾಡಿ ಅದರ ವರದಿಯನ್ನು ಕೊಡುವುದಾಗಿ ಹೇಳಿದ್ದರು ಅದು ಏನಾಗಿದೆ ಎಂದು ತಿಳಿಸಬೇಕು. ಇದು ಹಿಂದಿನ ಸರಕಾರದ ಅವಧಿಯಲ್ಲಿ ನಡೆದುದು. ಯಾವುದೇ ಉದ್ದಿಮೆಗಳಲ್ಲಿ ೫-೬ ವರ್ಷಗಳಿಂದ ಇರತಕ್ಕಂಥ ಎಂ. ಡಿ. ಗಳನ್ನು ಬದಲಾವಣೆ ಮಾಡಬೇಕು. ಯಾರ್ಯಾರು ಅಪಾದನೆಗಳಿಗೆ ಅವ್ಯವಹಾರಗಳಿಗೆ ಕಾರಣರಾಗಿದ್ದಾರೆ ಅವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಂಡರೆ ಮುಂದೆ ಎಲ್ಲವೂ ಸರಿಹೋಗುತ್ತದೆಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

ನಮ್ಮ ಇನ್ನೊಂದು ಪ್ರತಿಷ್ಠಿತ ಕಾರ್ಖಾನೆ ಎನ್‌ಜಿಇಎಫ್. ಇದು ಕಳೆದ ೩-೪ ತಿಂಗಳುಗಳಿಂದ ಬಿಡಿ. ಅದಕ್ಕೂ ಹಿಂದೆ ೩೪ ಕೋಟಿ ರೂಪಾಯಿಗಳ ನಷ್ಟ ಆಗಿದೆ. ಇದಕ್ಕೆ ಯಾರು ಹೊಣೆ ಮತ್ತು ಯಾರು ಜವಾಬ್ದಾರರು ಎಂದು ದಯಮಾಡಿ ತಿಳಿಸಬೇಕು. ಈಗ ಒಬ ಎಸ್.ಕೆ. ದಾಸ್ ಎನ್ನುವ ಒಳ್ಳೆಯ ಅಧಿಕಾರಿಯನ್ನು ಅಲ್ಲಿಗೆ ಹಾಕಿದ್ದೀರಿ. ಅವರು ಬಂದಮೇಲೆ ಈ ಕಂಪನಿ ಲಾಭವನ್ನು ಮಾಡಿಕೊಂಡಿದೆ. ಆದರೆ ಅವರನ್ನು ಬದಲಾವಣೆ ಮಾಡಲಾಯಿತು. ಇದನ್ನು ನೋಡಿದರೆ ನಮ್ಮ

ಸರ್ಕಾರಕ್ಕೆ ಲಾಭ ಮಾಡಿಕೊಡುವ ಅಧಿಕಾರಿಗಳು ಬೇಡ ಎಂದು ಕಾಣುತ್ತದೆ, ಅಂಥ ಒಂದು ಅನುಮಾನವೂ ಹುಟ್ಟುತ್ತದೆ. ಆಡಳಿತದಲ್ಲಿ ಬಿಗಿ ಉಂಟುಮಾಡಿ ಲಾಭವನ್ನು ಗಳಿಸಿಕೊಟ್ಟಂಥ ಅಧಿಕಾರಿಯನ್ನು ಬದಲಾವಣೆ ಮಾಡಿದ ಔಚಿತ್ಯವಾದರೂ ಏನು ? ಈ ಬಗ್ಗೆ ಅಲ್ಲಿನ ೭ ಸಾವಿರ ಜನ ಕಾರ್ಮಿಕರು ಇವೊತ್ತು ಬೀದಿಗಿಳಿದಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ಎರಡು ತಿಂಗಳ ಹಿಂದೆ ಎರಡು ದಿನಗಳ ಸ್ಟ್ರೈಕ್ ಅಲ್ಲಿ ಒಳಗಡೆ ಆಯಿತು. ಮೊನ್ನೆ ಇತ್ತೀಚೆಗೆ ಆ ಅಧಿಕಾರಿಯು ಅಲ್ಲಿಯೇ ಇರಬೇಕೆಂದು ಸುತ್ತುಗಟ್ಟಿ ಒತ್ತಾಯ ಮಾಡಿದರು, ಇಲ್ಲವಾದಲ್ಲಿ ನಾವುಗಳು ಸೀಮೆಎಣ್ಣೆ ಸುರಿದುಕೊಂಡು ಸಾಯುವುದಾಗಿ ತಮ್ಮ ವೇದನೆಯನ್ನು ತೋರ್ಪಡಿಸಿದರು. ಇದು ಅಧಿಕಾರಿಯ ದಕ್ಷತೆಯನ್ನು ತೋರಿಸುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ. ಸರಕಾರದ ಹಣ ಲೂಟಿ ಆದರೂ ಅಡ್ಡಿ ಇಲ್ಲ ಎನ್ನುವುದಾದರೆ ನೀವು ಚೆನ್ನಾಗಿ ಕೆಲಸ ಮಾಡುವಂತಹ...

ಶ್ರೀ ಕಾಗೋಡು ತಿಮ್ಮಪ್ಪ.—ಸರಕಾರದ ಮಟ್ಟದಲ್ಲಿ ನಡೆಯುತಕ್ಕಂಥ ಕಾರ್ಖಾನೆಗಳಲ್ಲಿ ನಷ್ಟ ಆಗದೇ ಹೋದರೆ ಅದು ಸರಕಾರದ ಕಾರ್ಖಾನೆ ಎಂದು ಕರೆಯಿಸಿಕೊಳ್ಳುವುದಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಈಗ ಈ ಎಂ.ಡಿ. ಅವರನ್ನು ತಾವು ಚೇಂಜ್ ಮಾಡಿದ ಔಚಿತ್ಯವನ್ನು ಈ ಸದನದ ಮುಂದಿಡಬೇಕು. ಮಾನ್ಯ ಮಂತ್ರಿಗಳು ಬಹಳ ಅನುಭವಿಗಳು. ದೇವರಾಜ ಅರಸು ಅವರ ಕಾಲದಲ್ಲಿ ಈ ರಾಜ್ಯದ ಹಣಕಾಸನ್ನು ನಿಯಂತ್ರಣ ಮಾಡಿದ ಶಕ್ತಿ ಇರತಕ್ಕವರು. ನಿಮ್ಮ ಕಾಲದಲ್ಲಿ ಏತಕ್ಕೆ ಈ ರೀತಿ ಆಯಿತು ಎಂದು ಗೊತ್ತಿಲ್ಲ. ಏಳು ಸಾವಿರ ಜನ ಕಾರ್ಮಿಕರು ಧರಣಿ ಮಾಡುತ್ತಾರೆನ್ನುವ ಮಟ್ಟಕ್ಕೆ ಹೋಗಿರಬೇಕಾದರೆ ಅಲ್ಲಿನ ಎಂ.ಡಿ. ಅವರನ್ನು ಚೇಂಜ್ ಮಾಡುವ ಔಚಿತ್ಯವೇನು? ಹಾಗಿದ್ದರೆ ಒಳ್ಳೆಯ ಎಂ.ಡಿ. ನಿಮಗೆ ಬೇಕಿಲ್ಲವೆ? ಈ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ಇಲ್ಲಿ ಇನ್ನೊಂದು ದೊಡ್ಡ ಹಗರಣ ನಡೆದಿದೆ. ಈ ವಿಚಾರದಲ್ಲಿ ಮೇಲ್ಮನೆಯ ಶಾಸಕರಾದ ಶ್ರೀಮಾನ್ ನಾಗೇಗೌಡರ ಜೊತೆಯಲ್ಲಿ ನಾನು ಕೋರ್ಟಿಗೆ ತಿರುಗಿ ಸಾಕಾಗಿದೆ. ಅದೇನೆಂದರೆ ಭಾರತೀಯ ನೌಕಾಪಡೆಗೆ ಬೇಕಾದ ಟಾರ್ಪಡೋ ಎಂಬ ವಸ್ತುವನ್ನು ಕೊಡುವಂತಹ ಸಂದರ್ಭದಲ್ಲಿ ನಡೆದಿರತಕ್ಕದ್ದು. ಅದನ್ನು ೧೯೮೧ ರಿಂದ ೧೯೮೭ರವರೆಗೆ ಸರಬರಾಜು ಮಾಡಿದ್ದಾರೆ. ಸರಬರಾಜು ಮಾಡಿದಂತಹ ಒಟ್ಟು ಹಣ ಏನಿದೆ, ಅದರಲ್ಲಿ ಕಮಿಷನ್ ಬರಬೇಕಾದುದು ಜರ್ಮನ್ನಿನ ಎ.ಇ.ಜಿ. ಕಂಪನಿಯಿಂದ ೮ ಕೋಟಿ ರೂಪಾಯಿಗಳು ಅದರಿಂದ ಕಮಿಷನ್ ಬರಬೇಕಾಗಿತ್ತು. ಒಂದಲ್ಲ, ಎರಡಲ್ಲ, ೮ ಕೋಟಿ ರೂಪಾಯಿ ಅಂದರೆ ಭಯವಾಗುತ್ತದೆ. ೮ ಕೋಟಿ ರೂಪಾಯಿ ಎಲ್ಲಿದೆ ಎಂದು ತನಿಖೆಯಾಗಬೇಕು. ಮಾನ್ಯ ಕೈಗಾರಿಕಾ ಮಂತ್ರಿಗಳು ಇದಕ್ಕೆ ಸ್ಪಷ್ಟೀಕರಣ ನೀಡಬೇಕು. ಎನ್.ಜಿ.ಇ.ಎಫ್. ಕಂಪನಿಯಲ್ಲಿ ವಾಲಂಟರಿ ರಿಟೈರ್‌ಮೆಂಟ್ ತೆಗೆದುಕೊಂಡಿರತಕ್ಕ ಅಧಿಕಾರಿ ಎ. ಇ. ಜಿ. ಮತ್ತು ಎನ್.ಜಿ.ಇ.ಎಫ್. ಸಹಯೋಗದ ಕಂಪನಿಗೆ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದಾರೆ, ಅವರ ಹೆಸರಿನಲ್ಲಿದೆ ಆ ಹಣ. ೯-೬-೯೦ರ ಪತ್ರಿಕೆಯೊಂದರಲ್ಲಿ ಈ ರೀತಿ ಬರೆಯುತ್ತಾರೆ. ಏನೆಂದರೆ ದೆಹಲಿಯ ಸಿಬಿಐ ನವರು ವರದಿ ಕೊಟ್ಟಿರುವಂತೆ ಈ ಎನ್.ಜಿ.ಇ.ಎಫ್. ಸಂಸ್ಥೆ ಸಾರ್ವಜನಿಕ ಸಂಸ್ಥೆಯಾಗಿರುತ್ತದೆ. ಈ ಸಂಸ್ಥೆಗೆ ಕಮಿಷನ್ ರೂಪದಲ್ಲಿ ಬರಬೇಕಾದ ಹಣವನ್ನು ಪಡೆಯುವುದಕ್ಕೆ ಸರ್ಕಾರದ ವತಿಯಿಂದ ಯಾವುದೇ ಪ್ರಯತ್ನ ಮಾಡಿಲ್ಲ. ಸರ್ಕಾರದ ವತಿಯಿಂದ ಈ ೮ ಕೋಟಿ ರೂಪಾಯಿಗಳನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಿಲ್ಲ. ಇವತ್ತು ಏನಾಗಿದೆ ಎಂದರೆ ೯-೬-೯೦ರಲ್ಲಿ ಪ್ರಕಟವಾದ ಸುದ್ದಿ ಪ್ರಕಾರ ಆ ಹಣ ಲಪಟಾವಣೆಯಾಗಿದೆ. ಇದರಲ್ಲಿ ಕಂಪನಿಯ ಡೈರೆಕ್ಟರ್ ಶರ್ಮಾ ಅವರು ಒಳಗೊಂಡಿದ್ದಾರೆಂದು ಸಿ.ಬಿ.ಐ. ವರದಿ ಖಚಿತಪಡಿಸಿದೆ. ಆ ಬಗ್ಗೆ ವಿಚಾರಣೆ ಮಾಡುವುದಾದರೆ ಸಂಬಂಧಪಟ್ಟ ದಾಖಲೆಗಳನ್ನು ನಾನು ಸದನದ ಮುಂದೆ ಇಡುತ್ತೇನೆ. ೧೯೮೩ರಲ್ಲಿ ಒಂದು ಪತ್ರ ಬರೆದು ಎಇಜಿ ಸಂಸ್ಥೆಯಿಂದ ಕಮಿಷನ್ ಪಡೆಯಲಿಕ್ಕೆ ಎನ್.ಜಿ.ಇ.ಎಫ್. ಸಂಸ್ಥೆಯವರು ಮಾಡಿದ ಪ್ರಯತ್ನಗಳಿಗೆ ತಡೆಹಾಕಿದ್ದಾರೆ. ಯಾರು ಎನ್.ಜಿ.ಇ.ಎಫ್. ಕಾರ್ಖಾನೆಯಲ್ಲಿ ಅಧಿಕಾರಿಯಾಗಿದ್ದರು ಅವರೇ ಈ ಎಇಜಿ. ಕಂಪನಿಯಿಂದ ಬರಬೇಕಾದ ಕಮಿಷನ್ ಹಣ ಬರಬೇಕಾಗಿಲ್ಲವೆಂದು ತಡೆ ಮಾಡಿದ್ದಾರೆ. ಇವೊತ್ತಿಗೂ ಕೂಡ ಎನ್.ಜಿ.ಇ.ಎಫ್. ಕಂಪನಿಯ ಬೋರ್ಡ್ ಆಫ್ ಡೈರೆಕ್ಟರ್ ಅವರು. ಈ ಬಗ್ಗೆ ವಿಚಾರಣೆ ಮಾಡಿ ರಾಜ್ಯದ ಜನತೆಗೆ ತಿಳಿಸಬೇಕು. ಯಾವ ಕಾರಣದಿಂದ ಎನ್.ಜಿ.ಇ.ಎಫ್. ಸಂಸ್ಥೆಗೆ ಬರಬೇಕಾದ ೮ ಕೋಟಿ ರೂಪಾಯಿಗಳನ್ನು ಲಪಟಾಯಿಸಿರತಕ್ಕ ವ್ಯಕ್ತಿಯನ್ನು ನೀವು ಎಇಜಿ ಮತ್ತು ಎನ್‌ಜಿಇಎಫ್. ಸಹಯೋಗ ಕಂಪನಿಗೆ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಮಾಡಿದಿರಿ ? ಇದರ ಔಚಿತ್ಯವೇನು ? ಆತ ಎನ್.ಜಿ.ಇ.ಎಫ್.ನಲ್ಲಿ ಬೋರ್ಡ್ ಆಫ್ ಡೈರೆಕ್ಟರ್ ಆಗಿದ್ದರ ಔಚಿತ್ಯವನ್ನು ಪ್ರಶ್ನೆ ಮಾಡುತ್ತಿದ್ದೇನೆ. ಇದಕ್ಕೆ ಉತ್ತರಿಸಬೇಕೆಂದು ನಾನು ಸರ್ಕಾರವನ್ನು

ಒತ್ತಾಯ ಮಾಡುತ್ತೇನೆ. ಉತ್ತರ ಕೊಡುವುದರ ಜೊತೆಗೆ ಕೂಡಲೇ ಅವರನ್ನು ಆ ಕಂಪನಿಯಿಂದ ತೆಗೆದುಹಾಕಬೇಕು. ಇನ್ನು ಮುಂದಕ್ಕೆ ಎಂಟು ಕೋಟಿ ರೂಪಾಯಿಗಳ ಹಣವನ್ನು ತೆಗೆದುಕೊಳ್ಳಲಿಕ್ಕೆ ಯಾವುದೇ ಕೈವಾಡ ನಡೆಯದಂತೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಈ ದಿಸೆಯಲ್ಲಿ ಪ್ರಯತ್ನ ಮಾಡಿದರೆ ಖಂಡಿತ ಇದು ಸಾಬೀತಾಗುತ್ತದೆ. ಸಾಬೀತಾದ ಮೇಲೆ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿ. ಆ ದುಡ್ಡು ಈಗ ಸ್ವಿಸ್ ಬ್ಯಾಂಕ್‌ನಲ್ಲಿದೆ. ಅದೂ ಕೂಡ ಪತ್ರಿಕೆಯಲ್ಲಿ ಬಂದಿದೆ. ನನ್ನ ಹತ್ತಿರ ಎಲಾ ಡೀಟೈಲ್ ಇದೆ. ಕೇಂದ್ರದ ಸಿಬಿಐ ಮೂಲಗಳು ಇದನ್ನು ಖಚಿತಪಡಿಸಿದ ಮೇಲೆ ಎಲ್ಲಾ ದಾಖಲೆಗಳು ಹೊರಗೆ ಬಂದಿವೆ. ಇದರ ಬಗ್ಗೆ ತಾವು ಸಮಗ್ರವಾದ ತನಿಖೆ ಮಾಡಿಸಿ ವರದಿಯನ್ನು ಈ ಸದನದ ಮುಂದಿಡಬೇಕು. ಇದರ ಬಗ್ಗೆ ಖಚಿತವಾದ ನಿಲುವನ್ನು ಸ್ಪಷ್ಟ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಕೈಗಾರಿಕಾ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಈ ಎನ್‌ಜಿಇಎಫ್‌ನ ೮ ಕೋಟಿ ರೂಪಾಯಿ ಹಣ ಎಲ್ಲಿದೆ ಎಂಬುದನ್ನು ಪತ್ತೆ ಮಾಡಿ ಅದನ್ನು ವಸೂಲು ಮಾಡುವ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳಬೇಕು.

ಉಪಾಧ್ಯಕ್ಷರು.—ಅರ್ಧಗಂಟೆ ತೆಗೆದುಕೊಂಡಿದ್ದೀರಿ. ಬೇಗ ಮುಗಿಸಿ ಬಿಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ತಾವು ಈಗಲೇ ಕುಳಿತುಕೊಳ್ಳಿ ಎಂದು ಹೇಳಿದರೆ ಕುಳಿತುಕೊಳ್ಳುತ್ತೇನೆ. ನಾನು ಇನ್ನು ೧೫ ನಿಮಿಷದಲ್ಲಿ ಮುಗಿಸುತ್ತೇನೆ. ನನಗೆ ಮಾತನಾಡಲು ತಾವು ೩-೪ ದಿವಸಗಳಿಂದ ಅವಕಾಶ ಕೊಟ್ಟಿಲ್ಲ. ತಾವು ಇಂದು ಕರೆಯದಿದ್ದರೆ ನಾನು ಎದ್ದು ಹೋಗುತ್ತಿದ್ದೆ. ತಮಗೆ ಎದುರು ಹೇಳತಕ್ಕಂತಹ ಶಕ್ತಿ ನನಗೆ ಇಲ್ಲ. ಎನ್.ಜಿ.ಇ.ಎಫ್. ಮೈಸೂರು ಲ್ಯಾಂಪ್ಸ್, ಮೈಸೂರು ಸೋಪ್ಸ್ ಅಂಡ್ ಡಿಟರ್ಜೆಂಟ್, ವಿಕ್ರಾಂತ್, ಎಂಸಿಎಫ್ ಮೈಸೂರು ಪೇಪರ್ ಮಿಲ್ ಮುಂತಾದವೆಲ್ಲಾ ಸೇರಿ ಸುಮಾರು ೯೦೦ ಕೋಟಿ ರೂಪಾಯಿ ಲಾಸ್ ಆಗಿದೆ. ನಾನು ಈ ಹಿಂದೆ ಹೇಳಿದ ಪ್ರಕಾರ ಕೇವಲ ೨೫ ಸಾವಿರ ರೂಪಾಯಿ ಲಂಚವನ್ನು ಯಾರೋ ಒಬ್ಬರು ರಾಜಕೀಯ ಪ್ರೇರಿತವಾಗಿ ಕೊಡಲಿಕ್ಕೆ ಹೋದಾಗ ಒಬ್ಬ ಹೆಣ್ಣು ಮಗಳು ಅದನ್ನು ಮುಟ್ಟಲಿಲ್ಲ......

ಉಪಾಧ್ಯಕ್ಷರು.—ಆದಷ್ಟು ಬೇಗ ಮುಗಿಸುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಎಲ್. ಆರ್ ಶಿವರಾಮೇಗೌಡ.—ಬೇಗ ಮುಗಿಸುತ್ತೇನೆ. ೯೦೦ ಕೋಟಿ ರೂಪಾಯಿ ಏನು ಲಾಸ್ ಆಗಿದೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಯಾವ್ಯಾವ ಕಂಪನಿಗಳು ಲಾಸ್ ಆಗಿವೆ, ಯಾವ್ಯಾವ ಕಂಪನಿಗಳಲ್ಲಿ ಯಾರ್ಯಾರು ಲಾಸ್ ಮಾಡಿದ್ದಾರೆ ಎಂಬುದನ್ನು ವಿಚಾರ ಮಾಡಬೇಕು. ಇವರ್ಯಾರೂ ಬಡತನದಲ್ಲಿ ಇಲ್ಲ. ಐ.ಎ.ಎಸ್. ಆಗಿ ೨೫ನೇ ವರ್ಷಕ್ಕೆ ಕಾರ್ ಹತ್ತಿ ಒಂದು ಕಂಪನಿಗೆ ಸೇರಿದರೆ, ಯಾರು ಮುಳುಗಲೀ ಬಿಡಲೀ ಯಾವ ಸರಕಾರ ಮುಳುಗಲಿ ಯಾರು ಎಲ್ಲಿಯಾದರೂ ವಿಧಾನ ಸೌಧದಲ್ಲಿಯಾದರೂ ಬಡಿದಾಡಿ, ಹೊರಗಡೆಯಾದರೂ ಬಡಿದಾಡಿ, ಇವರು ಮಾತ್ರ ಸುಖವಾಗಿ ಇರುತ್ತಾರೆ. ಅವರ್ಯಾರ ತಲೆ ಕೂದಲೂ ಕೂಡ ಬೆಳ್ಳಗಾಗಿದೆಯೋ ಎಂಬುದನ್ನು ನೋಡಿ ನಮ್ಮದೆಲ್ಲಾ ತಲೆ ಕೂದಲು ಬೆಳ್ಳಗಾಗಿದೆ ನೋಡಿ. ನಾನು ಬಹಳ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಅವರು ಅಷ್ಟು ಚೆನ್ನಾಗಿ ಇದ್ದಾರೆ ಚೆನ್ನಾಗಿ ಇರಲಿ. ಅವರು ಚೆನ್ನಾಗಿರುವುದಕ್ಕೆ ನಮ್ಮ ವಿರೋಧವೇನೂ ಇಲ್ಲ. ಕೆಲವು ಐಎಎಸ್ ಅಧಿಕಾರಿಗಳನ್ನು ಗೌಪ್ಯವಾಗಿರತಕ್ಕಂತಹ ರೂಮಿಗೆ ಕರೆಸಿ ಛೀಮಾರಿ ಹಾಕಬೇಕು. ಒಂದೂವರೆ ಲಕ್ಷ ಜನರ ಪ್ರತಿನಿಧಿ ಇರತಕ್ಕಂತಹ ಒಬ್ಬ ಶಾಸಕ ಅವರ ಹತ್ತಿರ ಹೋದರೆ, ಸರಿಯಾದ ಗೌರವ ಕೊಡತಕ್ಕಂತಹ ಶಕ್ತಿ ಕೆಲವರಿಗೆ ಇಲ್ಲ. ಇದರ ಬಗ್ಗೆ ನೀವೇನೂ ಹೆದರಬೇಕಾದುದಿಲ್ಲ. ಬ್ಯಾಲೆನ್ಸ್‌ನಲ್ಲಿ ೧೧೦-೧೧೫ ಜನರ ಮೆಜಾರಿಟಿ ಬಂದಿದ್ದರೆ ಒಂದು ರೀತಿಯಲ್ಲಿ ಹೆದರಬೇಕಾಗಿತ್ತು. ಆದರೆ ೧೭೭ ಜನರ ಬಹುಮತದಿಂದ ಆರಿಸಿ ಬಂದಿದ್ದೀರಿ. ಎಕ್ಸೈಸ್ ಲಾಬಿಯನ್ನು ಮಟ್ಟ ಹಾಕಿದಂತಹ ಕೀರ್ತಿಯನ್ನು ನೀವು ತೆಗೆದುಕೊಂಡಿರುವಾಗ......

ಶ್ರೀ ವಾಟಾಳ್ ನಾಗರಾಜ್.—ಇವರಿಗೆ ಅಲ್ಲೇ ಬಾದಿರುವುದು ಅಪಾಯ. ಎಲ್ಲರೂ ಮಂತ್ರಿಗಿರಿ ಕೇಳುತ್ತಿದ್ದಾರೆ. ೧೭೭ ಜನರ ಜೊತೆಯಲ್ಲಿ ನೀವು ಬೇರೆ ಸೇರಿಕೊಂಡಿದ್ದೀರಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಇವತ್ತು ಏನು ೯೦೦ ಕೋಟಿ ರೂಪಾಯಿ ಲಾಸ್ ಆಗಿದೆ, ಇದರ ಮಾಲೀಕರುಗಳು ಆಗಿ ಈ ಐಎಎಸ್ ಅಧಿಕಾರಿಗಳು ಇದ್ದಾರೆ ಈ ಪುಣ್ಯಾತ್ಮರು ಮಿಸ್-ಮೇನೇಜ್‌ಮೆಂಟ್ ಮಾಡಿದ್ದಾರೆ. ಹೈ ಕರಪ್ಷನ್ ನಡೆದಿದೆ. ಎಲ್ಲವನ್ನೂ ಏರ್ ಕಂಡೀಷನ್ ರೂಮಿನಲ್ಲೇ ತೆಗೆದುಕೊಂಡಿದ್ದಾರೆ. ಮನೆಯಲ್ಲಿ ಒಂದು ಹೊರಗೆ ಒಂದು ಒಳಗೆ ಒಂದು ಎಲ್ಲಾ ವ್ಯವಸ್ಥೆ ಉಂಟು. ಇಷ್ಟಾಗಿ ಇವರಿಗೆ ಇನ್‌ಕಂ ಟ್ಯಾಕ್ಸ್ ಭಯ ಇಲ್ಲ. ಸಿಬಿಐ ನವರ ಭಯ ಇಲ್ಲ.

ಯಾರಾದರೂ ಒಬ್ಬ ಅಧಿಕಾರಿ ಸಿಕ್ಕಿಕೊಂಡಿರುವುದು ಇದ್ದರೆ ಹೇಳಿ. ಇತ್ತೀಚೆಗೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ವೀರೇಂದ್ರಪಾಟೀಲರವರು ದಿಟ್ಟ ನಿಲುವನ್ನು ತೆಗೆದುಕೊಂಡು ೩-೪ ಜನ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿರುವುದನ್ನು ಬಿಟ್ಟರೆ ಬೇರೆ......

ಒಬ್ಬ ಮಾನ್ಯ ಸದಸ್ಯರು.—ಮೊನ್ನೆ ಒಬ್ಬರು ಸಿಕ್ಕಿ ಹಾಕಿಕೊಂಡಿದ್ದಾರಲ್ಲ ;

ಶ್ರೀ ಎಲ್. ಆರ್. ಶಿವರಾಮೇಗೌಡ.—ಸರಕಾರ ಇದರ ಬಗ್ಗೆ ದಿಟ್ಟ ನಿಲುವು ತೆಗೆದುಕೊಂಡು ಸೂಕ್ತ ಕ್ರಮಗಳನ್ನು ತೆಗೆದುಕೊಂಡರೆ ಓಟು ಕೊಟ್ಟಿರತಕ್ಕಂತಹ ಜನರು ನಿಮ್ಮನ್ನು ಮೆಚ್ಚುತ್ತಾರೆ. ಇವರ ಸ್ವರ್ಗ ಲೋಕ ಏನು ಇದೆ, ಇದನ್ನು ಕಡಿಮೆ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳಬೇಕು. ಈ ರಾಜ್ಯದ ಬೊಕ್ಕಸವನ್ನು ಪೂರ್ತಿ ಖಾಲಿ ಮಾಡುವುದು ಬೇಡ, ಇದಕ್ಕೆ ಸ್ವಲ್ಪ ಕಡಿವಾಣ ಹಾಕಿ. ಒಂದು ಹತ್ತು ಎಂ ಡಿ. ಗಳು ಚೇರ್ಮನ್‌ಗಳು ಏನು ಇದ್ದಾರೆ. ಇವರ ಆಸ್ತಿಗಳನ್ನು ಮುಟ್ಟು ಗೋಲು ಹಾಕಿ, ಇವರೇನೂ ಸ್ವಂತ ಮನೆಯಿಂದ ತಂದಂತಹ ಆಸ್ತಿ ಅಲ್ಲ. ಶಾಸಕರು ತಮ್ಮ ಆಸ್ತಿ ಪಾಸ್ತಿಗಳ ಬಗ್ಗೆ ಲೋಕಾಯುಕ್ತಕ್ಕೆ ವರದಿ ಒಪ್ಪಿಸಬೇಕೆಂದು ಹೇಳುತ್ತೀರಿ, ನಾವು ಬಡಪಾಯಿಗಳು, ನಮ್ಮ ಹತ್ತಿರ ಏನೂ ಇಲ್ಲ. ಅವರನ್ನು ಕೇಳಿ, ಏಕೆ ಅವರನ್ನು ಬಿಟ್ಟಿದ್ದೀರಿ, ಅವರ ಕಡೆಗೆ ನಿಮ್ಮ ಕಣ್ಣು ಹೋಗುವುದಿಲ್ಲವೇ ? ಅವರ ಮೇಲೆ ಸಮಗ್ರವಾಗಿ ತನಿಖೆ ಮಾಡಿ, ಅವರುಗಳ ಮತ್ತು ಅವರ ಹೆಂಗಸರ ಮೇಲೆ ಅವರ ಜನರ ಹೆಸರಿನಲ್ಲಿ ಆಸ್ತಿ ಮಾಡಿದ್ದಾರೆ, ಅವರನ್ನು ಮೊದಲು ಮಟ್ಟ ಹಾಕಿ.

ಶ್ರೀ ವಾಟಾಳ್ ನಾಗರಾಜ್.—ಅವರ ಮನೆ ನಾಯಿಗಳ ಹೆಸರಿನಲ್ಲೂ ಕೂಡ ಆಸ್ತಿ ಮಾಡಿದ್ದಾರೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಲಿ. ಈ ರಾಜ್ಯದಲ್ಲಿ ಯಾರು ತಪ್ಪು ಮಾಡಿದ್ದಾರೆಂಬುದನ್ನು ವಿಚಾರ ಮಾಡಲಿ. ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಬೇಕಾದರೆ ಚರ್ಚೆಯಾಗಲೀ ನಿಮ್ಮ ಸರ್ಕಾರಕ್ಕೆ ಕೀರ್ತಿ ಬರುತ್ತದೆ. ಈ ಸರಕಾರಕ್ಕೆ ಒಂದು ಹುಚ್ಚು ಇದೆ. ಎಲ್ಲಕ್ಕೂ ಐ ಎ ಎಸ್ ಅನ್ನು ಹಾಕುವುದು. ಇವತ್ತು ಲೋಕೋಪಯೋಗಿ ಇಲಾಖೆಯಲ್ಲಿ ಟೆಕ್ನಿಕಲ್ ಐಡಿಯಾ ಇರತಕ್ಕಂತಹ ಸೆಕ್ರೆಟರಿಯನ್ನು ಹಾಕಿದ್ದೀರಿ ಅದು ನಡೆಯುತ್ತಿಲ್ಲವೇ ? ಇಂಡಸ್ಟ್ರಿಯಲ್ಲಿ ಏನು ಗೊತ್ತಿಲ್ಲದ ಅಂವರೆ ಬೇರೆಯದೆಲ್ಲ ಗೊತ್ತಿರುವಂತಹವರನ್ನು ಹಾಕಿದರೆ ತೊಂದರೆಯಾಗುತ್ತದೆ. ನಮ್ಮ ಫ್ಯಾಕ್ಟರಿ ಕೆಟ್ಟಿದೆ ಬಂದು ನೋಡಿ ಎಂದು ಒಬ್ಬ ಐಎಎಸ್ ಅಧಿಕಾರಿಗೆ ಹೇಳಿದೆ.

ಈ ಫ್ಯಾಕ್ಟರಿಯನ್ನು ನಡೆಸಲು ನಾನು ೮೨ನೇ ಇಸವಿಯಲ್ಲಿ ೧೧ ಲಕ್ಷ ರೂಪಾಯಿ ಸಾಲ ತೆಗೆದುಕೊಂಡಿದ್ದೇನೆ. ವೈಟ್ ಅಂಡ್ ಬ್ಲಾಕ್ ರೆಕಾರ್ಡ್‌ನಲ್ಲಿದೆ. ೧೧ ಲಕ್ಷ ಸಾಲ ತೆಗೆದುಕೊಂಡು, ೧೬.೫೦ ಲಕ್ಷ ರಿಪೇ ಮಾಡಿದ್ದೇನೆ. ನಮ್ಮ ರಾಜ್ಯದ ವಿದ್ಯುತ್ ಯಾವ ಮಟ್ಟಕ್ಕೆ ಇದೆ ಅಂದರೆ, ಕರೆಂಟ್ ಹೋದರೆ ಮೂರು ದಿವಸ ಆದರೂ ಬರುವುದೇ ಇಲ್ಲ. ಇವರ ಕಡೆಯವರು ಅಧಿಕಾರದಲ್ಲಿ ಇದ್ದಾಗ ಬೇಕೆಂತಲೇ ಕರೆಂಟ್ ಆಫ್ ಮಾಡಿಸುತ್ತಿದ್ದರು. ಇಷ್ಟೆಲ್ಲಾ ತೊಂದರೆಗಳು ಇದ್ದರೂ ೧೬.೫೦ ಲಕ್ಷ ರೂಪಾಯಿಗಳನ್ನು ರೀಪೇ ಮಾಡಿದ್ದೇನೆ. ಬೇಕಾದರೆ ಕೆ.ಎಸ್.ಎಫ್.ಸಿ.ನಲ್ಲಿ ವಿಚಾರ ಮಾಡಿ. ಆದರೂ ಇನ್ನೂ ೭ ಲಕ್ಷ ರೂಪಾಯಿ ಸಾಲವಿದೆ. ನನ್ನ ಫ್ಯಾಕ್ಟರಿ ಲಾಸ್ ಆಗಿದೆ, ತಿರುಗಿ ಸಾಲ ಕೊಡಿ ಎಂದು ಅರ್ಜಿ ಹಾಕಿಕೊಂಡರೆ, ನೋ, ನೋ. ನೀವಿನ್ನೂ ಬಾಕಿ ಉಳಿಸಿಕೊಂಡಿದ್ದೀರಿ ಯಾವಾಗಲೋ ಈ ಸಾಲವನ್ನು ತೀರಿಸಬೇಕಾಗಿತ್ತು, ನೀವು ಸೆಕ್ಯೂರಿಟಿಯಾಗಿ ಕಟ್ಟಡ ಕೊಡಿ ಎಂದು ಕೇಳಿದ್ದಾರೆ. ನಗರದಲ್ಲಿ ನಾನು ಆಸ್ತಿ ಮಾಡಿಲ್ಲ, ನಮ್ಮಪ್ಪ ಮಾಡಿಲ್ಲ. ಹಳ್ಳಿಯಲ್ಲಿ ಆಸ್ತಿ ಮಾಡಿಕೊಂಡಿದ್ದೇವೆ. ೫೪ ಲಕ್ಷ ರೂಪಾಯಿ ಸಾಲ ಮಂಜೂರಾಗಿ ಒಂದು ವರ್ಷವಾಗಿದ್ದರೂ ಅದರಲ್ಲಿ ಒಂದು ರೂಪಾಯಿ ಡ್ರಾ ಮಾಡಿಲ್ಲ. ನನಗೆ ೩೨ ವರ್ಷಕ್ಕೆ ಕೂದಲುಗಳೆಲ್ಲಾ ಬೆಳ್ಳಗಾಗಿದೆ, ಮಂತ್ರಿಗಳೇ ನಿಮ್ಮದು ಆಗಿಲ್ಲ. ಚನ್ನಾಗಿದೆ. ನಾನು ಈ ಮಾತನ್ನು ಪ್ರಾಮಾಣಿಕವಾಗಿ ಮತ್ತು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಕೈಗಾರಿಕೆ ಪ್ರಾರಂಭ ಮಾಡುವುದು ಸುಲಭವಲ್ಲ. ಕೈಗಾರಿಕೆ ಮಾಡುವುದು ೨ನೇ ಹೆಂಡತಿ ಮದುವೆ ಆದಂಗೆ. ಆಯಮ್ಮನನ್ನು ಕಟ್ಟಿಕೊಂಡ ಮೇಲೆ ಸರಿಯಾಗಿ ನೋಡಿಕೊಳ್ಳಬೇಕು. ಮಧ್ಯದಲ್ಲಿ ಬಿಟ್ಟುಬಿಡುವುದಕ್ಕಾಗುವುದಿಲ್ಲ. ಅದೇ ಗುಜರಾತಿನವರೋ, ಮಹಾರಾಷ್ಟ್ರದವರೋ, ರಾಜಾಸ್ಥಾನದವರೋ ಇಲ್ಲವೇ ಹೆಗಡೆಗೋಲೆ ಅಂತಹವರು ನಿಮ್ಮ ಕೆ.ಎಸ್.ಎಫ್.ಸಿ.ಗೋ ನಿಮ್ಮ ಐ.ಡಿ.ಬಿ.ಐ.ಗೋ ಸಾಲ ತೀರಿಸದೆ ಹೋಗಿಬಿಡಬಹುದು. ಆದರೆ ಮಾನ ಮರ್ಯಾದೆ ಇರತಕ್ಕಂಥ ನಮ್ಮಂಥವರು ಈ ರೀತಿ ಮಾಡುವುದಕ್ಕಾಗುವುದಿಲ್ಲ. ಇದರ ಬಗ್ಗೆ ತಾವು ಬೆಳಕು ಚೆಲ್ಲಬೇಕು. ಕೈಗಾರಿಕೆಗಳ ಬಗ್ಗೆ ಅನುಭವ ಇರತಕ್ಕ ಕೈಗಾರಿಕೋದ್ಯಮಿಗಳನ್ನು ಕರೆದು ವಿಚಾರಿಸಬೇಕು. ಐ.ಎ.ಎಸ್. ಆಫೀಸರ್ಸ್ ಇದ್ದಾರಲ್ಲ, ನಮ್ಮ ಕಷ್ಟ ಹೇಳಿದರೆ ಅದನ್ನು ಕೇಳತಕ್ಕ ಸೌಜನ್ಯ ಕೂಡ ಇಲ್ಲ,

ಸಿಕ್ ಆಗಿರತಕ್ಕ ಕೈಗಾರಿಕೆಗಳನ್ನು ನೋಡತಕ್ಕ ಸೌಜನ್ಯ ಇಲ್ಲ. ನಾನು ನನ್ನ ಕೈಗಾರಿಕೆ ಲಾಸಾಗಿದೆ, ಬಂದು ನೋಡಿ ಎಂದು ಒಬ್ಬರು ಎಂ.ಡಿ, ಕರೆದಿದ್ದೆ. ಇವತ್ತು ಲಾಸ್ ಆಗಿರಬಹುದು. ಆದರೆ ೨೦೦ ಜನಕ್ಕೆ ಕೆಲಸ ಕೊಟ್ಟಿದ್ದೇನೆ. ದುಡ್ಡು ಕಟ್ಟದೇ ಇರಬಹುದು. ಈಗ ನಷ್ಟದಲ್ಲಿರಬಹುದು. ೧೨೦ ಕೆ.ವಿ. ದೂರದಲ್ಲಿದೆ. ಬಂದು ನೋಡಿ ಎಂದರೆ, ಅವರು ೩೫,೦೦೦ ಕೈಗಾರಿಕೆಗಳಿಗೆ ಸಾಲ ಕೊಟ್ಟಿದ್ದೇವೆ ಎನ್ನುವ ಮಾತನ್ನು ಹೇಳಿದ್ದು ನನ್ನ ಕಿವಿಯಲ್ಲಿದೆ ಇದಕ್ಕೆ ತಾವು ಕಡಿವಾಣ ಹಾಕಬೇಕು. ದೇವರಾಜ ಅರಸು, ಹೆಗಡೆಯವರು, ಬೊಮ್ಮಾಯಿಯವರು ಗುಂಡೂರಾಯರು ಬಂದು ಹೋದರು ಈಗ ವೀರೇಂದ್ರಪಾಟೀಲರು ಬಂದಿದ್ದಾರೆ. ಆದರೆ ಇವರು ಮಾತ್ರ ಚೇಂಜ್ ಆಗಲಿಲ್ಲ ಇವರೇ ಇದ್ದರೂ ಮೈಸೂರು ಲ್ಯಾಂಪ್ಸ್, ಅಲ್ಲಿ ಬಿಟ್ಟರೆ ವಿಕ್ರಾಂತ್, ಅದು ಬಿಟ್ಟರೆ ಸೋಪ್ಸ್ ಆಂಡ್ ಡಿಟರ್‌ಜೆಂಟ್, ಇಲ್ಲಿಯೇ ರೌಂಡ್ ಹೊಡೆಯುತ್ತಿರುತ್ತಾರೆ. ಈ ಅಧಿಕಾರಿಗಳು ಗ್ರಾಮೀಣ ಪ್ರದೇಶದ ಬಡವರ ಬಗ್ಗೆ ಅಲ್ಲಿರತಕ್ಕ ಜನರ ಕಷ್ಟದ ಬಗ್ಗೆ ಬೆಳಕನ್ನು ಚೆಲ್ಲುವಂತಾಗಬೇಕು. ಅವರಿಗೆ ಹಳ್ಳಿಯ ಜನರ ಕಷ್ಟ ಅರ್ಥವಾಗಬೇಕು. ಇಲ್ಲಿ ಏರ್‌ಕಂಡೀಷನ್ ರೂಮುಗಳಲ್ಲಿ ೫-೬ನೇ ಮಹಡಿಯಲ್ಲಿ ಕೂತು ಬೆಲ್ ಒತ್ತಿಕೊಂಡು ಕೆಲಸ ಮಾಡುತ್ತಾರಲ್ಲಾ. ಇವರಿಗೆ ನೀವು ಎಚ್ಚರಿಕೆ ಕೊಡಬೇಕು. ಬಡವರ ಬಗ್ಗೆ ಗಮನಹರಿಸುವಂತೆ ಹೇಳಬೇಕು. ನ್ಯೂ ಪ್ಯಾಕೇಜಿಂಗ್ ಸಿಸ್ಟಂ ಜಾರಿಗೆ ತಂದು, ಸಬ್ಸಿಡಿ ವಜಾ ಮಾಡಿ ಹೊಸ ವ್ಯವಸ್ಥೆ ಮಾಡಬೇಕು. ಈಗ ಯಾರು ಟರ್ಮ್ ಲೋನ್ ಕೊಡುತ್ತಾರೋ, ಅವರೇ ವರ್ಕಿಂಗ್ ಕ್ಯಾಪಿಟಲ್ ಕೂಡ ಕೊಡಬೇಕು. ಅವರೇ ಸಬ್ಸಿಡಿ ಕೊಡಬೇಕು ಆಮೇಲೆ ಸರ್ಕಾರದಿಂದ ಬರಬೇಕಾದರೆ ವಸೂಲು ಮಾಡಿಕೊಳ್ಳಲಿ ಇಲ್ಲವೇ ಬ್ಯಾಂಕ್‌ನವರೂ ಕೊಡಬೇಕಾದರೂ ವಸೂಲು ಮಾಡಿಕೊಳ್ಳಲಿ ಇವತ್ತು ಬ್ಯಾಂಕ್‌ನವರು ನಿಮ್ಮ ಹಿಡಿತದಲ್ಲಿ ಇಲ್ಲ. ಅವರು ಯಾರ ಮಾತನ್ನು ಕೇಳುವುದಿಲ್ಲ. ಹೆಮ್ಮೆಯಿಂದ ಹೇಳಬೇಕಾಗಿದೆ. ಜನಾರ್ಧನ ಪೂಜಾರಿಯವರು ಬ್ಯಾಂಕ್ ಮಂತ್ರಿಗಳಾಗಿದ್ದಾಗ ಸ್ವಲ್ಪ ಅವರಿಗೆ ಹೆದರುತ್ತಿದ್ದರು. ಅವರು ರಾಜೀನಾಮೆ ಕೊಟ್ಟ ದಿವಸ, ಪೂಜಾರಪ್ಪ ಹೋದ ಎಂದು ಪಟಾಕಿ ಹಚ್ಚಿದರು. ಅವರ ಮೇಲೆ ಕೂಡ ಕಡಿವಾಣ ಹಾಕಬೇಕು. ಇವತ್ತು ಸಾವಿರ ಕೈಗಾರಿಕೆ ಮಾಡಬೇಕಾಗಿಲ್ಲ, ಉತ್ತಮವಾಗಿರತಕ್ಕ ೫೦ ಕೈಗಾರಿಕೆಗಳನ್ನು ಪ್ರಾರಂಭ ಮಾಡಿ. ಆಗ ಟರ್ಮ್‌ಲೋನ್ ಕೊಡತಕ್ಕವರೇ ಸಬ್ಸಿಡಿ ಕೊಡಬೇಕು ನಂತರ ಸರ್ಕಾರದಿಂದ ವಸೂಲು ಮಾಡಿಕೊಳ್ಳಿ. ನಿಮಗೆ ಬುಕ್ ಅಡ್ಜಸ್ಟ್‌ಮೆಂಟ್ ಇರುತ್ತದೆ ಲೋನ್ ನಿಮಗೆ ಕಾಣುವುದಿಲ್ಲ. ಒಬ್ಬ ಮನುಷ್ಯ ಕೈಗಾರಿಕೆಯಿಂದ ೧೦,೦೦೦. ರೂಪಾಯಿ ಬರದೇ ಹೋದರೆ ಆತ ಕಣ್ಣು ಬಾಯಿ ಬಿಡುತ್ತಾನೆ. ಹೆಂಡತಿ ಮಾಂಗಲ್ಯ ತೆಗೆದುಕೊಂಡು ಹೋಗಿ ಅಡವಿಟ್ಟ ನಿದರ್ಶನಗಳೂ ಇವೆ. ಇದಕ್ಕೆ ಅವಕಾಶ ಕೊಡಬೇಡಿ. ಹೇಗಿದ್ದರೂ ಫೀಸ್ ತೆಗೆದುಕೊಳ್ಳುತ್ತೀರಿ, ಅಧಿಕಾರಿಗಳು ಕೆಲಸ ಇಲ್ಲದೆ ಬಿದ್ದಿದ್ದಾರೆ. ಅವರೇ ಬ್ಯಾಂಕ್‌ಗಳಿಂದ ಹಣ ತರಿಸಿಕೊಂಡು ಹಂಚಿಕೆ ಮಾಡಲಿ. ಯಾವ ಕಂಪನಿ ಮಾಲೀಕರು ಮೋಸ ಮಾಡುತ್ತಾರೆ. ಅವರ ಬಗ್ಗೆ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಿ. ಜೈಲಿಗೆ ಹಾಕಿ, ನಾವು ಬೇಡ ಎನ್ನುವುದಿಲ್ಲ. ಮುಖ್ಯವಾಗಿ ಇದಕ್ಕೆ ಹೊಸ ಚೈತನ್ಯ ಕೊಡಬೇಕೆಂದು ಹೇಳುತ್ತೇನೆ. ಇನ್ನು ಕೆ.ಇ.ಬಿ. ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಅದೂ ಸಹ ಈ ಕೈಗಾರಿಕೆಗೆ ಸಂಬಂಧಪಟ್ಟಂತೆ ಮಾತ್ರ ಹೇಳುತ್ತೇನೆ.

ಉಪಾಧ್ಯಕ್ಷರು.—ಈಗಾಗಲೇ ೪೦ ನಿಮಿಷ ಮಾತನಾಡಿದ್ದೀರಿ.

ಶ್ರೀ ಎಲ್. ಆರ್, ಶಿವರಾಮೇಗೌಡ.—ನಾವು ಸ್ವತಂತ್ರರು, ನಾವು ೬ ಜನರಿದ್ದೇವೆ.

ಶ್ರೀ ವಾಟಾಳ್ ನಾಗರಾಜ್.—ಇವರನ್ನು ಸ್ವತಂತ್ರರು ಎಂದು ನಾವು ಪರಿಗಣಿಸಬೇಕಾಗಿಲ್ಲ. ಇವರೆಲ್ಲಾ ಕಾಂಗ್ರೆಸ್‌ನವರು. ಆದ್ದರಿಂದ ಕಾಂಗ್ರೆಸ್ ಕೋಟಾದಲ್ಲಿ ಸಮಯ ಕೊಡಿ. ಪಕ್ಷೇತರ ನಾನೊಬ್ಬನೆ. ನನಗೆ ಹೆಚ್ಚು ಸಮಯ ಕೊಡಬೇಕೇ ಹೊರತು ಇವರು ಹೇಳುವುದನ್ನು ನಾನು ಒಪ್ಪುವುದಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಕೈಗಾರಿಕೆ ಮತ್ತು ಕೆ.ಇ.ಬಿ. ಒಂದೇ ಆದರೆ ಚಂದ, ಏಕೆಂದರೆ ಕೈಗಾರಿಕೆಗೆ ಅತ್ಯಮೂಲ್ಯವಾಗಿ ಕೆ.ಇ.ಬಿ, ಬೇಕೇ ಬೇಕು. ಇವತ್ತು ರಾಜ್ಯದಲ್ಲಿ ೬೫,೦೦೦ ಐ.ಪಿ. ಸೆಟ್‌ಗಳಿಗೆ ವಿದ್ಯುತ್ ಬೇಕೆಂದು ಜನ ಬಕಪಕ್ಷಿಗಳ ತರಹ ಕಾಯುತ್ತಾ ಕುಳಿತಿದ್ದಾರೆ ನಮ್ಮ ಸರ್ಕಾರವನ್ನು ವೀರೇಂದ್ರ ಪಾಟೀಲರ ಸರ್ಕಾರವನ್ನು ಸಾಕಷ್ಟು ಗೆಲ್ಲಿಸಿದ್ದೇವೆ, ಕೈಗಾರಿಕೆಗೆ ವಿದ್ಯುತ್ ನಿಲ್ಲಿಸಿಬಿಟ್ಟು ಅವರು ನಮಗೆ ಕರೆಂಟನ್ನು ಕೊಡುತ್ತಾರೆ ಎನ್ನತಕ್ಕಂಥ ಯೋಚನೆ ಅವರಲ್ಲಿದೆ. ೪೦ ಸಾವಿರ ಐ.ಪಿ ಸೆಟ್ಟುಗಳಿಗೆ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ ಇವತ್ತು ಕೆ.ಇ.ಬಿ. ಎಷ್ಟು ಲಾಸ್‌ನಲ್ಲಿದೆ ಅಂದರೆ ೨೫೦ ಕೋಟಿ ರೂಪಾಯಿ ಲಾಸ್‌ನಲ್ಲಿದೆ. ಬಹುಶಃ ಕೆ.ಇ.ಬಿ. ಜನರಿಗೆ ಸರ್ವಿಸ್ ಮಾಡತಕ್ಕಂಥ ಒಂದು ಸಂಸ್ಥೆ, ಅಂತಹ ಸಂಸ್ಥೆ ಲಾಸ್‌ನಲ್ಲಿದ್ದರೇನು ? ಸರ್ಕಾರದಲ್ಲಿ ಎಲ್ಲವೂ ಲಾಭದಲ್ಲಿ ನಡೆಯುವುದಕ್ಕೆ ಆಗುವುದಿಲ್ಲ. ಆದ್ದರಿಂದ ಕೈಗಾರಿಕೆಯವರ ಮೇಲೆ ಬಿಗಿ ಹಾಕಿ,

ಇಂತಹವರ ಮೇಲೆ ಸ್ವಲ್ಪ ಲಿಬರಲ್ಲಾಗಿ ರೈತರಿಗೆ ಸಹಾಯ ಮಾಡತಕ್ಕಂಥ ನಿಟ್ಟಿನಲ್ಲಿ ನೀವು ಯೋಚನೆ ಮಾಡಬೇಕು. ಇವತ್ತು ೨೨ ಪರ್ಸೆಂಟ್ ಟ್ರಾನ್ಸ್‌ಮಿಷನ್ ಲಾಸ್, ಕಳ್ಳತನ ಆಗುತ್ತಿದೆ ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಮಂತ್ರಿಗಳೆ, ನಾನು ಒಂದು ಮಾತನ್ನು ಹೇಳುತ್ತೇನೆ. ಇವತ್ತು ಕರೆಂಟ್ ಅನ್ನು ಯಾರೂ ಕದಿಯುವುದಿಲ್ಲ, ಮಿಲ್ಲಿನ ಮಾಲೀಕರು ಸಾಲ ತೆಗೆದುಕೊಂಡು ಕೈಗಾರಿಕೆಗಳನ್ನು ಪ್ರಾರಂಭ ಮಾಡಿರುತ್ತಾರಲ್ಲ ಆ ಪುಣ್ಯಾತ್ಮರು ಕದಿಯುವುದಕ್ಕೆ ಮುಂಚೆ, ನಮ್ಮಲ್ಲಿದ್ದಾರಲ್ಲ ಪುಣ್ಯಾತ್ಮರು ಅಧಿಕಾರಿಗಳು ಯಾರು ಸ್ಕ್ವಾಡ್‌ನಲ್ಲಿದ್ದಾರೋ ಅವರೇ ಹೋಗಿ ತೋರಿಸಿ ಕೊಡುತ್ತಾರೆ, ಮೀಟರ್ ಬಿಚ್ಚುವುದು ಹೇಗೆ ಎಂದು. ಇಂತಹ ವಿಚಾರಗಳನ್ನು ಸಾಕಷ್ಟು ನೋಡಿ ಜಿಲ್ಲಾ ಮಟ್ಟದಲ್ಲಿ ಇದರ ಬಗ್ಗೆ ನೀವು ಬೆಳಕು ಚೆಲ್ಲಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದ್ದೇವೆ. ಅವರೇ ರಾತ್ರಿ ಹೊತ್ತು ಮೋಟರ್ ಬೈಕ್ ಹಾಕಿಕೊಂಡು ಅಧಿಕಾರಿಗಳು ಸುತ್ತುತ್ತಾರೆ. ಯಾರ್ಯಾರ ಮಿಲ್ ಇದೆ, ಯಾರ್ಯಾರ ಕಂಪನಿ ಇದೆ, ನಾವು ಸ್ಕ್ರೂ ಲೂಸ್ ಮಾಡಿಕೊಡುತ್ತೇವೆ, ೫೦೦ ಯೂನಿಟ್ ಓಡುತ್ತಿದ್ದರೆ ೩೦೦ ಯೂನಿಟ್‌ಗೆ ಹಣ ಕೊಡಿ, ನಮಗೆ ಎಷ್ಟು ಕೊಡುತ್ತೀರಿ ನೀವು ಎಷ್ಟು ಇಟ್ಟುಕೊಳ್ಳುತ್ತೀರಿ ಎಂದು ಫಸ್ಟ್‌ಕ್ಲಾಸ್ ವ್ಯಾಪಾರ ನಡೆಯುತ್ತಾ ಇದೆ. ಈ ರೀತಿ ನಿಮ್ಮ ಅಧಿಕಾರಿಗಳು ಯಾರು ಮಾಡುತ್ತಾ ಇದ್ದಾರೆ ಅವರನ್ನು ಸಸ್ಪೆಂಡ್ ಮಾಡಬೇಡಿ, ಜೈಲಿಗೆ ಹಾಕಿ, ಆದರೆ ಅದು ಸರಿಯಾಗುವುದು. ಈ ಪ್ರಜಾತಂತ್ರದಲ್ಲಿ ನೀವು ಜೈಲಿಗೆ ಹಾಕತಕ್ಕಂಥ ವ್ಯವಸ್ಥೆ ತರದೆ ಹೋದರೆ ಈ ಲಾಸ್ ತಪ್ಪುವುದಿಲ್ಲ. ಈ ಕೈಗಾರಿಕಾ ಕ್ಷೇತ್ರ ಇಂತಹವು ಮುಂದೂ ಬರುವುದಿಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಈ ಖದೀಮರು ಇದ್ದಾರಲ್ಲ, ನಿಮ್ಮ ಇಲಾಖೆಯಲ್ಲಿ ಅವರನ್ನು ಮೊದಲು ಮಟ್ಟ ಹಾಕಿ. ಈ ರಾಜ್ಯದಲ್ಲಿ ಇವತ್ತು ೫೦ ಮಿಲಿಯನ್ ಯೂನಿಟ್ಸ್ ಕರೆಂಟ್‌ಬೇಕು. ಮಹಾರಾಷ್ಟ್ರ, ತಮಿಳುನಾಡು, ಕೇರಳ, ಆಂಧ್ರ ಮತ್ತು ಕರ್ನಾಟಕ ಇವೆಲ್ಲವೂ ಸೇರಿದರೆ ೩೨ ಮಿಲಿಯನ್ ಯೂನಿಟ್ಸ್ ವಿದ್ಯುಚ್ಛಕ್ತಿ ತಯಾರಾಗುತ್ತದೆ. ೧೮ ಮಿಲಿಯನ್ ಯೂನಿಟ್‌ಗಳು ಶಾರ್ಟೇಜ್ ಆಗುತ್ತಿದೆ. ೧೮ ಮಿಲಿಯನ್ ಯೂನಿಟ್ಸ್ ಶಾರ್ಟೇಜಾದರೆ ಈ ರಾಜ್ಯದಲ್ಲಿ ನೀವು ಇವತ್ತು ಫಸ್ಟ್‌ಕ್ಲಾಸ್ ತಾರತಮ್ಯ ಮಾಡುತ್ತಿದ್ದೀರಿ, ಇವತ್ತು ಬರೂಕ ಸ್ಟೀಲ್‌ಗೆ ನೀವು ತಾರತಮ್ಯ ಮಾಡುತ್ತಿದ್ದೀರಿ. ರೈತನಿಗೆ ತಾರತಮ್ಯ ಮಾಡುತ್ತಿದ್ದೀರಿ ಬರೂಕ ಸ್ಟೀಲ್‌ಗೆ ನಿಮ್ಮ ಹತ್ತಿರ ಬಿಗಿ ಮಾಡತಕ್ಕಂಥ ಶಕ್ತಿ ಇಲ್ಲ. ಕಾಪ್ ಸ್ಟೀಲ್‌ಗೆ ನಿಮ್ಮಲ್ಲಿ ಬಂದೋಬಸ್ತ್ ಮಾಡತಕ್ಕಂಥ ಶಕ್ತಿ ಇಲ್ಲ. ಬೃಂದಾವನ್ ಅಲೈಯನ್ಸ್‌ಗೆ ಇವತ್ತು ನೀವು ಬಿಗಿ ಮಾಡತಕ್ಕಂಥ ಶಕ್ತಿಯಿಲ್ಲ. ಯಾರಾದರೂ ಹಳ್ಳಿಯ ರೈತ ಒಂದು ಹತ್ತು ಯೂನಿಟ್ ಜಾಸ್ತಿ ಉರಿಸಿಕೊಂಡುಬಿಟ್ಟ, ಅಂದರೆ ಅವನನ್ನ ಕಿತ್ತು, ಅವನ ಮಾನ ಮರ್ಯಾದೆ ಜಾಲಾಡಿ, ಅವರನ್ನು ಹರಾಜು ಹಾಕಿ, ಬೀಗ ಹಾಕತಕ್ಕಂಥ ವ್ಯವಸ್ಥೆ ನಿಮ್ಮ ಸರ್ಕಾರದಲ್ಲಿದೆ. ಇದಕ್ಕೆ ತಾವು ಕಡಿವಾಣ ಹಾಕಬೇಕು.

ಶ್ರೀ ರಮಾನಾಥ ರೈ.—ಈ ನಮ್ಮ ವಿದ್ಯುತ್ ಶಾಕ್ ಉಂಟಲ್ಲ, ಅದು ಬಡವರಿಗೆ ಮಾತ್ರ ಹೊಡೆಯುತ್ತದೆ ಹೊರತು ಶ್ರೀಮಂತರಿಗೆ ಹೊಡೆಯುವುದಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಶರಾವತಿ ಕಟ್ಟುವಾಗ ವಿದ್ಯುಚ್ಛಕ್ತಿಯನ್ನು ಯಾರಿಗೆ ಮಾಡಬೇಕು ಎಂದು ಇದ್ದುವು, ಇವತ್ತು ಎಲ್ಲಿಂದ ತರಬೇಕು ಎನ್ನುವ ಪರಿಸ್ಥಿತಿಯಾಗಿದೆ. ಇದಕ್ಕೆ ಕಾರಣಕರ್ತರು ಯಾರು ಎನ್ನತಕ್ಕಂಥ ವಿಚಾರ ನಿಮಗೆಲ್ಲ ಗೊತ್ತೇ ಇದೆ. ಕಳೆದ ೭-೮ ವರ್ಷಗಳಿಂದ ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಸಂಪೂರ್ಣ ನಾಶವಾಗಿ ಹೋಯಿತು, ಇದಕ್ಕೆ ಗಮನ ಕೊಡಲಿಲ್ಲ. ಬರೀ ಅಗ್ಗದ ಪ್ರಚಾರಗಳಿಗೆ ಗಮನಕೊಟ್ಟು ಇದನ್ನು ಪೂರ್ಣ ಮುಗಿಸಿಬಿಟ್ಟರು. ಜ್ವಲಂತ ಸಮಸ್ಯೆಗಳ ಬಗ್ಗೆ ಯಾರೂ ಯೋಚನೆ ಮಾಡಲಿಲ್ಲ. ಇದಕ್ಕೆ ಈ ಪುಣ್ಯಾತ್ಮರು ಈ ಕಡೆ ಬಂದು ಕುಳಿತಿದ್ದಾರೆ. ಬಿಡಿ, ಈಗ ಅದರ ಬಗ್ಗೆ ನಾವು ಯೋಚನೆ ಮಾಡುವುದು ಬೇಡ. ಇವತ್ತು ಕರ್ನಾಟಕ ಪವರ್ ಕಾರ್ಪೊರೇಷನ್‌ಗೆ ೧೬೦ ಕೋಟಿ ರೂಪಾಯಿ ಇಟ್ಟಿದ್ದೀರಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಪಾಯಿಂಟ್ ಆಫ್ ಆರ್ಡರ್.

ಶ್ರೀ ಎಲ್. ಆರ್. ಶಿವರಾಮೇಗೌಡ.—ಕ್ರಿಯಾಲೋಪವೇ...

ಶ್ರೀ ಡಿ. ಬಿ. ಚಂದ್ರೇಗೌಡ.—ಹಿಂದಿನ ಸರ್ಕಾರದವರು ವಿದ್ಯುಚ್ಛಕ್ತಿ ಮುಗಿಸಿಬಿಟ್ಟರು ಎಂದು ಹೇಳುವುದು ಸುಲಭ, ಅದನ್ನು ಸಬ್‌ಸ್ಟಾನ್ಷಿಯೇಟ್ ಮಾಡಬೇಕು. That cannot just go to the records. Let him snbstantiate it, Otherwise, he should withdraw,

ಶ್ರೀ ಎಲ್. ಆರ್. ಶಿವರಾಮೇಗೌಡ.—ಅದು ಅವರ ಅಭಿಪ್ರಾಯ ಡೀಟೇಲ್ಸ್ ಕೇಳುವು ಾದರೆ ನಾನು ಕೊಡುತ್ತೇನೆ. ಅಷ್ಟು ಇಲ್ಲದೆ ನಾನು ಹೇಳುತ್ತಿಲ್ಲ, ನಾನು ಜವಾಬ್ದಾರಿಯಿಲ್ಲದೆ ಈ ಗ್ಗೆ ಮಾತನಾಡುತ್ತಾ ಇಲ್ಲ, ಈ ಸಭೆಗೆ ಬಂದು ೬ ತಿಂಗಳಾಗಿದೆ. ಮಾನ್ಯ ವಿರೋಧಪಕ್ಷದ ನಾಯಕರು ೀ ಸರ್ಕಾರ ವಿದ್ಯುಚ್ಛಕ್ತಿಗೆ ಏನೇನು ಮಾಡಿದೆ ಎನ್ನತಕ್ಕಂಥಾದ್ದನ್ನು ಕೇಳಲೀ, ನಾನು ಸಬಾಸ್ಟ್ಯಾನ್ಷಿ ನೋಟ್ ಮಾಡುತ್ತೇನೆ. ಅದಕ್ಕೆ ಅವರು ಚರ್ಚೆಗೆ ಸಿದ್ಧರಿದ್ದಾರೆ. ಕೇಳಿ ಅಧ್ಯಕ್ಷರೆ, ತಾವು ಪರ್ಮಿಷನ್ ೊಡುವುದಾದರೆ ನಾನು ಆದರ ಬಗ್ಗೆ ಹೋಗುತ್ತೇನೆ. ಇಲ್ಲದೆ ಇದ್ದರೆ ನಾನು ಆದರ ಬಗ್ಗೆ......

ಉಪಾಧ್ಯಕ್ಷರು.—ತಾವು ಮುಗಿಸಿಬಿಡಿ, ೬–೪೫ ಗಂಟೆಯಾಯಿತು. ಇನ್ನು ಲಕ್ಕಪ್ಪನವರನ್ನು ರೆಯುತ್ತೇನೆ.

SRI K. LAKKAPPA.—I would like to make a suggestion. The emands are very heavy. After he completes his speech, let us djourn the House and tomorrow we have to discuss on these emands. This is the sence of the House also.

ಶ್ರೀ ಎಲ್. ಆರ್. ಶಿವರಾಮೇಗೌಡ.—ಕೆ. ಇ. ಬಿ. ಗೆ ೧೧೦ ಕೋಟಿ ರೂಗಳನ್ನು ಈ ಹಿಂದಿ ವರು ಕೊಟ್ಟಿದ್ದರು. ಆದರೆ ಈಗ ಒಟ್ಟು ಹೆಚ್ಚು ಕಡಿಮೆ ೨೭೦ ಕೋಟಿ ರೂಪಾಯಿಗಳನ್ನು ೊಡಲಾಗಿದೆ.

೬–೪೫ ಪಿ.ಎಂ.

ಆದರೆ ಹಿಂದಿನ ಸರ್ಕಾರಗಳ ಇತಿಹಾಸ ನೋಡಿದಾಗ ಅವರು ಈ ವಿದ್ಯುತ್ ಮಂಡಲಿಗೆ ೦–೧೦೦–೧೨೦ ಕೋಟಿ ಮಾತ್ರ ಇಟ್ಟಿದ್ದರು. ಆದರಲ್ಲೂ ಸಹ ಅವರು ಖರ್ಚು ಮಾಡಿದ್ದು ಶೇಕಡ ೦, ೧೫–೨೦ ಪರ್ಸೆಂಟ್ ಮಾತ್ರ ನೀವು ಈಗ ೨೭೦ ಕೋಟಿ ರೂಪಾಯಿಗಳನ್ನು ಏನು ಇಟ್ಟಿದ್ದೀರಿ. ದರ ಜೊತೆಗೆ ಇನ್ನೂ ೧೦ ಕೋಟಿ ರೂಪಾಯಿಗಳಷ್ಟು ಹಣವನ್ನು ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿ ೇರಿಸಿ ಹೆಚ್ಚು ಖರ್ಚು ಮಾಡಲು ಪ್ರಯತ್ನ ಪಟ್ಟರೆ ಇನ್ನು ೫–೬ ವರ್ಷಗಳಲ್ಲಿ ಒಂದು ಮಟ್ಟಕ್ಕೆ ರಬಹುದು, ಇಲ್ಲದಿದ್ದರೆ ವಿದ್ಯುಚ್ಛಕ್ತಿ ಇಲ್ಲದೆ ಕೈಗಾರಿಕೆಗಳು ಸಾಯುವ ಸ್ಥಿತಿಗೆ ಬರುತ್ತದೆ. ದ್ದರಿಂದ ಈಗಲೇ ತಾವು ಕ್ರಮ ಕೈಗೊಳ್ಳಬೇಕು.

ಉಪಾಧ್ಯಕ್ಷರು.—ತಾವು ೪೫ ನಿಮಿಷ ಮಾತನಾಡಿದ್ದೀರಿ. ತಾವು ಈಗ ಮುಗಿಸಬೇಕು ಮತ್ತು ಹಕಾರ ನೀಡಬೇಕು.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮೂರು ದಿವಸಗಳಿಂದ ಬೇರೆಬೇರೆ ಇಲಾಖೆಗಳ ಮೇಲೆ ಾತನಾಡಲು ಅವಕಾಶ ಕೊಡಲಿಲ್ಲ. ಇನ್ನು ೧೦ ನಿಮಿಷದಲ್ಲಿ ಮುಗಿಸುತ್ತೇನೆ.

ಉಪಾಧ್ಯಕ್ಷಣಿಯವರು.—ನೀವು ೬–೩೦ಕ್ಕೆ ಮುಗಿಸುತ್ತೇನೆಂದು ಹೇಳಿದಿರಿ, ಇನ್ನು ೫ ನಿಮಿಷ ೊಡಿ ಎಂದು ಹೇಳುತ್ತಾ, ೧೫ ನಿಮಿಷ ಜಾಸ್ತಿ ತೆಗೆದುಕೊಂಡಿದ್ದೀರಿ, ಇನ್ನು ೨ ನಿಮಿಷದಲ್ಲಿ ಮುಗಿಸಿ.

ಶ್ರೀ ಕಾಗೋಡು ತಿಮ್ಮಪ್ಪ.—ಅವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಇನ್ನು ೧೦ ಮಿಷ ಜಾಸ್ತಿಯಾದರೂ ಚಿಂತೆ ಇಲ್ಲ, ಅವರಿಗೆ ಅವಕಾಶ ಮಾಡಿಕೊಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಹೇಳಿ ಸಾರ್, ನೀವು ಹಿರಿಯರು ನೀವು ನಮ್ಮ ರಕ್ಷಣೆಗೆ ರಬೇಕು. ನಮ್ಮ ಜಿಲ್ಲೆಯಲ್ಲಿ ಕೆ. ಇ. ಬಿ. ಯಲ್ಲಿ ದುರ್ವ್ಯವಹಾರ ನಡೆದಿದೆ. ಆದನ್ನು ಹೇಳುತ್ತೇನೆ

ಶ್ರೀ ಪಟಾಳ್‌ನಾಗರಾಜ್.—ನನಗೆ ಯಾವಾಗ ಸಮಯ ಕೊಡುತ್ತೀರೆಂಬುದನ್ನು ಹೇಳಿ.

ಉಪಾಧ್ಯಕ್ಷರು.—ಅವರು ಮೊದಲು ಮುಗಿಸಲಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ನಮ್ಮ ಜಿಲ್ಲೆಯಲ್ಲಿ ಒಂದು ದೊಡ್ಡ ಸ್ಕ್ಯಾಂಡಲ್ ಡೆದಿದೆ. ನಮ್ಮ ಜಿಲ್ಲೆಯಲ್ಲಿ ಒಂದು ಚಾಮುಂಡೇಶ್ವರಿ ಷುಗರ್ ಫ್ಯಾಕ್ಟರಿ ಇದೆ. ಅದು ಬಹಳ ೊಡ್ಡ ಆರೋಗ್ಯಕರವಾದ ಸಕ್ಕರೆ ಕಾರ್ಖಾನೆಯಾಗಿದೆ. ನಮ್ಮ ಜಿಲ್ಲೆಯಲ್ಲಿ ೪–೫ ಸಾವಿರ ಜನ ೆದ ಮೂರುನಾಲ್ಕು ವರ್ಷಗಳಿಂದ ನಮ್ಮ ಸರ್ಕಾರ ಕರೆಂಟ್ ಕೊಡುತ್ತದೆ ಎಂದು ಬಾವಿಗಳನ್ನು ಗೆಸಿ ಬಿರುಗಣ್ಣು ಬಿಟ್ಟುಕೊಂಡು ಕಾಯುತ್ತಾ ಇರುವಾಗ ಇಲ್ಲಿ ಒಂದುಸಾವಿರ ಐ.ಪಿ. ಸೆಟ್ಟುಗಳನ್ನು ಾರಾಟ ಮಾಡಿದ್ದಾರೆ. ಇದಕ್ಕಾಗಿ ಒಂದು ಸಾವಿರ ರೈತರನ್ನು ಸೆಲೆಕ್ಟ್ ಮಾಡಿದ್ದಾರೆ. ರೈತರಿಂದ ಬ್ಬನ್ನು ಬೆಳೆಸಿಕೊಳ್ಳುತ್ತಾರೆ. ಒಬ್ಬ ಖಾಸಗಿ ಮಾಲೀಕನನ್ನು ಉದ್ಧಾರ ಮಾಡಲು ಈ ಸರ್ಕಾರ ಂದುಸಾವಿರ ರೈತರ ಜುಟ್ಟನ್ನು ಹಿಡಿದುಕೊಂಡು ಹೋಗಿ ಆ ಕಂಪನಿಯವರಿಗೆ ಕೊಟ್ಟಿದ್ದಾರೆ.

ಏಳೂವರೆ ಸಾವಿರ ರೂಪಾಯಿಗಳಿಗೆ ಒಂದು ಐ. ಪಿ. ಸೆಟ್ಟು ಕೊಟ್ಟಿದ್ದಾರೆ. ಈ ಹಣವನ್ನು ಬ್ಯಾಂಕ್ ಮೂಲಕ ಕೊಡಿಸಿದ್ದಾರೆ. ಸಾಲದ ಹಣಕ್ಕೆ ಜಮೀನನ್ನು ರೈತ ಅಡಮಾನ ಇಡತಕ್ಕದ್ದು. ಈ ರೀತಿ ವ್ಯವಸ್ಥೆ ಅಲ್ಲಿ ನಡೆದಿದೆ. ೧೦ ವರ್ಷಗಳ ಕಾಲ ಆ ರೈತ ಅಲ್ಲಿ ಕಬ್ಬು ಬೆಳೆಯಬೇಕು. ಆ ಕಬ್ಬನ್ನು ಅದೇ ಕಂಪನಿಗೆ ಕೊಡಬೇಕು. ಬೇರೆ ಯಾವ ಕಂಪನಿಗೆ ಕೊಡುವಂತಿಲ್ಲ. ಈ ರಾಜ್ಯದಲ್ಲಿ ಪವರ್ ಸಪ್ಲೈ ಆ್ಯಕ್ಟ್ ಇದೆ. ಇದು ಈ ಶಾಸನ ಸಭೆ ಮಾಡಿದಂತಹ ಕಾನೂನು. ಇದು ಅಧಿಕಾರಿಗಳು ಮಾಡಿದಂತಹ ಕಾನೂನು ಅಲ್ಲ. ಈ ಆ್ಯಕ್ಟನ್ನು ಬದಲಾವಣೆ ಮಾಡತಕ್ಕ ಅಧಿಕಾರ ಈ ಶಾಸನ ಸಭೆಗೆ ಇದೆಯೇ ಹೊರತು ಇನ್ನೂ ಬೇರೆ ಯಾರಿಗೂ ಇಲ್ಲ. ಈ ಒಂದು ಕಾನೂನಿಗೆ ವಿರುದ್ಧವಾಗಿ ಇಲ್ಲಿ ವ್ಯವಹಾರಗಳು ನಡೆದಿವೆ. ಈ ಆ್ಯಕ್ಟ್‌ನಲ್ಲಿ ಸಿನಿಯಾರಿಟಿ ಮಾಡಿಕೊಂಡು ಕರೆಂಟ್ ಕೊಡಬೇಕು ಎಂದು ಇದೆ. ಈ ಆ್ಯಕ್ಟನ್ನು ಉಲ್ಲಂಘನೆ ಮಾಡಿ ೧೦೦೦ ಐ.ಪಿ. ಸೆಟ್ಟುಗಳಿಗೆ ೫೦ ಲಕ್ಷ ಡಿಪಾಸಿಟ್ ಕಟ್ಟಿಸಿಕೊಂಡು ವಿದ್ಯುತ್ ಕೊಟ್ಟಿದ್ದಾರೆ. ಆದರೆ ವಿದ್ಯುತ್ ಎಲ್ಲಿದೆ ? ನಮ್ಮ ನಾಗಮಂಗಲದಲ್ಲಿ ೨-೩ ವರ್ಷದಿಂದ ವಿದ್ಯುತ್‌ಗಾಗಿ ಕಾಯ್ದುಕೊಂಡಿರತಕ್ಕ ಸಾಮಾನ್ಯ ರೈತನ ಗತಿ ಏನಾಗಬೇಕು ಎಂಬುದನ್ನು ತಾವು ಗಮನಿಸಬೇಕು. ಇದರ ಬಗ್ಗೆ ಸಮಗ್ರವಾದ ತನಿಖೆಯಾಗಬೇಕು. ಈ ಸದನದಲ್ಲಿ ಇದರ ಬಗ್ಗೆ ಉತ್ತರ ಕೊಡಬೇಕೆಂದು ಸನ್ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇದು ಬಹಳ ದೊಡ್ಡ ಸ್ಕ್ಯಾಂಡಲ್. ಪವರ್ ಸಪ್ಲೈ ಆ್ಯಕ್ಟ್‌ಗೆ ವಿರೋಧವಾಗಿ ಇಲ್ಲಿ ವ್ಯವಹಾರ ನಡೆದಿದೆ. ದುಡ್ಡು ಕೊಡುತ್ತಾರೆಂದು ಕೆ.ಇ.ಬಿ. ಯವರು ಅಂಡೋಮಾನ್; ನಿಕೋಬಾರ್‌ಗೆ ವಿದ್ಯುತ್ತನ್ನು ಕೊಡುವುದಾದರೆ ಈ ಆ್ಯಕ್ಟ್ ಏತಕ್ಕೆ ಬೇಕು, ಇದನ್ನು ಹರಿದು ಬಿಸಾಕಿ. ಇದು ಬೇಕಾಗಿಲ್ಲ. ನೀವು ಕಾನೂನು ಪ್ರಕಾರವಾಗಿ ನಡೆಯಬೇಕು ಎಂದು ಹೇಳುವುದಾದರೆ ಕೂಡಲೇ ಇದರ ಬಗ್ಗೆ ಕಡಿವಾಣವನ್ನು ಹಾಕಬೇಕು. ಈಗಾಗಲೇ ೧೦೦ ಐ.ಪಿ. ಸೆಟ್ಟುಗಳಿಗೆ ವಿದ್ಯುತ್ ಕೊಟ್ಟಿದ್ದಾರೆ. ಅಲ್ಲಿನ ಎಲ್ಲಾ ಮೂರು ತಾಲ್ಲೂಕ್‌ಗಳ ನೌಕರರ ಹಾಗೂ ಅಧಿಕಾರಿಗಳು ಅವರಿಗೆ ಅಡ ಆಗಿಬಿಟ್ಟಿದ್ದಾರೆ. ಮೂರು ತಾಲ್ಲೂಕಿನ ಅಧಿಕಾರಿಗಳು ಆ ಮಾಲೀಕನ ಗೆಸ್ಟ್ ಹೌಸ್‌ನಲ್ಲಿ ಸೇರಿಕೊಂಡು ಅವನು ಹೇಳುವಹಾಗೆ ಕೇಳುತ್ತಿದ್ದಾರೆ. ಆ ಕಂಪನಿ ಮಾಲೀಕ ನನ್ನ ಸ್ನೇಹಿತರು ; ಅವರ ಬಗ್ಗೆ ನನಗೇನು ದುರುದ್ದೇಶ ಇಲ್ಲ. ಆದರೆ ಒಬ್ಬ ಹಳ್ಳಿಯ ರೈತ ಇವತ್ತು ೩-೪ ವರ್ಷಗಳಿಂದ ವಿದ್ಯುಚ್ಛಕ್ತಿಗಾಗಿ ಕಾಯುತ್ತಿರುವುದು ಒಂದು ಕಡೆ ಆದರೆ, ಇಲ್ಲಿ ನೀವು ಸಾರಸಗಟು ಖಾಸಗಿ ಕಂಪನಿ ಮಾಲೀಕನನ್ನು ಉದ್ಧಾರ ಮಾಡಲು ಹೊರಟಿರುವುದು ಸರಿಯೇ ಎಂದು ಕೇಳುತ್ತಿದ್ದೇನೆ, ಇದು ನ್ಯಾಯವೇ ಎಂದು ಕೇಳುತ್ತಿದ್ದೇನೆ. ಬೇರೆ ರೈತರ ತಲೆಯಮೇಲೆ ಹೊಡೆದು ಅವನಿಗೆ ಅನುಕೂಲ ಮಾಡಲು ಈ ರೈತರಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದಾರೆ. ಇದು ಸರಿಯೇ ಆದ್ದರಿಂದ ಇದರ ಬಗ್ಗೆ ಸಮಗ್ರವಾದ ತನಿಖೆಯಾಗಬೇಕು.

ಶ್ರೀ ಕಾಗೋಡುತಿಮ್ಮಪ್ಪ.—ಭೂಮಿ ಯಾರದು ?

ಶ್ರೀ ಎಲ್. ಆರ್. ಶಿವರಾಮೇಗೌಡ.—ಭೂಮಿ.—ರೈತರದ್ದು ?

ಶ್ರೀ ಕಾಗೋಡುತಿಮ್ಮಪ್ಪ.—ಬೆಳೆಯುವವರು ಯಾರು ?

ಶ್ರೀ ಎಲ್. ಆರ್. ಶಿವರಾಮೇಗೌಡ.—ರೈತ ಅದು ಬ್ಯಾಂಕಿಗೆ ಅಡ ಇಟ್ಟುಬಿಟ್ಟಿದ್ದಾರೆ. ರೈತನ ಜಂಟ್ಟನ್ನು ಆ ಕಂಪನಿ ಮಾಲೀಕರಿಗೆ ಬರೆದುಕೊಟ್ಟಿದ್ದಾರೆ. ಇನ್ನು ಹತ್ತು ವರ್ಷ ಅವನು ಏನೂ ಮಾಡಕೂಡದು ಕಬ್ಬು ಮಾತ್ರ ಬೆಳೆದು ಹತ್ತು ವರ್ಷ ಇವನಿಗೆ ಸಪ್ಲೈ ಮಾಡಬೇಕು. ಆದ್ದರಿಂದ ಇದರ ಬಗ್ಗೆ ಸಮಗ್ರವಾಗಿ ತನಿಖೆ ಮಾಡಬೇಕೆಂದು ಹೇಳುತ್ತೇನೆ. ನಾನು ಇನ್ನೂ ನಾಲ್ಕಾರು ವಿಚಾರಗಳ ಬಗ್ಗೆ ಮಾತನಾಡಬೇಕಾದ್ದು ಇತ್ತು, ಇನ್ನು ಮುಂದೆ ಇರತಕ್ಕ ಇಲಾಖಾ ಬೇಡಿಕೆಗಳಲ್ಲಿ ಎರಡು ಇಲಾಖೆಗಳ ಮೇಲೆ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟರೆ ಸಾಕು, ಹೆಚ್ಚಿಗೆ ಬೇಡ ಇಷ್ಟು ಹೇಳಲಿಕ್ಕೆ ಅವಕಾಶ ಕೊಟ್ಟಂಥ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಗೋಪಿನಾಥ ಆರ್. ಸಾಂಡ್ರ.—ಅಧ್ಯಕ್ಷರೆ, ಇವೊತ್ತು ಚರ್ಚೆಗೆ ಬಂದಂಥ ಖಾತೆಗಳು ಬಹಳ ದೊಡ್ಡ ಖಾತೆಗಳು, ನಾವು ಅವುಗಳ ಬಗ್ಗೆ ಅಭಿಪ್ರಾಯವನ್ನು ವ್ಯಕ್ತ ಮಾಡಲೇಬೇಕಾಗುತ್ತದೆ. ತಾವು ನನಗೆ ೧೦-೨೦ ನಿಮಿಷ ಅವಕಾಶ ಕೊಟ್ಟರೆ ಆಗುವುದಿಲ್ಲ. ಇದರ ಬಗ್ಗೆ ತಾವು ಬೇಕಾದರೆ ಒಂದು ದಿವಸ ಎಕ್ಸ್‌ಟೆಂಡ್ ಮಾಡಿ ಎಲ್ಲ ಸದಸ್ಯರಿಗೂ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಬೇಕೆಂದು ಹೇಳುತ್ತೇನೆ.

ಉಪಾಧ್ಯಕ್ಷರು.—ವಾಟಾಳ್ ನಾಗರಾಜರವರೇ. ಈಗ ತಾವು ಮಾತನಾಡುತ್ತೀರಾ ?

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ಈಗ ನಾನು ಪ್ರಾರಂಭ ಮಾಡುತ್ತೇನೆ.

ಉಪಾಧ್ಯಕ್ಷರು.—ಈ ಸಭೆಯು ಎಲ್ಲರ ಒಪ್ಪಿಗೆ ಇದ್ದರೆ ಇನ್ನೂ ಅರ್ಧ ಗಂಟೆ ಹೊತ್ತು ಚರ್ಚೆ ಮುಂದುವರಿಸೋಣ.

ಶ್ರೀ ಡಿ. ಬಿ. ಚಂದ್ರೇಗೌಡ.—ನಾಳೆ ಒಂದು ಗಂಟೆ ಚರ್ಚೆ ಮುಂದುವರಿಸಿ ನಂತರ ಉತ್ತರ ಕೊಡಬಹುದು ಆದ್ದರಿಂದ. ನಾಳೆಗೆ ಈ ಸಭೆಯನ್ನು ಮುಂದುವರಿಸುವುದು ಉತ್ತಮ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಇನ್ನೂ ಒಬ್ಬರೂ ಸರಿಯಾಗಿ ಮಾತನಾಡಿಲ್ಲ ನಾಲ್ಕು ಜನರು ಸರಿಯಾಗಿ ಮಾತನಾಡುವುದು ಬೇಡವೆ. ನಾಳೆ ಒಂದೆರಡು ಗಂಟೆ ಚರ್ಚೆ ಆದಮೇಲೆ ಉತ್ತರ ಕೊಡಬಹುದು, ಏನೂ ತೊಂದರೆ ಇಲ್ಲ. ಈಗ ಸಭೆ ನಡೆಸುವುದು ಬೇಡ,

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ,

ಉಪಾಧ್ಯಕ್ಷರು.—ನಾಳೆ ನಿಮಗೆ ಛಾನ್ಸ್ ಕೊಡುತ್ತೇನೆ. ಈಗ ಕುಳಿತುಕೊಳ್ಳಿ. ನಾಳೆಗೆ ಚರ್ಚೆ ಮುಂದುವರಿಸಿ ಈಗ ಸಭೆಯನ್ನು ಮುಂದೂಡುತ್ತೇನೆ. ಸಭೆಯು ಈಗ ಎದ್ದು ನಾಳೆ ಪುನಃ ೧೧ ಗಂಟೆಗೆ ಸೇರುವುದು.

(ಸದನವು ಸಂಜೆ ೬ ಗಂಟೆ ೫೨ ನಿಮಿಷಕ್ಕೆ ಮುಂಕ್ತಾಯವಾಗಿ ನಾಳೆ ದಿನಾಂಕ ೩ನೇ ಜುಲೈ ೧೯೯೦ರ ಮಂಗಳವಾರ ಪುನಃ ೧೧–೦೦ ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)